ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 10 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 204 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಗ್ಯಾರಂಟಿ ಗಿಫ್ಟ್ ಬೆನ್ನ ಹಿಂದೆಯೇ ದೇಶದ ಬೆನ್ನೆಲುಬು ರೈತರಿಗೆ ಬರೆ!

ಕೃಷಿ ಪಂಪ್‌ಸೆಟ್ ಸಬ್ಸಿಡಿ ರದ್ದು

25 ಸಾವಿರವಿದ್ದ ಸಂಪರ್ಕ ವೆಚ್ಚ ಈಗ ಎರಡು ಲಕ್ಷದವರೆಗೆ ತೆರಬೇಕಿದೆ

ಬೆಂಗಳೂರು, ನ.9(ಕೆಎಂಶಿ)–ಗೃಹ ಜ್ಯೋತಿ ನೀಡಿದ ಸಿದ್ದರಾಮಯ್ಯ ಸರ್ಕಾರ ಕೃಷಿ ಪಂಪ್‌ಸೆಟ್‌ಗಳ ಹೊಸ ವಿದ್ಯುತ್ ಸಂಪರ್ಕಕ್ಕಿದ್ದ ಸಬ್ಸಿಡಿ ರದ್ದು ಮಾಡಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ಸರ್ಕಾರ, ಅ.22 ನಂತರ ನೋಂದಾಯಿಸಲ್ಪಡುವ ಕೃಷಿ ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯವನ್ನು ರೈತರು ಸ್ವಂತ ವೆಚ್ಚದಲ್ಲಿ ಮಾಡಿಸಿಕೊಳ್ಳಬೇಕು.

ಸರ್ಕಾರದ ಈ ನಿರ್ಧಾರದಿಂದ ರೈತರು ಹೊಸ ಸಂಪರ್ಕ ಪಡೆಯಲು ಇನ್ನು ಮುಂದೆ ಎರಡು ಲಕ್ಷ ರೂ.ವರೆಗೂ ವೆಚ್ಚ ಮಾಡಬೇಕು. ಈ ಮೊದಲು 22ರಿಂದ 25 ಸಾವಿರ ರೂ.ಗೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿದ್ದರು. ಮಳೆ ಇಲ್ಲದೆ, ಬರ ಪರಿಸ್ಥಿತಿ ಒಂದೆಡೆಯಾದರೆ, ವಿದ್ಯುತ್ ಅಭಾವ ಸಣ್ಣ ಮತ್ತು ಮಧ್ಯಮ ರೈತರಿಗೆ ದೊಡ್ಡ ಶಾಕ್ ನೀಡಿದೆ. ವಿದ್ಯುತ್ ಸರಬರಾಜು



ಕಂಪನಿಗಳು 2015ರಿಂದ ಸರ್ಕಾರ ಹೊರಡಿಸಿರುವ ಆದೇಶದವರೆಗೂ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಮೂಲ ಸೌಕರ್ಯ ಕಲ್ಪಿಸಲು ಪರ್ಯಾಯ ಮಾರ್ಗ ಹಿಡಿದಿದೆ. ಅಕ್ರಮ ಸಂಪರ್ಕ ಹೊಂದಿರುವವರು ಸೋಲಾರ್ ವಿದ್ಯುತ್ ಬಳಕೆಗೆ ಆದ್ಯತೆ ನೀಡಬೇಕು. ಅಂಥವರಿಗೆ ಕೇಂದ್ರ ಸರ್ಕಾರ ಶೇ.30 ಹಾಗೂ ರಾಜ್ಯ ಸರ್ಕಾರ ಶೇ.30ರಷ್ಟು ಸಬ್ಸಿಡಿ ನೀಡುತ್ತಿತ್ತು. ಇದೀಗ ರಾಜ್ಯ ಸರ್ಕಾರ ಸಬ್ಸಿಡಿ ಪ್ರಮಾಣವನ್ನು ಶೇ.30ರಿಂದ ಶೇ.50ಕ್ಕೆ ಹೆಚ್ಚಿಸಿದೆ. ಫಲಾನುಭವಿ ರೈತರು ಶೇ.20ರಷ್ಟು ಹಣ ಸಂದಾಯ ಮಾಡಿ ಸೌರ ವಿದ್ಯುತ್ ●6ನೇ ಪುಟಕ್ಕೆ


ವಿನಾಶಕಾಲೇ ವಿಪರೀತ ಬುದ್ಧಿ! ವಿನಾಶಕಾಲೇ ವಿಪರೀತ ಆಸೆ!!



ಬೆಂಗಳೂರು,ನ.9– ಕೃಷಿ ಪಂಪ್‌ಸೆಟ್ ಹೊಸ ವಿದ್ಯುತ್ ಸಂಪರ್ಕಕ್ಕೆ ರೈತರಿಗೆ ನೀಡಲಾಗುತ್ತಿದ್ದ ಸಬ್ಸಿಡಿಗೆ ಕತ್ತರಿ ಹಾಕಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಪೊಳ್ಳು ಗ್ಯಾರಂಟಿಗಳ ಮೂಲಕ ದೀಪಾವಳಿ ಹೊತ್ತಿಗೆ ರಾಜ್ಯವನ್ನು ದಿವಾಳಿ ಅಂಚಿಗೆ ನೂಕಿರುವ ಸರ್ಕಾರ, ರೈತರ ಮೇಲೂ ವಕ್ರದೃಷ್ಟಿ ಬೀರಿದೆ. ಬರ, ವಿದ್ಯುತ್ ಕ್ಷಾಮದಿಂದ ಕಂಗೆಟ್ಟು ಹೋಗಿರುವ ಅನ್ನದಾತರಿಗೆ ಮತ್ತೊಂದು ಬರೆ ಎಳೆದು, ತಾನು ರೈತದ್ರೋಹಿ ಎಂದು ಸಾಬೀತು ಮಾಡಿಕೊಂಡಿದೆ ಎಂದು ಕಿಡಿಕಾರಿದ್ದಾರೆ.

'ಗ್ಯಾರಂಟಿಗಳಿಗೆ ಪ್ರಚಾರ ಜಾಸ್ತಿ, ಅಭಿವೃದ್ಧಿಗೆ ಹಣ ನಾಸ್ತಿ' ಎನ್ನುವ ಪರಿಸ್ಥಿತಿ ರಾಜ್ಯದಲ್ಲಿ ತಲೆದೋರಿದೆ. ರೈತರಿಗೆ ಹೊಸ ವಿದ್ಯುತ್ ಸಂಪರ್ಕಕ್ಕೆ ಕೊಡುತ್ತಿದ್ದ ಸಬ್ಸಿಡಿಗೆ ಕಾಂಗ್ರೆಸ್ ಸರಕಾರ ಕತ್ತರಿ ಹಾಕಿದೆ ಎನ್ನುವ ಸರ್ಕಾರಿ ಆದೇಶ ನೋಡಿ ನನಗೆ ತೀವ್ರ ಆಘಾತ ಉಂಟಾಯಿತು. ಕೇಡುಗಾಲಕ್ಕೆ ●6ನೇ ಪುಟಕ್ಕೆ

'ಸಪ್ತಪದಿ' ಇನ್ನು 'ಮಾಂಗಲ್ಯ ಭಾಗ್ಯ'!



ಬೆಂಗಳೂರು: ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿರುವುದನ್ನು ಕಂಡು ಬಿ.ಎಸ್.ಯಡಿಯೂರಪ್ಪ ಅವರ ಅಧಿಕಾರಾವಧಿಯಲ್ಲಿ ಬಿಜೆಪಿ ಸರ್ಕಾರವು ವಧು–ವರರ ಸರಳ ವಿವಾಹಕ್ಕಾಗಿ ಜಾರಿಗೆ ತಂದಿದ್ದ 'ಸಪ್ತಪದಿ' ಸರಳ ಸಾಮೂಹಿಕ ವಿವಾಹ ಯೋಜನೆ. ಪ್ರಸ್ತುತ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರವು ಸಪ್ತಪದಿ ವಿವಾಹ ಯೋಜನೆ ಎಂಬ ಹೆಸರನ್ನು 'ಮಾಂಗಲ್ಯ ಭಾಗ್ಯ' ಎಂದು ಬದಲಿಸಿದೆ. ಈ ಯೋಜನೆಯನ್ನು ಕುರಿತು ರಾಜ್ಯ ಮುಜರಾಯಿ ಇಲಾಖೆ ಹೊಸ ಮಾರ್ಗಸೂಚಿಗಳೊಂದಿಗೆ ಸುತ್ತೋಲೆ ಹೊರಡಿಸಿದೆ ಬಿಜೆಪಿ ಸರ್ಕಾರ 2020ರ ಜ.10ರಂದು ●6ನೇ ಪುಟಕ್ಕೆ

ಮುಡಾದಲ್ಲಿ ಅಕ್ರಮವಾಗಿ ನಿವೇಶನ ಮಂಜೂರು; ಕ್ರಯಪತ್ರ ನೀಡುತ್ತಿರುವ ಬಗ್ಗೆ ತುರ್ತು ವರದಿ ಸಲ್ಲಿಸುವಂತೆ

ಮೈಸೂರು ಡಿಸಿಗೆ ಸರ್ಕಾರ ತಾಕೀತು



ಮೈಸೂರು, ನ.9(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಕಾಯ್ದೆ ಮತ್ತು ನಿಯಮ ಉಲ್ಲಂಘಿಸಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಮಂಜೂರು ಮಾಡಿ, ಕ್ರಯಪತ್ರ ನೀಡುತ್ತಿರುವ ಬಗ್ಗೆ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ತುರ್ತಾಗಿ ವರದಿ ಸಲ್ಲಿಸುವಂತೆ ಸರ್ಕಾರ ಜಿಲ್ಲಾಧಿಕಾರಿಗಳಿಗೆ ತಾಕೀತು ಮಾಡಿದೆ.

ನವೆಂಬರ್ 4ರಂದು ಪತ್ರ ಬರೆದಿರುವ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಲತಾ, ವರದಿ ನೀಡಲು ತಪ್ಪಿದಲ್ಲಿ ದೂರುಗಳ ಕುರಿತು ಸೂಕ್ತ ಕ್ರಮ ವಹಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ಸೂಕ್ತ ಕ್ರಮ ಏಕೆ ಕೈಗೊಳ್ಳಬಾರದು ಎಂಬುದರ ಬಗ್ಗೆ ತಮ್ಮ ವರದಿ ನೀಡುವಂತೆಯೂ ನಿರ್ದೇಶಿಸಿದ್ದಾರೆ.

ಪಿ.ಎಸ್.ನಟರಾಜ್ ಅವರು ನೀಡಿರುವ ದೂರಿನಂತೆ ಮುಡಾದಲ್ಲಿ ಭೂ ಮಾಲೀಕರಿಗೆ ಪರಿಹಾರದ ಬದಲಾಗಿ ಅಭಿವೃದ್ಧಿ ಹೊಂದಿರುವ ಬಡಾವಣೆಗಳಲ್ಲಿ ಬೆಲೆ ಬಾಳುವ ನಿವೇಶನಗಳನ್ನು ನಿಯಮ ಬಾಹಿರವಾಗಿ 50:50ರ ಅನುಪಾತದಲ್ಲಿ ಹಂಚಿಕೆ ಮಾಡಿ ಅಕ್ರಮ ಲಾಭ, ಬೇನಾಮಿ ಆಸ್ತಿ ಮಾಡಿಕೊಂಡಿರುವ ಪ್ರಾಧಿಕಾರದ ಮಾಜಿ ಅಧ್ಯಕ್ಷರುಗಳು, ಹಿಂದಿನ ಆಯುಕ್ತರು, ಈಗಿನ ಆಯುಕ್ತರು, ವಿಶೇಷ ಭೂ ಸ್ವಾಧೀನಾಧಿಕಾರಿಗಳು ಹಾಗೂ ವಿಶೇಷ ತಹಶೀಲ್ದಾರ್‌ಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಲಾಗಿತ್ತು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಇದು ಗಂಭೀರ ಆರೋಪವಾಗಿದ್ದು, ಇದುವರೆಗೂ ತಮ್ಮಿಂದ ಯಾವುದೇ ವರದಿ ಸರ್ಕಾರಕ್ಕೆ ಬಂದಿಲ್ಲ. ಅಲ್ಲದೆ, ಕೆ.ಕೃಷ್ಣ ಎಂಬುವರು ಅಕ್ಟೋಬರ್ 11ರಂದು ನೀಡಿರುವ ದೂರಿನಲ್ಲಿ ●9ನೇ ಪುಟಕ್ಕೆ

ರಾತ್ರಿ 8ರಿಂದ 10 ಗಂಟೆವರೆಗೆ ಮಾತ್ರ ಹಸಿರು ಪಟಾಕಿ ಸಿಡಿಸಲು ಅವಕಾಶ



ಮೈಸೂರು, ನ.9(ಆರ್‌ಕೆ)–ರಾತ್ರಿ 8ರಿಂದ 10 ಗಂಟೆವರೆಗೆ ಮಾತ್ರ ಹಸಿರು ಪಟಾಕಿಗಳನ್ನು ಸಿಡಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸುಪ್ರೀಂಕೋರ್ಟ್ ಆದೇಶದನ್ವಯ ವಿವಿಧ ಬಗೆಯ ಪಟಾಕಿಗಳನ್ನು ಸಿಡಿಸುವುದರಿಂದ ಉಂಟಾಗುವ ಶಬ್ದ ಹಾಗೂ ವಾಯುಮಾಲಿನ್ಯ ನಿಯಂತ್ರಿಸಲು, ಸಾರ್ವಜನಿಕ ಆಸ್ತಿ ಮತ್ತು ಪ್ರಾಣ ಸಂರಕ್ಷಣೆ ದೃಷ್ಟಿಯಿಂದ ಹಸಿರು ಪಟಾಕಿ ಹೊರತುಪಡಿಸಿ ಉಳಿದ ಇನ್ನಿತರ ಪಟಾಕಿಗಳ ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಿದೆ ಎಂದು ತಿಳಿಸಿದ್ದಾರೆ. ಹಸಿರು ಪಟಾಕಿಗಳು ಮತ್ತು ಪ್ಯಾಕೆಟ್ ಮೇಲೆ ಚಿಹ್ನೆ ಹಾಗೂ ಕ್ಯೂಆರ್ ಕೋಡ್ ಇರುತ್ತದೆ. ಆ ಚಿಹ್ನೆ ಇಲ್ಲದ ಯಾವುದೇ ಪಟಾಕಿ ಹಸಿರು ಪಟಾಕಿಯಾಗಿರುವುದಿಲ್ಲ.

ನಿಶ್ಶಬ್ದ ವಲಯಗಳೆಂದು ಘೋಷಿಸಲ್ಪಟ್ಟಿರುವ ಆಸ್ಪತ್ರೆ, ಶಾಲೆ, ಪ್ರಾರ್ಥನಾ ಮಂದಿರಗಳ ಸುತ್ತ ಯಾವುದೇ ರೀತಿಯ ಶಬ್ದ ಉಂಟು ಮಾಡುವ ಪಟಾಕಿ ಹಾಗೂ ಸಿಡಿಮದ್ದುಗಳ ಬಳಕೆಯನ್ನು ನಿಷೇಧಿಸಲಾಗಿದೆ.

ಬೆಂಗಳೂರು–ಮೈಸೂರು ನಡುವೆ ನಾಲೆಡ್ಜ್ ಹೆಲ್ತ್ ಸಿಟಿ

● ಸರ್ಕಾರದ ಮಹತ್ವದ ನಿರ್ಧಾರ ● 15ಕ್ಕೂ ಅಧಿಕ ವಿಶ್ವ ಖ್ಯಾತ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆ ಸ್ಥಾಪನೆ ● ಸದ್ಯದಲ್ಲೇ ಈ ಸಂಬಂಧ ಕೈಗಾರಿಕಾ ಸಚಿವರ ನೇತೃತ್ವದಲ್ಲಿ ಗಣ್ಯಾತಿಗಣ್ಯರ, ತಜ್ಞರ ಸಭೆ



ಬೆಂಗಳೂರು, ನ.9(ಕೆಎಂಶಿ)– ಬೆಂಗಳೂರು–ಮೈಸೂರು ನಗರಗಳ ನಡುವೆ ನಾಲೆಡ್ಜ್ ಹೆಲ್ತ್ ಸಿಟಿ (ಆರೋಗ್ಯ ಜ್ಞಾನ ನಗರ) ಸ್ಥಾಪಿಸಲು ಸರ್ಕಾರ ಮುಂದಾಗಿದೆ.

ವಿಶ್ವದ ಖ್ಯಾತ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳು ಒಂದೇ ಕೇಂದ್ರದಲ್ಲಿ ನೆಲೆಯೂರಲಿವೆ.

ಅರಮನೆ ನಗರಿ ಮತ್ತು ಮಾಹಿತಿ ತಂತ್ರಜ್ಞಾನ ನಗರದ ನಡುವೆ ಉತ್ತಮ ರಸ್ತೆ, ರೈಲು, ವಿಮಾನ ಸಂಪರ್ಕ ಹಾಗೂ ರಾಜಧಾನಿ ಜೊತೆಗೆ ಚೆನ್ನೈ–ಪುಣೆ ಕೈಗಾರಿಕಾ ಕಾರಿಡಾರ್‌ಗೆ ಸಮೀಪ ಇರುವುದರಿಂದ ಇದನ್ನು ಸ್ಥಾಪಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿ ಒಂದು ಸ್ಥಳ ಸಮೀಕ್ಷೆ ನಡೆಸಲಾಗಿತ್ತು. ಹೆಚ್.ಡಿ.ಕುಮಾರಸ್ವಾಮಿ ಅಧಿಕಾರದಲ್ಲಿದ್ದಾಗ ಉಪ ನಗರ ಸ್ಥಾಪನೆಗಾಗಿ ಈ ಅವಳಿ ನಗರದ ನಡುವೆ 10 ಸಾವಿರ ಎಕರೆ ಭೂಮಿ ಗುರುತಿಸಿ, ಸ್ವಾಧೀನಕ್ಕೆ ಆದೇಶ ಮಾಡಿದ್ದರು. ಈ ಸ್ಥಳದಲ್ಲಿ ಮೊದಲ ಹಂತದಲ್ಲಿ ಎರಡು ಸಾವಿರ ಎಕರೆ ಭೂಮಿ ಬಳಸಿಕೊಂಡು ನಂತರ 10 ಸಾವಿರ ಎಕರೆವರೆಗೆ ವಿಸ್ತರಣೆ ಮಾಡುವ ಅವಕಾಶ ಕಲ್ಪಿಸಲಾಗಿತ್ತು.

ಜ್ಞಾನ ಆರೋಗ್ಯ ನಗರದಲ್ಲಿ ವಿಶ್ವದ 15ಕ್ಕೂ ಹೆಚ್ಚು ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ತಲೆ ಎತ್ತಲಿದ್ದು, ಈ ಸಂಬಂಧ ಉನ್ನತ ಶಿಕ್ಷಣ ಸಚಿವ ಎಂ.ಬಿ.ಪಾಟೀಲ್ ಅವರು ಗಣ್ಯ ಉದ್ಯಮಿಗಳು, ವೈದ್ಯರು, ಶಿಕ್ಷಣ ತಜ್ಞರು ಮತ್ತಿತರರ ಮಹತ್ವದ ದುಂಡು ಮೇಜಿನ ಸಭೆಯನ್ನು ಶೀಘ್ರವೇ ನಡೆಸಲಿದ್ದಾರೆ


ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಸಚಿವರು ಭಾಗವಹಿಸಲಿದ್ದಾರೆ. ಇವರಲ್ಲದೆ ಖ್ಯಾತನಾಮರಾದ ಕ್ರಿಸ್ ಗೋಪಾಲಕೃಷ್ಣನ್, ಡಾ.ದೇವಿ ಶೆಟ್ಟಿ, ಗೀತಾಂಜಲಿ ಕಿರ್ಲೋಸ್ಕರ್, ಪ್ರಶಾಂತ್ ಪ್ರಕಾಶ್, ಮಣಿಪಾಲ್ ●6ನೇ ಪುಟಕ್ಕೆ

ಮೈಸೂರು ಲಲಿತಮಹಲ್ ಪ್ಯಾಲೆಸ್‌ಗೆ

ಸದ್ಯದಲ್ಲೇ ನವೀಕರಣ ಭಾಗ್ಯ

ಪಾರಂಪರಿಕ ತಜ್ಞರಿಂದ ಸರ್ಕಾರಕ್ಕೆ 38 ಕೋಟಿ ವೆಚ್ಚದ ಅಂದಾಜು ಪಟ್ಟಿ ಸಲ್ಲಿಕೆ

ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚಿಸಿ, ಅನುಮೋದನೆ ಪಡೆದ ನಂತರ ಕಾಮಗಾರಿ ಆರಂಭ



ಬಾಪುಲಿಂಗರಾಜ್ ಅರಸ್

ಮೈಸೂರು, ನ.9– ನವೋದಯ ವಾಸ್ತು ಶಿಲ್ಪದಲ್ಲಿ ಶ್ವೇತವರ್ಣದಿಂದ ಕಂಗೊಳಿಸುವ, ಚಾಮುಂಡೇಶ್ವರಿ ನೆಲೆವೀಡು ಚಾಮುಂಡಿಬೆಟ್ಟದ ತಪ್ಪಲಲ್ಲಿ ಮೈಸೂರು ನಗರಕ್ಕೆ ಮುಕುಟಪ್ರಾಯವಾಗಿರುವ ಲಲಿತಮಹಲ್ ಪ್ಯಾಲೆಸ್‌ಗೆ ಸದ್ಯದಲ್ಲೇ ನವೀಕರಣ ಭಾಗ್ಯ ಒದಗಿ ಬರಲಿದೆ. ಅಂಬಾವಿಲಾಸ ಅರಮನೆ ಬಿಟ್ಟರೆ ಅತೀ ಸುಂದರ ಎರಡನೇ ದೊಡ್ಡ ಅರಮನೆ ಅಂದರೆ ಅದು ಲಲಿತ ಮಹಲ್ ಪ್ಯಾಲೆಸ್. ಆದರೆ, ಇಂತಹ ಅತ್ಯದ್ಭುತ ಅರಮನೆ ಇಂದು ಸೊರಗಿ ತನ್ನ ಗುಣಮಟ್ಟ, ಅಂದ ಕಳೆದುಕೊಳ್ಳುತ್ತಿದೆ. ಸೂಕ್ತ ನಿರ್ವಹಣೆ



ಇಲ್ಲದ ಕಾರಣ ನೈಪುಣ್ಯಗಾರರು ಮಾಡಿರುವ ಕುಸುರಿ ಗಾರೆ ಉದುರಿ ಬೀಳುತ್ತಿದೆ. ಚಾವಣಿಯ ಗಾರೆ ಕುಸಿದು ಬೀಳುತ್ತಿದೆ. ಶಿಥಿಲಾವಸ್ಥೆಯಿಂದ ಕಟ್ಟಡದ ಶಕ್ತಿ ಕುಂದುತ್ತಿದೆ ಎಂಬ ಗಂಭೀರತೆ ಅರಿತಿರುವ ಸರ್ಕಾರ ಕೊನೆಗೂ ಲಲಿತ ಮಹಲ್ ಪ್ಯಾಲೆಸ್‌ನ್ನು ನವೀಕರಿಸಲು ಮುಂದಾಗಿದೆ. ಇದಕ್ಕಾಗಿ 38 ಕೋಟಿ ರೂ. ಅಂದಾಜು ಪಟ್ಟಿ ತಯಾರಿಸಲಾಗಿದೆ. ಅಲ್ಲದೆ ಪಾರಂಪರಿಕ ಶೈಲಿಯ ಸೊಬಗಿಗೆ ಧಕ್ಕೆ ಆಗದಂತೆ ಯಾವ ರೀತಿ ನವೀಕರಣ ಮಾಡಬೇಕೆಂದು ತಜ್ಞರಿಂದ ವರದಿ ಕೂಡ ಪಡೆಯಲಾಗಿದೆ. ಪಕ್ಷಿನೋಟದಲ್ಲಿ ಮೈಸೂರು ನಗರವನ್ನು ವೀಕ್ಷಿಸಿದರೆ ಲಲಿತಮಹಲ್ ಪ್ಯಾಲೆಸ್ ಅತ್ಯಾಕರ್ಷಿಸುತ್ತದೆ. ಮೈಸೂರಿನ ಪೂರ್ವ ಭಾಗದಲ್ಲಿ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಲಲಿತ ಮಹಲ್ ಪ್ಯಾಲೆಸ್ ಕಣ್ಮನ ಸೆಳೆಯುತ್ತದೆ. ಅಂಬಾವಿಲಾಸ ಅರಮನೆಯ ಜೊತೆಗೆ ಮತ್ತೊಂದು ಅರಮನೆಯನ್ನು ನಿರ್ಮಾಣ ●6ನೇ ಪುಟಕ್ಕೆ





ವೀರಶೈವ ಸಮುದಾಯದಿಂದಲೂ ಹಿಂದುಳಿದ ವರ್ಗಗಳ ಆಯೋಗದ ವರದಿಗೆ ವಿರೋಧ

● ಹಾಲಿ ಕಾಂತರಾಜ್ ಆಯೋಗದ ವರದಿ ಅವೈಜ್ಞಾನಿಕ ● ಮನೆ ಮನೆಗೆ ಭೇಟಿ ನೀಡಿ ವೈಜ್ಞಾನಿಕ ಸಮೀಕ್ಷೆ ನಡೆಸಲು ಆಗ್ರಹ ● ಒಕ್ಕಲಿಗ ಸಮುದಾಯದ ವಿರೋಧದ ಬೆನ್ನಲ್ಲೇ ಮತ್ತೊಂದು ಪ್ರಬಲ ವರ್ಗದ ವಿರೋಧ



ಬೆಂಗಳೂರು, ನ.9(ಕೆಎಂಶಿ)– ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಒಕ್ಕಲಿಗ ಸಮುದಾಯ ವಿರೋಧ ಮಾಡಿದ ಬೆನ್ನಲ್ಲೇ ವೀರಶೈವ ಸಮುದಾಯವೂ ಅದೇ ಹಾದಿಯನ್ನು ತುಳಿದಿದೆ.

ಕಾಂತರಾಜ್ ಅಧ್ಯಕ್ಷರಾಗಿದ್ದ ಹಿಂದುಳಿದ ವರ್ಗಗಳ ಆಯೋಗದ ವರದಿ ಅವೈಜ್ಞಾನಿಕವಾಗಿದೆ. ಅಲ್ಲದೆ, ಲೋಪ–ದೋಷಗಳಿಂದ ಕೂಡಿದ್ದು, ಅದನ್ನು ಸ್ವೀಕರಿಸಬಾರದು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಜಾತಿಗಣತಿ ಅಗತ್ಯವಿದ್ದರೆ ಮತ್ತೊಮ್ಮೆ ಮನೆ ಮನೆಗೆ ಭೇಟಿ ನೀಡಿ, ವೈಜ್ಞಾನಿಕ ಸಮೀಕ್ಷೆ ನಡೆಸಿ ವರದಿ ಪಡೆದುಕೊಳ್ಳಬೇಕು. ನಾವು ಜಾತಿ ಗಣತಿ ವಿರೋಧಿಗಳಲ್ಲ. ಆದರೆ, ಸರ್ಮಪಕ ಹಾಗೂ ವಾಸ್ತವ ಸಂಗತಿಗಳಿಂದ ಕೂಡಿರಬೇಕು ಎಂದು ಸಮಿತಿ ಅಧ್ಯಕ್ಷ ಹಾಗೂ ಆಡಳಿತ ಪಕ್ಷದ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಗೋಡೆಗಳ ನಡುವೆ ಕುಳಿತು ಸಿದ್ಧಪಡಿಸಿರುವ ವರದಿಯನ್ನು ಒಪ್ಪಲು ಸಾಧ್ಯವಿಲ್ಲ. ಆಧಾರ್ ಕಾರ್ಡ್ ಅನ್ನು ಆಧಾರವಾಗಿಟ್ಟುಕೊಂಡು ಮತ್ತೆ ಸಮೀಕ್ಷೆ ನಡೆಸಬೇಕು ಎಂದು ಅವರು ಸಲಹೆ ಮಾಡಿದ್ದಾರೆ. ಜಾತಿ ಗಣತಿ ವರದಿ ಈಗಾಗಲೇ ಎಂಟು ವರ್ಷಗಳಷ್ಟು ಹಳೆಯದಾಗಿದ್ದು, ನ್ಯೂನತೆಗಳಿಂದ ಕೂಡಿದೆ. ನ್ಯೂನತೆಗಳಿರುವ ಕಾರಣ ಹೊಸದಾಗಿ ಹಾಗೂ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಬೇಕು. ಸಕಲ ಜಾತಿ, ಜನಾಂಗಗಳಿಗೆ ಲೇಸನ್ನೇ ಬಯಸುವ ಸಮಾಜ ವೀರ ಶೈವ–ಲಿಂಗಾಯಿತ ಸಮುದಾಯವಾಗಿದೆ. ಎಲ್ಲರ ಒಳಿತನ್ನು ಬಯಸುವುದು ಸಮುದಾಯದ ಗುರಿ ಎಂದಿದ್ದಾರೆ.


ಜಾತಿ ಗಣತಿ ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸಿಲ್ಲ. ಹಲವರ ಮನೆಗಳಿಗೆ ಭೇಟಿ ನೀಡದೆ, ವರದಿ ಸಿದ್ಧಪಡಿಸಲಾಗಿದೆ ಎಂಬ ದೂರುಗಳಿವೆ.

ಸಮೀಕ್ಷೆಯಲ್ಲಿ ವೀರಶೈವ–ಲಿಂಗಾಯಿತ ಸಮುದಾಯ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ ಎಂಬ ಮಾಹಿತಿ ಇದೆ. ಇದರಿಂದ ಸಮಾಜಕ್ಕೆ ತೀವ್ರ ಸ್ವರೂಪದ ನಷ್ಟವಾಗಲಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಸರ್ಕಾರ ಮತ್ತೊಮ್ಮೆ ಈ ಬಗ್ಗೆ ವಿವೇಚನಾಯುಕ್ತವಾಗಿ ಪರಾಮರ್ಶಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ ಎಂದರು.



ಮೈಸೂರಿನ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಆಗಮಿಸಿದ್ದ ಮಂತ್ರಾಲಯ ಶ್ರೀ ಕ್ಷೇತ್ರದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದ ಅವರ ಅವಗಾಹನೆಗೆ ಶ್ರೀ ಗುರುರಾಯರ ಆರಾಧನೆ ಮಹೋತ್ಸವದ ಅಂಗವಾಗಿ 'ಮೈಸೂರು ಮಿತ್ರ'ನಲ್ಲಿ ಪ್ರಕಟವಾದ ವಿಶೇಷ ಲೇಖನವನ್ನು ಅಂಕಣಕಾರ ನಂ.ಶ್ರೀಕಂಠಕುಮಾರ್ ಅವರು ಅರ್ಪಿಸಿ, ಆಶೀರ್ವಾದ ಪಡೆದರು. ಈ ವೇಳೆ ಕೆ.ಆರ್. ಸತ್ಯನಾರಾಯಣ ಉಪಸ್ಥಿತರಿದ್ದರು.

ನ.12, ವಿಶೇಷ 'ಸ್ವಾತಿ' ಪೂಜೆ



ಮೈಸೂರು,ನ.9–ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನ.12ರಂದು ಭಾನುವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊ. 9342188 323, 7598832271 ಸಂಪರ್ಕಿಸಬಹುದು.



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರನ್ನು ಸನ್ಮಾನಿಸಲಾಯಿತು. ಮಹಾಸಭಾ ಗೌರವಾಧ್ಯಕ್ಷ, ಸಾಹಿತಿ ಡಾ.ಸಿಪಿಕೆ, ರಾಜ್ಯಾಧ್ಯಕ್ಷ ಎನ್.ಬೆಟ್ಟೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಇ.ಸಿ.ನಿಂಗರಾಜಗೌಡ, ಉಪಾಧ್ಯಕ್ಷೆ ಲಕ್ಷ್ಮೀದೇವಿ, ಕೋಶಾಧ್ಯಕ್ಷ ಎಂ.ಎನ್. ಚಂದ್ರಶೇಖರ್, ಗೌರವ ಸಲಹೆಗಾರ ಡಾ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಚಾಲನೆ



ಮೈಸೂರು, ನ.9(ಜಿಎ)–ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾಯತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದೈಹಿಕ ಶಿಕ್ಷಣ ವಿಭಾಗದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಪ್ರೌಢಶಾಲಾ ವಿಭಾಗದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಬದುಕನ್ನು ರೂಪಿಸಿಕೊಳ್ಳಲು ಶಾಲೆಗೆ, ಪೋಷಕರಿಗೆ, ರಾಜ್ಯ, ದೇಶಕ್ಕೆ ಕೀರ್ತಿ ತರುವಂತಹ ಎಲ್ಲ ಅವಕಾಶಗಳು ಒಬ್ಬ ಕ್ರೀಡಾಪಟುವಿಗೆ ಇರುತ್ತದೆ. ಒಬ್ಬ ಉತ್ತಮ ಕ್ರೀಡಾಪಟು ಬೆಳೆದರೆ ದೇಶಕ್ಕೆ ದೊಡ್ಡ ಕೀರ್ತಿ ಬರುತ್ತದೆ. ಆ ಕ್ರೀಡಾಪಟುಗೆ ರಾಷ್ಟ್ರದಾದ್ಯಂತ ಅಪಾರವಾದ ಗೌರವ ಸಿಗುತ್ತದೆ. ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸಿಕೊಳ್ಳಲು ಕ್ರೀಡೆ ಸಹಕಾರಿಯಾಗಿದೆ ಎಂದರು.

ಮೈಸೂರಿನ ಭಾರತ ಸೇವಾದಳ, ಭಾರತೀಯ ವಿದ್ಯಾಭವನ, ಸದ್ವಿದ್ಯಾ ಶಾಲೆ, ಮರಿಮಲ್ಲಪ್ಪ ಶಾಲೆ ಹಾಗೂ ಜಿಲ್ಲೆಯ ವಿವಿಧ ತಾಲೂಕಿನಿಂದ ಕ್ರೀಡಾಕೂಟಕ್ಕೆ ಆಗಮಿಸಿದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಥ ಸಂಚಲನ ನಡೆಸಿದರು.

ಈ ವೇಳೆ ಗಣ್ಯರು ಕ್ರೀಡಾಜ್ಯೋತಿ ಸ್ವೀಕರಿಸಿದರು. ನಂತರ ಕ್ರೀಡಾಪಟುಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಆಡಳಿತ) ಉಪನಿರ್ದೇಶಕ ಎಚ್.ಕೆ.ಪಾಂಡು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಸಿದ್ದರಾಜು, ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಬಿ. ಅರುಣ್‌ಕುಮಾರ್, ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪಿ.ಮಹದೇವಯ್ಯ, ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ರಾಜೇಂದ್ರ ಸೇರಿದಂತೆ ಹಲವಾರು ದೈಹಿಕ ಶಿಕ್ಷಕರು ಪಾಲ್ಗೊಂಡಿದ್ದರು.

ಜನ, ವಾಹನ ಸಂಚಾರವಿಲ್ಲದೆ ಹಾಳುಕೊಂಪೆಯಾಗಿದ್ದ ರಸ್ತೆ ಈಗ ಅತ್ಯಾಧುನಿಕ ಸೌಕರ್ಯವುಳ್ಳ ಮಿನಿ ಮಾರ್ಕೆಟ್!





● ಮೋಹನ್ ಕಾಯಕ

ಮೈಸೂರು, ನ.9– ಜನ, ವಾಹನ ಸಂಚಾರವಿಲ್ಲದೆ ಹಾಳುಕೊಂಪೆಯಾಗಿದ್ದ ರಸ್ತೆಯಿಂದು ನೂರಾರು ಬೀದಿಬದಿ ವ್ಯಾಪಾರಿಗಳ ಜೀವನ ನಿರ್ವಹಣೆಯ ದಾರಿಯಾಗಿ ರೂಪುಗೊಂಡಿದೆ...!

ಮೈಸೂರು ನಗರಪಾಲಿಕೆ ವಾರ್ಡ್ ನಂ.14ರ ವ್ಯಾಪ್ತಿಯ ಉದಯಗಿರಿ ನೆಹರು ಪಾರ್ಕ್ ಹಿಂಭಾಗದಲ್ಲಿರುವ ಪಿ ಅಂಡ್ ಟಿ ಕ್ವಾಟ್ರಸ್ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಹಾಳುಕೊಂಪೆಯಾಗಿದ್ದ ಈ ತುಂಡು ರಸ್ತೆಯನ್ನೇ(ಸುಮಾರು 100–150 ಮೀಟರ್ ಉದ್ದದ ರಸ್ತೆ) ಅತ್ಯಾಧುನಿಕ ಸೌಕರ್ಯವುಳ್ಳ ಮಿನಿ ಮಾರುಕಟ್ಟೆಯನ್ನಾಗಿ ರೂಪುಗೊಳಿಸಲಾಗಿದೆ.

ಅಂದಾಜು 96 ಲಕ್ಷ ರೂ.ವೆಚ್ಚದಲ್ಲಿ ಬೀದಿಬದಿ ವ್ಯಾಪಾರಿಗಳ ವಲಯ(ಸ್ಟ್ರೀಟ್ ವೆಂಡರ್ ಜೋನ್) ನಿರ್ಮಾಣ ಬಹುತೇಕ ಪೂರ್ಣಗೊಂಡಿದ್ದು, ಒಂದೆರಡು ತಿಂಗಳಲ್ಲೇ ಉದ್ಘಾಟನೆಗೊಳ್ಳಲಿದೆ. ರಸ್ತೆಬದಿಯಲ್ಲಿ, ಎಲ್ಲೆಂದರಲ್ಲಿ ವ್ಯಾಪಾರ ಮಾಡುತ್ತಾ ಜೀವನ ನಿರ್ವಹಣೆಗೆ ಹೆಣಗಾಡುವ ವ್ಯಾಪಾರಿಗಳಿಗೆ ಅಗತ್ಯ ಮೂಲ ಸೌಕರ್ಯದೊಂದಿಗೆ ಶುಚಿತ್ವ ಹಾಗೂ ಸುರಕ್ಷಿತ ವ್ಯಾಪಾರಕ್ಕೆ ಸುಸಜ್ಜಿತ ಸ್ಥಳ ನೀಡುವ ವಿನೂತನ ಯೋಜನೆ ಸದ್ಯದಲ್ಲಿಯೇ ಸಾಕಾರಗೊಳ್ಳಲಿದೆ.

ವರ್ಷದ ಹಿಂದೆ ಕಸದ ರಾಶಿಯಿಂದ ತುಂಬಿದ್ದು, ಗಬ್ಬೆದ್ದು ನಾರುತ್ತಿದ್ದ ಈ ರಸ್ತೆಗೆ ಹೊಸ ರೂಪ ನೀಡಲಾಗಿದ್ದು, ರಸ್ತೆ ಇಂದು ಮಾರುಕಟ್ಟೆ ವಲಯವಾಗಿ ಬದಲಾವಣೆಯಾಗಿದೆ. ಸುಮಾರು 5X5 ಸುತ್ತಳತೆಯ 100 ಮಳಿಗೆಗಳನ್ನು ನಿರ್ಮಿಸಿದ್ದು, ಗ್ರಾಹಕರ ಅನುಕೂಲಕ್ಕೆ ಪ್ರತ್ಯೇಕ ಶೌಚಾಲಯ, ಪಾರ್ಕಿಂಗ್ ಹಾಗೂ ಮನರಂಜನಾ ಸ್ಥಳದ ವ್ಯವಸ್ಥೆಯನ್ನು ಮಾಡಲಾಗಿದೆ. ಹಾಗೆಯೇ ರಾತ್ರಿ ವೇಳೆ ಜನರ ಆಕರ್ಷಣೆಗಾಗಿ 10ಕ್ಕೂ ಹೆಚ್ಚು ಪಾರಂಪರಿಕ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಅಪಘಾತ, ಕಿರಿಕಿರಿ ತಪ್ಪಿಸುವ ಪ್ರಯತ್ನ: ಬೀದಿ–ರಸ್ತೆ ಬದಿಯಲ್ಲಿ ಹಣ್ಣು–ತರಕಾರಿ, ಫಾಸ್ಟ್ ಫುಡ್ ಸೇರಿದಂತೆ ಇನ್ನಿತರೆ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳಿಂದಾಗುವ ಆಕಸ್ಮಿಕ ಅಪಘಾತಗಳು, ಪಾದಚಾರಿಗಳಿಗಾಗುವ ಕಿರಿಕಿರಿ ತಪ್ಪಿಸುವ ಪ್ರಯತ್ನ ಇದಾಗಿದೆ. ರಸ್ತೆಬದಿ ಧೂಳು, ಚರಂಡಿ ದುರ್ವಾಸನೆ, ವಾಹನಗಳ ದಟ್ಟಣೆ ನಡುವೆ ಫಾಸ್ಟ್‌ಫುಡ್‌ಗಳ ಬಳಿ ನಿಂತು ಆಹಾರ ಸೇವಿಸುವ ಬದಲು ಶುಚಿ ಜಾಗದಲ್ಲಿ ಆಹಾರ ಸೇವನೆ ಮಾಡುವ ಅನುಕೂಲವನ್ನು ಪಾಲಿಕೆ ಮಾಡಿದೆ. ಅಲ್ಲದೆ ಖಾಲಿ ಜಾಗದಲ್ಲಿ ಕಸದ ರಾಶಿಯೂ ಬೀಳದಂತೆ ಮಾಡುವ ವಿನೂತನ ಚಿಂತನೆ ಇದಾಗಿದ್ದು, ಪ್ರಜ್ಞಾವಂತ ನಾಗರಿಕರ ಪ್ರಶಂಸೆಗೆ ಪಾತ್ರವಾಗಿದೆ.

ಎರಡೂ ಕಡೆ ಸ್ವಾಗತ ಕಮಾನು(ಆರ್ಚ್): ಬೀದಿಬದಿ ವ್ಯಾಪಾರಿಗಳ ವಲಯಕ್ಕೆ ಬರಲು ಅವಕಾಶ ನೀಡಿರುವ ರಸ್ತೆಯ ಎರಡೂ ಕಡೆಗಳಲ್ಲಿಯೂ ಸ್ವಾಗತ ಕಮಾನು ನಿರ್ಮಾಣವಾಗಲಿದೆ. ಸ್ವಾಗತ ಕಮಾನು ನಿರ್ಮಾಣಕ್ಕೆ ಈಗಾಗಲೇ ಕಾಂಕ್ರೀಟ್ ಪಿಲ್ಲರ್‌ಗಳನ್ನು ನಿರ್ಮಿಸಲಾಗಿದ್ದು, ಆಕರ್ಷಣೀಯ ಸ್ವಾಗತ ಕಮಾನು ಹಾಗೂ ಆನೆ ಪ್ರತಿಮೆ ಇರಲಿದೆ. ಹಾಗೆಯೇ ಅಲಂಕಾರಿಕ ಗಿಡಗಳನ್ನಿಡುವುದರ ಜೊತೆಗೆ ಕಾಂಪೌಂಡ್ ಮೇಲೆ ಪಾಲಿಕೆ ಹಾಗೂ ಮಾರುಕಟ್ಟೆ ಸಂಬಂಧಿತ ಗೋಡೆ ಚಿತ್ರಗಳನ್ನು ಬಿಡಿಸಲಾಗುವುದು ಎಂದು ಪಾಲಿಕೆ ವಲಯ ಕಚೇರಿ–8ರ ಸಿವಿಲ್ ಇಂಜಿನಿಯರ್ ನದೀಮ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೂರು ಪಾಳಿ, 300 ಮಂದಿ: ಮೈಸೂರು ನಗರದಲ್ಲಿಯೇ ಮೊದಲ ಬಾರಿಗೆ ಈ ರೀತಿಯ ಸ್ಟ್ರೀಟ್ ವೆಂಡರ್ ಜೋನ್ ನಿರ್ಮಿಸಲಾಗಿದೆ. 100 ಮಳಿಗೆಗಳಿದ್ದು, ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಬೇರೆ ಬೇರೆ ವ್ಯಾಪಾರಿಗಳಿಗೆ ಅವಕಾಶ ನೀಡಲಾಗುವುದು. ಬೆಳಗ್ಗೆ ಹಣ್ಣು, ಸೊಪ್ಪು, ತರಕಾರಿ ವ್ಯಾಪಾರಸ್ಥರಿಗೆ, ಮಧ್ಯಾಹ್ನ ಮತ್ತು ರಾತ್ರಿ ಫಾಸ್ಟ್‌ಫುಡ್ ಹಾಗೂ ಇನ್ನಿತರೆ ವಸ್ತುಗಳ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದು ಎಂದರು.

ಭಾರಿ ಬೇಡಿಕೆ: ಈಗಾಗಲೇ ಸಾಕಷ್ಟು ಮಂದಿ ವ್ಯಾಪಾರ ಮಾಡುವುದಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದ್ದು, ನಿರೀಕ್ಷೆಗೂ ಮೀರಿ ಈ ಯೋಜನೆ ಯಶಸ್ವಿಯಾಗುವ ಸಾಧ್ಯತೆ ಇದೆ. ಉದಯಗಿರಿ ಭಾಗದಲ್ಲಿ ಮಾರುಕಟ್ಟೆ ಇಲ್ಲದಿರುವುದರಿಂದ ಮಿನಿ ಮಾರುಕಟ್ಟೆ ಸಂಪೂರ್ಣ ಸದ್ಬಳಕೆಯಾಗಲಿದೆ. ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ ಹಾಗೂ ದ್ವಿಚಕ್ರ ವಾಹನಗಳ ಪಾರ್ಕಿಂಗ್ ಸ್ಥಳಾವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು.

ನಿಯಮದಂತೆ ಮಳಿಗೆ ಹಂಚಿಕೆ: ಬೀದಿಬದಿ ವ್ಯಾಪಾರಿಗಳಿಗೆ ಪಾಲಿಕೆ ನಿಯಮದಂತೆ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು. ಸೂಕ್ತ ಬಾಡಿಗೆ ನಿಗದಿ ಮಾಡುವುದರ ಜೊತೆಗೆ ವ್ಯಾಪಾರಕ್ಕೆ ಬೇಕಾದ ಸೂಕ್ತ ವಾತಾವರಣ ಕಲ್ಪಿಸಲಾಗುವುದು. ದಿನವಿಡೀ ಸೆಕ್ಯೂರಿಟಿ ವ್ಯವಸ್ಥೆ ಇರಲಿದ್ದು, ನಿರ್ವಹಣೆಯ ಜವಾಬ್ದಾರಿಯನ್ನು ಪಾಲಿಕೆ ಅಥವಾ ಖಾಸಗಿಯರಿಗೆ ನೀಡಬೇಕೋ ಎಂಬುದನ್ನು ಸದ್ಯದಲ್ಲೇ ನಿರ್ಧರಿಸಲಾಗುವುದು. ಶೇ.90 ರಷ್ಟು ಕಾಮಗಾರಿ ಮುಗಿದಿದ್ದು, ಕೆಲ ದಿನಗಳಲ್ಲಿಯೇ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

> “ ವಾಹನಗಳು ಸಂಚರಿಸದೇ ಹಾಳುಕೊಂಪೆಯಂತಾಗಿದ್ದ ರಸ್ತೆಯನ್ನು ಆಧುನಿಕ ಸೌಕರ್ಯವುಳ್ಳ, ಆಕರ್ಷಕ ಮಾರುಕಟ್ಟೆಯಾಗಿ ಪರಿವರ್ತನೆ ಮಾಡಲಾಗಿದೆ. ಇಲ್ಲಿ ರಾಶಿ ಬಿದ್ದಿದ್ದ 50ಕ್ಕೂ ಹೆಚ್ಚು ಲಾರಿ ಲೋಡ್ ಕಸದ ತ್ಯಾಜ್ಯವನ್ನು ತೆಗೆಸಿ, ರಸ್ತೆಯ ಎರಡು ಬದಿಯಲ್ಲೂ ಸಮಾನ ಮಳಿಗೆಗಳನ್ನು ನಿರ್ಮಿಸಲಾಗಿದೆ. ನೂತನ ಸ್ಟ್ರೀಟ್ ವೆಂಡರ್ ಜೋನ್ ಈ ಭಾಗದಲ್ಲಿ ಹೊಸ ಆಕರ್ಷಣೆಯಾಗಲಿದೆ. ಶೌಚಾಲಯ, ಪಾರಂಪರಿಕ ವಿದ್ಯುತ್ ದೀಪಾಲಂಕಾರ, ಪಾರ್ಕಿಂಗ್ ವ್ಯವಸ್ಥೆಯ ಜೊತೆಗೆ ಶುಚಿತ್ವಕ್ಕೆ ಮೊದಲ ಆದ್ಯತೆ ನೀಡಲಾಗುವುದು. ಹಣ್ಣು–ತರಕಾರಿ, ವೆಜ್ ಮತ್ತು ನಾನ್‌ವೆಜ್ ಫಾಸ್ಟ್ ಫುಡ್ ಮಾರಾಟಕ್ಕೂ ಅವಕಾಶ ನೀಡಲಾಗುವುದು. ಈಗಾಗಲೇ ನೂರಕ್ಕೂ ಹೆಚ್ಚು ಮಂದಿ ವ್ಯಾಪಾರಿಗಳು ಈ ಸ್ಟ್ರೀಟ್ ವೆಂಡರ್ ಜೋನ್ ಬಗ್ಗೆ ವಿಚಾರಿಸಿದ್ದಾರೆ.
>
> 
>
> –ಸವೂದ್ ಖಾನ್, ಸದಸ್ಯ, ವಾರ್ಡ್ ನಂ.14, ಮೈಸೂರು ನಗರಪಾಲಿಕೆ

ಕನ್ನಡ ಸಂಶೋಧನಾ ಅಕಾಡೆಮಿ ಸ್ಥಾಪಿಸುವಂತೆ ಸರ್ಕಾರಕ್ಕೆ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಆಗ್ರಹ



ಮೈಸೂರು, ನ.9 (ಬಿಎಲ್‌ಯು)– ಕನ್ನಡ ಸಂಶೋಧನಾ ಅಕಾಡೆಮಿ ಸ್ಥಾಪನೆ ಮಾಡುವಂತೆ ನಿವೃತ್ತ ಪ್ರಾಧ್ಯಾಪಕರೂ ಆದ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗುರುವಾರ ನಡೆದ ಡಾ.ಶಿವಕುಮಾರ್ ಅವರ ವಚನ ಬೋಧಿ ಕೃತಿ ಬಿಡುಗಡೆ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೊಸದಾಗಿ ವ್ಯಾಖ್ಯಾನಿಸುವ ಹಾಗೂ ವಿಶ್ಲೇಷಿಸುವ ಚಿಂತಕರ ಅವಶ್ಯವಿದೆ. ಈ ನಿಟ್ಟಿನಲ್ಲಿ ಕನ್ನಡ ಸಂಶೋಧನಾ ಅಕಾಡೆಮಿ ಸ್ಥಾಪನೆ ಮಾಡಬೇಕು ಎಂದರು.

ಧಾರವಾಡ ವಿಶ್ವವಿದ್ಯಾನಿಲಯದಲ್ಲಿರುವ ಹಲವು ಗ್ರಂಥಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಿಗುವುದಿಲ್ಲ. ಈ ಕಾರಣದಿಂದ ನನಗೆ ರಜೆ ಬಂದಾಗ ಅಲ್ಲಿ ಹೋಗಿ ಓದಿ ಬರುತ್ತಿದ್ದೆ. ಒಟ್ಟಾರೆಯಾಗಿ ಎಲ್ಲಾ ಕಡೆ ವಚನಗಳಿರುವ ಗ್ರಂಥಗಳು ಹೆಚ್ಚಾಗಿ ಸಿಗಬೇಕು. ಲಭ್ಯತೆ ಹೆಚ್ಚಾದಾಗ ಓದುವ ಅನಿವಾರ್ಯತೆ ಎದುರಾಗುತ್ತದೆ ಎಂದರು.

ಬಸವಣ್ಣನವರ ವಿಚಾರಧಾರೆಗಳು ಹರಿಯುವ ನೀರೇ ಹೊರತು, ನಿಂತ ನೀರಲ್ಲ. ವಚನಗಳ ಮೂಲಕ ಬಸವಣ್ಣನಲ್ಲಿರುವ ಸ್ವ ವಿಮರ್ಶೆ ಬೇರೆ ಯಾರಲ್ಲೂ ಕಾಣಲು ಸಾಧ್ಯವಿಲ್ಲ. ಬಸವಣ್ಣನವರು 12ನೇ ಶತಮಾನದವರಾದರೂ ಅವರ ವಿಚಾರಗಳು ನಿತ್ಯ ನೂತನ ಎಂದು ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಕಾಲ ಬದಲಾದಂತೆ ವಚನಗಳ ಅರ್ಥೈಸುವಿಕೆ ಬದಲಾಗುತ್ತಿದೆ. ಅಂದಿನ ಹಾಗೂ ಇಂದಿನ ವಚನ ಅರ್ಥೈಸುವಿಕೆಯ ಸ್ವರೂಪ ಬದಲಾಗಿದೆ. ಆದರೆ ಎಷ್ಟೇ ವರ್ಷಗಳಾದರೂ ವಚನದ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತವಾಗಿರುತ್ತದೆ ಎಂದು ಹೇಳಿದರು.


ವಚನ ಸಾಹಿತ್ಯ ಗುಹೆಯಲ್ಲಿ ಅವಿತಿರುವ ನಿಧಿ. ಅದರೊಳಗೆ ಹೊಕ್ಕಿ ವಿಚಾರಗಳನ್ನು ತಿಳಿಯುವುದು ಕಷ್ಟ, ಆದರೆ ಒಂದು ಬಾರಿ ಒಳ ಹೊಕ್ಕರೆ ಬಹಳಷ್ಟು ಸಂಗತಿಗಳು ಅನಾವರಣಗೊಳ್ಳುತ್ತವೆ ಎಂದು ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಪ್ರೊ.ನೀಲಗಿರಿ ತಳವಾರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಕರಿಕಲ್, ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ.ಶಿವಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ನ.9–ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬೆಂಗಳೂರು ಮತ್ತು ಭೋಪಾಲ್ ಕ್ಯಾಂಪಸ್‌ನಲ್ಲಿ ಲಭ್ಯವಿರುವ ನಾನಾ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ಕೋರ್ಸ್‌ಗಳಾದ–ಎಂಎ ಶಿಕ್ಷಣ, ಎಂಎ ಅಭಿವೃದ್ಧಿ, ಎಂಎ ಸಾರ್ವಜನಿಕ ಆರೋಗ್ಯ (MPH), ಎಂಎ ಅರ್ಥಶಾಸ್ತ್ರ ಮತ್ತು 4 ವರ್ಷಗಳ ಪೂರ್ಣಾವಧಿಯ ಹಾಗೂ ವಸತಿಸಹಿತ ಪದವಿ ಕೋರ್ಸ್‌ಗಳಾದ ಬಿ.ಎ ಆನರ್ಸ್, ಬಿ.ಎಸ್ಸಿ ಆನರ್ಸ್ ಮತ್ತು ಬಿ.ಎಸ್ಸಿ ಬಿಎಡ್ ದ್ವಿಪದವಿ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಲ್ಲಿ ವಿಷಯ ಪರಿಣತಿ ಮತ್ತು ಸಾಮಾಜಿಕ ಬದ್ಧತೆ ಬೆಳೆಸುವ ನಿಟ್ಟಿನಲ್ಲಿ ಶಿಸ್ತುಬದ್ಧವಾಗಿ ಶಿಕ್ಷಣ ಒದಗಿಸುವ ಗುರಿ ಹೊಂದಿದೆ. ಇದರೊಂದಿಗೆ ಈ ಕೋರ್ಸ್‌ಗಳು ಉತ್ತಮ ಉದ್ಯೋಗಾವಕಾಶ ಮತ್ತು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಅವಕಾಶ ಒದಗಿಸಲಿವೆ. ಅರ್ಜಿ ಸಲ್ಲಿಸಲು ನ.22 ಕೊನೆ ದಿನಾಂಕ. ಮಾಹಿತಿಗೆ ಮೊ: 8971889988 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.11.2023 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ದಿ ಆರ್ಟ್ ಆಫ್ ಲಿವಿಂಗ್ (ವೇದ ವಿಜ್ಞಾನ ಮಹಾ ವಿದ್ಯಾಪೀಠ):** ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಶಿಬಿರ, ಆನಂದದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ.

■ **ಸೇಪಿಯೆಂಟ್ ಕಾಲೇಜು, ಎನ್‌ಎಸ್‌ಎಸ್ ಘಟಕ:** ರಕ್ತದಾನ ಶಿಬಿರ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ:** ವಿಶ್ವ ರೋಗ ನಿರೋಧಕ ದಿನಾಚರಣೆ ಅಂಗವಾಗಿ ವಾಕಥಾನ್, ಮುಖ್ಯ ಅತಿಥಿಗಳು: ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀರಾಮಕೃಷ್ಣ ವಿದ್ಯಾಕೇಂದ್ರ:** ಮಕ್ಕಳ ಸಂತೆ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಉದ್ಘಾಟನೆ: ರಂಗ ಕಲಾವಿದ ಚಂದನ್ ಆಚಾರ್, ಸ್ಥಳ: ಶಾಲೆ ಆವರಣ, ಬೆಳಗ್ಗೆ 10ರಿಂದ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಪತ್ರಕರ್ತರಿಗೆ ಉಚಿತ ಆಯುರ್ವೇದ ತಪಾಸಣಾ ಶಿಬಿರ, ಸಾನ್ನಿಧ್ಯ: ರಾಮಕೃಷ್ಣಾಶ್ರಮದ ಅಧ್ಯಕ್ಷ ಶ್ರೀ ಮಹಾಮೇಧಾನಂದ ಸ್ವಾಮೀಜಿ, ಉದ್ಘಾಟನೆ: ಶಾಸಕ ಹರೀಶ್‌ಗೌಡ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಅತಿಥಿಗಳು: ಮೇಯರ್ ಶಿವಕುಮಾರ್, ಜಿಎಎಂಸಿ ಪ್ರಾಚಾರ್ಯ ಡಾ. ರಾಧಾಕೃಷ್ಣ ರಾಮರಾವ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕಾರ್ಯದರ್ಶಿ ಸುಬ್ರಮಣ್ಯ, ಆಶಾಕಿರಣ ಆಸ್ಪತ್ರೆಯ ಕೆ.ಎಸ್.ಗುರುರಾಜ, ಲಯನ್ಸ್ ಕ್ಲಬ್ ಆಫ್ ಮೈಸೂರು ಪಶ್ಚಿಮ ಅಧ್ಯಕ್ಷ ಡಾ. ರವಿಚಂದ್ರ ಕುಲಕರ್ಣಿ, ಜಿಎಆರ್‌ಸಿ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ:** 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಮತ್ತು ಪ್ರಗತಿ–2023, ಸೇರ್ಪಡೆ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಮುಖ್ಯ ಅತಿಥಿಗಳು : ಆಯುರ್ವೇದ ಅಕಾಡೆಮಿ ಕಾರ್ಯದರ್ಶಿ ಡಾ.ಎಸ್.ಜಿ.ಸಾವಿತ್ರಿ, ಸ್ಥಳ: ಕಾಲೇಜು ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು:** ಸೋಮಾನಿ ಸಂಭ್ರಮ, ಉದ್ಘಾಟನೆ: ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಆನಂದ್, ಬಹುಮಾನ ವಿತರಣೆ: ಕಾಲೇಜು ಅಧ್ಯಕ್ಷ ಡಾ.ಪುಟ್ಟ ಸ್ವಾಮಿ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಕುಬೇರ್ ಪಿ.ಗೌಡ, ಮ್ಯಾನೇಜಿಂಗ್ ಟ್ರಸ್ಟಿ ಎಸ್.ಪ್ರಭಾ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ವಾರ್ಷಿಕ ಸಾಂಸ್ಕೃತಿಕ ಮತ್ತು ಸಾಹಿತ್ಯ ಕಾರ್ಯಕ್ರಮ ಸಂಭ್ರಮ–2023, ಮುಖ್ಯ ಅತಿಥಿಗಳು: ಹಿನ್ನೆಲೆ ಗಾಯಕಿ ಕು.ರಶ್ಮಿ ಧರ್ಮೇಂದ್ರ, ಅಧ್ಯಕ್ಷತೆ: ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಉಪಸ್ಥಿತರು: ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಪ್ರೊ.ಅಶ್ವತಿದೇವಿ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ಡಾ.ಪುನೀತ್ ರಾಜ್‌ಕುಮಾರ್‌ರವರ 2ನೇ ವರ್ಷದ ಸವಿನೆನಪು, ಸಾಧಕರಿಗೆ ಕನ್ನಡದ ಯುವರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ರಾಜ್ಯ ರೈತ ಕಲ್ಯಾಣ ಸಂಘ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ಪ್ರಾಸ್ತಾವಿಕ ನುಡಿ : ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಚಲನಚಿತ್ರ ನಟ ಸುಪ್ರೀತ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಕುಮಾರವ್ಯಾಸ ಗುರುಕುಲ :** ಪ್ರೊ. ಎ.ಪಿ. ಶ್ರೀನಿವಾಸಮೂರ್ತಿ ಅವರ ಸಂಸ್ಮರಣೆ, ಕರ್ನಾಟಕ ಸಂಗೀತ, ಡಾ. ವೀಣಾ ರವಿಕುಮಾರ್ ಅವರಿಂದ ಹಾಡುಗಾರಿಕೆ, ಡಾ. ಎಂ.ಜಿ. ನರಹರಿ– ಪಿಟೀಲು, ವಿದ್ವಾನ್ ಎಚ್.ಎಲ್. ಶಿವಶಂಕರ್–ಮೃದಂಗ, ವಿದ್ವಾನ್ ರಘುನಂದನರಾವ್–ಘಟಂ, ಸ್ಥಳ: ಶ್ರೀ ರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ:** ವಸುಂಧರೋತ್ಸವ–2023, ಸಂಜೆ 7.20ರಿಂದ ವಿದ್ವಾನ್ ಶ್ರೀಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಮ್‌ಕುಮಾರ್ ಮೋಹನ್‌ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಗೌರವ ಸಮರ್ಪಣೆ: ಎಸ್‌ಪಿವಿಜಿಎಂಸಿ ಟ್ರಸ್ಟ್‌ನ ಹಿಮಾಂಶು, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ವಿ.ವಿ.ಸುಬ್ರಹ್ಮಣ್ಯಂ–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರ ನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಂ.ಜಿ.ಶ್ರೀಧರ್–ನಾಗಸ್ವರ ವಾದನ, 4.00 ಮಹಿಳಾರಂಗ–ಸಖೀ ಸಂವಾದ, ಪ್ರಸ್ತುತಿ–ಭಾರತಿ, 4.30 ವೃತ್ತಿ ಮಾರ್ಗದರ್ಶನ–ಮನೋ ವೈದ್ಯಕೀಯ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ರವೀಶ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಸಮಗ್ರ ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಡಾ.ಕೆ.ರಾಜು ಹಾಗೂ ಪಿ.ರಮೇಶ್, 8.00 ಕನ್ನಡ ಭಾರತಿ, 9.30 ಅರುಣಾ ಸಾಯಿರಾಂ–ಹಾಡುಗಾರಿಕೆ, 10.00 ತತ್ವ ಸಂಚಾರ–ತತ್ವಪದ ಗಾಯಕರ ಹಾಡುಪಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಸಮಾಜದ ಸಂಪತ್ತಿನಲ್ಲಿ ಸಕಲರಿಗೂ ಸಮಪಾಲು ಬೇಕು

● ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ ● ಈಗ ದೇಶದಲ್ಲಿ ಕಾರ್ಮಿಕರಷ್ಟೇ ಸಂಪತ್ತು ಉತ್ಪಾದಿಸುತ್ತಿದ್ದಾರೆ ● ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ



ಬೆಂಗಳೂರು, ನ.9(ಕೆಎಂಶಿ)– ದೇಶದಲ್ಲಿ ಕಾರ್ಮಿಕ ವರ್ಗ ಸಂಪತ್ತನ್ನು ಉತ್ಪಾದಿಸುತ್ತದೆ. ಉಳಿದವರು ಅನುಭವಿಸುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕಾರ್ಮಿಕ ಇಲಾಖೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ 2022–23ನೇ ಸಾಲಿನ ಶೈಕ್ಷಣಿಕ ಧನ ಸಹಾಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ಪ್ರತಿಯೊಬ್ಬರೂ ಉತ್ಪಾದನೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಬಸವಣ್ಣನವರು ಕಾಯಕ ಪದ್ಧತಿಯನ್ನು ಹೇಳಿದರು. ಸಂವಿಧಾನದ ಪ್ರಕಾರ ಪ್ರತಿಯೊಬ್ಬರೂ ಸಮಾಜದ ಸಂಪತ್ತಿನಲ್ಲಿ ಸಮಪಾಲು ಹೊಂದಬೇಕು. ಹೀಗಾಗಿ ನಾವು ಕಾರ್ಮಿಕರ ಮಕ್ಕಳಿಗೆ ಈ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಇದರಿಂದ ಸಮ ಸಮಾಜದ ಆಶಯಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು. ಶೂದ್ರ ಮತ್ತು ಮಹಿಳೆಯರನ್ನು ಶತ–ಶತಮಾನಗಳ ಕಾಲ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಈ ಕಾರಣಕ್ಕೇ ಶೂದ್ರ ವರ್ಗಗಳು ಹಿಂದುಳಿಯುವಂತಾಯಿತು. ಅಸಮಾನತೆ ಹೆಚ್ಚಾಯಿತು. ಈ ಅಸಮಾನತೆಯನ್ನು ಅಳಿಸುವ ಉದ್ದೇಶ ನಮ್ಮ ಸರ್ಕಾರದ್ದು ಎಂದು ಸಿದ್ದರಾಮಯ್ಯ ಹೇಳಿದರು.

960000 ಮಕ್ಕಳಿಗೆ ಕಲ್ಯಾಣ ನಿಧಿ ಮೂಲಕ ಸಹಾಯ ಧನ ಬಿಡುಗಡೆ ಆಗುತ್ತಿದೆ. ಇದರ ಸದುಪಯೋಗ ಪಡಿಸಿಕೊಂಡು ಶಿಕ್ಷಣವಂತರಾಗಬೇಕು. ಶಿಕ್ಷಣದಿಂದ ಅಸಮಾನತೆ ದೂರ ಮಾಡಬಹುದು ಎಂದರು.

ಸಹಾಯಧನ ಪಡೆಯುತ್ತಿರುವ ಇವರೆಲ್ಲರೂ ಅಸಂಘಟಿತ ಕಾರ್ಮಿಕರ ಮಕ್ಕಳು. ಶೇ.83ರಷ್ಟು ಕಾರ್ಮಿಕರು ಇವತ್ತಿಗೂ ಅಸಂಘಟಿತರಾಗಿದ್ದಾರೆ. ದೇಶದಲ್ಲಿ ರೈತ ಸಮುದಾಯವನ್ನು ಬಿಟ್ಟರೆ ಎರಡನೇ ಅತೀ ದೊಡ್ಡ ಸಮುದಾಯ ಕಾರ್ಮಿಕ ಸಮುದಾಯ ಆಗಿದೆ ಎಂದು ಹೇಳಿದರು.

ಜಾತಿ–ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಪಟ್ಟಭದ್ರರನ್ನು ನಾವು ದೂರ ಇಡಬೇಕು. ಈ ಪಟ್ಟಭದ್ರರು ಸಾಮಾಜಿಕ ನ್ಯಾಯದ ವಿರೋಧಿಗಳು. ಈ ವಿಭಜಕರು ಶೂದ್ರ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮೇಲೆ ಬರುವುದನ್ನು ವಿರೋಧಿಸುತ್ತಾರೆ. ಆದ್ದರಿಂದ ಜಾತಿ–ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುವವರನ್ನು ನಾವು ವಿರೋಧಿಸಬೇಕು ಎಂದರು. ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯಿಂದ ನಾವು ಎಲ್ಲಾ ಜಾತಿ–ಧರ್ಮದವರಿಗೆ ಅನುಕೂಲ ಆಗುವ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕುಮಾರಸ್ವಾಮಿ ಭೇಟಿಯಾದ ಇಸ್ರೇಲ್ ಕಾನ್ಸುಲೇಟ್

ಉಭಯ ದೇಶಗಳ ಬಾಂಧವ್ಯ, ಹಮಾಸ್ ವಿರುದ್ಧ ಯುದ್ಧವೂ ಸೇರಿದಂತೆ ಅನೇಕ ವಿಷಯ ಪ್ರಸ್ತಾಪ



ಬಿಡದಿ,ನ.9–ದಕ್ಷಿಣ ಭಾರತದ ಇಸ್ರೇಲ್ ಕಾನ್ಸುಲೇಟ್ ಜನರಲ್ ಟಾಮಿಬೆನ್ ಹೈವ್ ಅವರು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಬಿಡದಿ ಅವರ ತೋಟದಲ್ಲಿ ಗುರುವಾರ ಭೇಟಿಯಾಗಿದ್ದರು.

ಕರ್ನಾಟಕ ರಾಜ್ಯ ಮತ್ತು ಇಸ್ರೇಲ್ ನಡುವಣ ಬಾಂಧವ್ಯ, ಹಮಾಸ್ ಮೇಲಿನ ಇಸ್ರೇಲ್ ಯುದ್ಧ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಉಭಯ ನಾಯಕರು ಚರ್ಚೆ ಮಾಡಿದರು. ಹಮಾಸ್ ಮೇಲಿನ ದಾಳಿ ಬಗ್ಗೆಯೂ ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿದ ಟಾಮಿ, ಸಮಾನ ಅಭಿವೃದ್ಧಿಯ ದೃಷ್ಟಿಕೋನದಿಂದ ಬೆಳೆಯುತ್ತಿರುವ ಕರ್ನಾಟಕ ಮತ್ತು ಇಸ್ರೇಲ್ ನಡುವಣ ಹಿತಾಸಕ್ತಿಗೆ ಹೆಚ್ಚಿನ ಒತ್ತು ನೀಡುವ ಜೊತೆಗೆ, ಆ ನಿಟ್ಟಿನಲ್ಲಿ ಇಬ್ಬರೂ ದೀರ್ಘಕಾಲೀನ ದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು. ಯುದ್ಧ ಮುಗಿದು ಪರಿಸ್ಥಿತಿ ಸಹಜಸ್ಥಿತಿಗೆ ಬಂದ ಬಳಿಕ ಕೃಷಿ, ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ, ತಂತ್ರಜ್ಞಾನ ವಿನಿಮಯ, ಸಾಂಸ್ಕೃತಿಕ ಸಂಬಂಧಗಳು ಸೇರಿದಂತೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಕರ್ನಾಟಕದ ಜತೆ ಕೆಲಸ ಮಾಡಲು ಇಸ್ರೇಲ್ ಉತ್ಸುಕವಾಗಿದೆ. ರಾಜ್ಯದ ಜೊತೆಗಿನ ಸಂಬಂಧವನ್ನು ಬಲಪಡಿಸಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಉದ್ದೇಶವಿದೆ. ಇದಕ್ಕೆ ತಮ್ಮ ಸಹಕಾರ ಅಗತ್ಯ ಎಂದರು.

ಅಮೆರಿಕ ಸೇರಿದಂತೆ ವಿವಿಧ ದೇಶಗಳ ಪ್ರಜೆಗಳನ್ನು ಹಮಾಸ್ ಬಂಡುಕೋರರು ಅಪಹರಣ ಮಾಡಿರುವ ಅಂಶವನ್ನು ಪ್ರಸ್ತಾಪಿಸಿ ಗದ್ಗದಿತರಾದ ಅವರು, ಕಾಣದ ಕೆಲ ಶಕ್ತಿಗಳು ಹಮಾಸ್‌ಗೆ ಆರ್ಥಿಕ ಮತ್ತು ಶಸ್ತ್ರಾಸ್ತ್ರ ನೆರವು ನೀಡುತ್ತಿವೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದ ಅವರು, 'ಸಂಕಷ್ಟದ ಸಮಯದಲ್ಲಿ ಭಾರತವು ಇಸ್ರೇಲ್ ಪರ ಬಲವಾಗಿ ನಿಂತಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು.

ಕುಮಾರಸ್ವಾಮಿ ಅವರು 2018ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಇಸ್ರೇಲ್‌ಗೆ ಅಧ್ಯಯನ ಪ್ರವಾಸ ಕೈಗೊಂಡಿದ್ದನ್ನು ಟಾಮಿ ಅವರು ಇದೇ ವೇಳೆ ಸ್ಮರಿಸಿಕೊಂಡರು. ಈ ವೇಳೆ 'ಹಮಾಸ್ ಬಂಡುಕೋರರು ಒತ್ತೆಯಾಳಾಗಿ ಇಟ್ಟುಕೊಂಡಿರುವವರು ಸುರಕ್ಷಿತವಾಗಿ ಬಿಡುಗಡೆಯಾಗಿ ಬರಲಿ. ಯುದ್ಧ ಪೀಡಿತ ಪ್ರದೇಶದಲ್ಲಿ ಆದಷ್ಟು ಬೇಗ ಶಾಂತಿ ನೆಲೆಸುವಂತಾಗಲಿ ಎಂದು ಕುಮಾರಸ್ವಾಮಿ ಆಶಿಸಿದರು. ಟಾಮಿ ಅವರನ್ನು ತಮ್ಮ ತೋಟದಲ್ಲಿ ಸುತ್ತಾಡಿಸಿದ ಅವರು, ಅಲ್ಲಿನ ಬೆಳೆಗಳ ಕುರಿತು ಮಾಹಿತಿ ನೀಡಿದರು. ಕುಮಾರಸ್ವಾಮಿ ಅವರು ನೀಡಿದ ಬಾಳೆಗೊನೆ ಸ್ವೀಕರಿಸಿದ ಟಾಮಿಬೆನ್, ತೋಟದಲ್ಲಿ ಅಳವಡಿಸಿಕೊಂಡಿರುವ ಜಲ ಮರುಪೂರಣ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶೇಷಚೇತನರಿಗೆ ಶ್ರವಣ ಸಾಧನ ವಿತರಣೆ



ಮೈಸೂರು, ನ.9(ಎಂಕೆ)– ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಮುಂಬೈನ ಅಲಿ ಯವರ್ ಜಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಡಿಸೆಬಿಲಿಟೀಸ್(ದಿವ್ಯಾಂಗ್‌ಜನ್) ಸಂಯುಕ್ತಾಶ್ರಯದಲ್ಲಿ 299 ಮಂದಿ ವಿಶೇಷಚೇತನರಿಗೆ 85.20 ಲಕ್ಷ ರೂ.ಮೌಲ್ಯದ 568 ಶ್ರವಣ ಸಾಧನಗಳನ್ನು ವಿತರಣೆ ಮಾಡಲಾಯಿತು. ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಗುರುವಾರ ನಡೆದ ಶ್ರವಣ ಸಾಧನಗಳ ವಿತರಣಾ ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಫಲಾನುಭವಿಗಳಿಗೆ ಶ್ರವಣ ಸಾಧನಗಳನ್ನು ನೀಡಿದರು. ಸಾರ್ವಜನಿಕರು ಸೇರಿದಂತೆ ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್, ಶ್ರೀ ಸಾಯಿರಂಗ ವಿಶೇಷ ಶಾಲೆ, ಹುಣಸೂರಿನ ಮಾತೃಶ್ರೀ ಸಂಸ್ಥೆ ಹಾಗೂ ಬೆಳಗೊಳ ಗ್ರಾಮದ ಮೌಂಟ್ ಫೋರ್ಟ್ ಶಾಲೆಯಲ್ಲಿ ಶ್ರವಣ ದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವಣ ಸಾಧನಗಳನ್ನು ವಿತರಿಸಲಾಯಿತು.


ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಪಾಂಶುಪಾಲರಾದ ಡಾ.ಆರ್.ಸುಮಾ ಮತ್ತಿತರರು ಉಪಸ್ಥಿತರಿದ್ದರು.

ಭಿನ್ನಮತ ಶಮನಕ್ಕೆ ಡಿಕೆ ಶಿವಕುಮಾರ್ ಮಾಸ್ಟರ್ ಪ್ಲ್ಯಾನ್; ಶಾಸಕರೊಂದಿಗೆ ಪ್ರತಿದಿನ ಉಪಹಾರ ಸಭೆ!



ಬೆಂಗಳೂರು: ಉಪಮುಖ್ಯಮಂತ್ರಿ ಮತ್ತು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಗುರುವಾರ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರೊಂದಿಗೆ ನಿಯಮಿತವಾಗಿ ಉಪಹಾರ ಸಭೆ ನಡೆಸಿ, ಅವರ ಕುಂದುಕೊರತೆಗಳು, ದೂರುಗಳು ಮತ್ತು ಸಲಹೆಗಳನ್ನು ಆಲಿಸುವುದಾಗಿ ಹೇಳಿದ್ದಾರೆ. ಈ ಕ್ರಮವು ಕೆಲವು ಶಾಸಕರು ಮತ್ತು ಪಕ್ಷದ ಹಿರಿಯ ಕಾರ್ಯಕರ್ತರಲ್ಲಿ ಉಂಟಾಗಿರುವ ಅಸಮಾಧಾನವನ್ನು ತಡೆಗಟ್ಟುವ ಮತ್ತು ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಅವರನ್ನು ಒಂದುಗೂಡಿಸುವ ಗುರಿಯನ್ನು ಹೊಂದಿದೆ.

ಎಲ್ಲ ಶಾಸಕರಿಗೂ ಸಮಯದ ಬಗ್ಗೆ ಗೊಂದಲವಿತ್ತು. ಬೆಳಗ್ಗೆ 10ರಿಂದ 10.30ರವರೆಗೆ (ಶಾಸಕರಿಗೆ) ಸಮಯ ನಿಗದಿ ಮಾಡಿದ್ದೇನೆ. ನಮ್ಮ ಪಕ್ಷದ ಕಾರ್ಯಕರ್ತರಿಗೂ ಸಮಯ ನಿಗಧಿಗೆ ನಿರ್ಧರಿಸಿದ್ದೇನೆ ಎಂದು ಡಿ.ಕೆ. ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು. ಈ ಸಭೆಗಳು ಶಾಸಕರ ಮತ್ತು ಅವರ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಆಲಿಸುವ ಮತ್ತು ಪರಿಹರಿಸುವ ಗುರಿಯನ್ನು ಹೊಂದಿವೆ ಎಂದು ಅವರು ಹೇಳಿದರು. ಡಿಕೆ ಶಿವಕುಮಾರ್ ಅವರು ಬೆಂಗಳೂರಿನಿಂದ ಹೊರಗಿರುವ ದಿನಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ದಿನಗಳಲ್ಲಿ ಈ ಸಭೆಗಳು ನಡೆಯುತ್ತವೆ.



ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ 60 ಕೆ.ಜಿ ವಿಭಾಗದಲ್ಲಿ ಮೈಸೂರಿನ ಸುಣ್ಣದಕೇರಿಯ ಪೈಲ್ವಾನ್ ಜಿ.ಭೈರಪ್ಪ ನಾಯಕ ಪ್ರಥಮ ಬಹುಮಾನ ಗಳಿಸಿದರು. ನಿವೃತ್ತ ಕುಸ್ತಿ ತರಬೇತುದಾರ ಪೈಲ್ವಾನ್ ಶ್ರೀನಿವಾಸ್‌ಗೌಡ ಪ್ರಶಸ್ತಿ ಪತ್ರ ನೀಡಿ, ಅಭಿನಂದಿಸಿದರು.

ಹೊಳೆನರಸೀಪುರದ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ ರವರ ನ್ಯಾಯಾಲಯದಲ್ಲಿ
ಎಂ.ವಿ.ಸಿ 458/2021

ಅರ್ಜಿದಾರರು: ರಂಗಸ್ವಾಮಿ ಬಿನ್ ಗುಂಡಯ್ಯ ಸುಮಾರು 38 ವರ್ಷ, ಕಾಮಸಮುದ್ರ ಗ್ರಾಮ, ಹಳೇಕೋಟೆ ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ರೆಸ್ಪಾಂಡೆಂಟರು: ಶಶಿಕಾಂತ್ ಮತ್ತು ಇನ್ನೊಬ್ಬರು ಆರ್1) ಶಶಿಕಾಂತ್ ಬಿನ್ ಮಹೇಂದ್ರ ಸುಮಾರು 28 ವರ್ಷ, ನಂ. 7/1, ಅಕ್ಕ ನಿಲಯ, ಬ್ಲಾಕ್ ನಂ.30 ಮಾನಸಿ ನಗರ, ಸರ್ಕಾರಿ ಎಂಪ್ಲಾಯಿಸ್ ಹೆಚ್.ಬಿ.ಸಿ.ಎಸ್, ಲೇಔಟ್, ಮೈಸೂರು–570019 (ಕೆಎ–05–ಎಂಝೆಡ್–4298 ರ ಮಾರುತಿ ಸ್ವಿಫ್ಟ್ ಕಾರಿನ ಮಾಲೀಕರು)

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರುಗಳ ವಿರುದ್ಧ ಅಪಘಾತ ಪರಿಹಾರ ಕೋರಿ ಈ ಕೇಸನ್ನು ದಾಖಲಿಸಿರುತ್ತಾರೆ. ಈ ಮೇಲ್ಕಂಡ ಕೇಸಿನ 1ನೇ ರೆಸ್ಪಾಂಡೆಂಟರಿಗೆ ನ್ಯಾಯಾಲಯದಿಂದ ಕಳುಹಿಸಿದ ನೋಟೀಸ್ ತಲುಪದೆ ಇರುವುದರಿಂದ ಈ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ಮೇಲ್ಕಂಡ ಕೇಸು ದಿನಾಂಕ: 07–12–2023 ರಂದು 1ನೇ ರೆಸ್ಪಾಂಡೆಂಟರಾದ ನಿಮ್ಮ ಹಾಜರಾತಿಗಾಗಿ ಇರುತ್ತದೆ. ಈ ದಿನ ಬೆಳಗ್ಗೆ 11–00 ಗಂಟೆಗೆ, ತಾವಾಗಲಿ/ ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ಮೇಲ್ಕಂಡ ಕೇಸಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ತಮ್ಮ ವಿರುದ್ಧ ಏಕಪಕ್ಷೀಯ ಆದೇಶ ಮಾಡಿ ಕೇಸನ್ನು ತೀರ್ಮಾನಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ: 04–11–2023 ರಂದು ನೀಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ: ಶಿರಸ್ತೇದಾರ್, ಹೊಳೆನರಸೀಪುರ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ ನ್ಯಾಯಾಧೀಶರವರ ನ್ಯಾಯಾಲಯ, ಹೊಳೆನರಸೀಪುರ
ಅರ್ಜಿದಾರರ ಪರ ವಕೀಲರು: ಹೊಳೆನರಸೀಪುರ

ಹೊಳೆನರಸೀಪುರದ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ. ರವರ ನ್ಯಾಯಾಲಯದಲ್ಲಿ
ಎಂ.ವಿ.ಸಿ 459/2021

ಅರ್ಜಿದಾರರು: ಸಿ.ಎನ್ ಯೋಗೇಶ ಬಿನ್ ನಾಗರಾಜಯ್ಯ ಸುಮಾರು 37 ವರ್ಷ, ಚಿಕ್ಕನಹಳ್ಳಿ ಗ್ರಾಮ, ಕಡವಿನಕೋಟೆ ಅಂಚೆ, ಹಳೇಕೋಟೆ ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ರೆಸ್ಪಾಂಡೆಂಟರು: ಶಶಿಕಾಂತ್ ಮತ್ತು ಇನ್ನೊಬ್ಬರು ಆರ್1) ಶಶಿಕಾಂತ್ ಬಿನ್ ಮಹೇಂದ್ರ ಸುಮಾರು 28 ವರ್ಷ, ನಂ.7/1, ಅಕ್ಕ ನಿಲಯ, ಬ್ಲಾಕ್ ನಂ.30, ಮಾನಸಿ ನಗರ, ಸರ್ಕಾರಿ ಎಂಪ್ಲಾಯಿಸ್ ಹೆಚ್.ಬಿ.ಸಿ.ಎಸ್, ಲೇಔಟ್, ಮೈಸೂರು–570019 (ಕೆಎ–05–ಎಂಝೆಡ್–4298 ರ ಮಾರುತಿ ಸ್ವಿಫ್ಟ್ ಕಾರಿನ ಮಾಲೀಕರು)

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರುಗಳ ವಿರುದ್ಧ ಅಪಘಾತ ಪರಿಹಾರ ಕೋರಿ ಈ ಕೇಸನ್ನು ದಾಖಲಿಸಿರುತ್ತಾರೆ. ಈ ಮೇಲ್ಕಂಡ ಕೇಸಿನ 1ನೇ ರೆಸ್ಪಾಂಡೆಂಟರಿಗೆ ನ್ಯಾಯಾಲಯದಿಂದ ಕಳುಹಿಸಿದ ನೋಟೀಸ್ ತಲುಪದೆ ಇರುವುದರಿಂದ ಈ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ಮೇಲ್ಕಂಡ ಕೇಸು ದಿನಾಂಕ:07–12–2023 ರಂದು 1ನೇ ರೆಸ್ಪಾಂಡೆಂಟರಾದ ನಿಮ್ಮ ಹಾಜರಾತಿಗಾಗಿ ಇರುತ್ತದೆ. ಈ ದಿನ ಬೆಳಗ್ಗೆ 11–00 ಗಂಟೆಗೆ, ತಾವಾಗಲೀ/ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ಮೇಲ್ಕಂಡ ಕೇಸಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ತಮ್ಮ ವಿರುದ್ಧ ಏಕಪಕ್ಷೀಯ ಆದೇಶ ಮಾಡಿ ಕೇಸನ್ನು ತೀರ್ಮಾನಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ: 04–11–2023 ರಂದು ನೀಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ: ಶಿರಸ್ತೇದಾರ್, ಹೊಳೆನರಸೀಪುರ ಸಿವಿಲ್ ಜಡ್ಜ್ (ಹಿ.ವಿ) ಮತ್ತು ಎಂ.ಎ.ಸಿ.ಟಿ ನ್ಯಾಯಾಧೀಶರವರ ನ್ಯಾಯಾಲಯ, ಹೊಳೆನರಸೀಪುರ.
ಅರ್ಜಿದಾರರ ಪರ ವಕೀಲರು: ಹೊಳೆನರಸೀಪುರ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ರಾಜು ಬಿನ್ ನಂಜಯ್ಯ, ವಾಸ ನಂ. 3956, 2ನೇ ಅಡ್ಡರಸ್ತೆ, ಅಣ್ಣಮ್ಮ ದೇವಸ್ಥಾನ, ಗಾಂಧಿನಗರ, ಮೈಸೂರು, ಇವರಿಂದ ನಮ್ಮ ಕಕ್ಷಿದಾರರಾದ ಮೈಸೂರು ನಗರ, ಜೆ.ಪಿ. ನಗರ, 2ನೇ ಹಂತ, 'ಡಿ' ಬ್ಲಾಕ್, ವಾರ್ಡ್ ನಂ. 63, 21ನೇ ಮುಖ್ಯರಸ್ತೆ, ಮನೆ ನಂ. 31, ಶೃತಿ ನಿಲಯದಲ್ಲಿ ವಾಸವಾಗಿರುವ ದೊರೆಸ್ವಾಮಿರವರ ಮಗನಾದ ಎಂ.ಪಿ. ಚಾಯಕುಮಾರ್ ರವರು ಖರೀದಿಸಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾರಿಗಾದರೂ ವಿಶಿಷ್ಠ ಹಕ್ಕುಗಳು, ಋಣಗಳು, ಮೈನರ್ ಕ್ಲೈಮುಗಳು ಹಾಗೂ ಇತರೆ ಯಾವುದೇ ರೀತಿಯಾದ ಹಕ್ಕುಗಳು ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ನೀಡಿದ 15 ದಿವಸಗಳ ಒಳಗಾಗಿ ಈ ಮೇಲೆ ತಿಳಿಸಿದ ನಮ್ಮ ಕಛೇರಿಗೆ ಅಥವಾ ನಮ್ಮ ಕಕ್ಷಿದಾರರನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮೂಲಕ ಅಂತಹ ವಿಶಿಷ್ಠ ಹಕ್ಕನ್ನು ಪ್ರಸ್ತಾಪಿಸುವಂತಹ ದಾಖಲಾತಿಗಳೊಡನೆ ಸಂಪರ್ಕಿಸಬೇಕಾಗಿಯೂ ತಿಳಿಯಪಡಿಸುತ್ತಿದ್ದು, ಒಂದೊಮ್ಮೆ ಈ ಹದಿನೈದು ದಿವಸದೊಳಗೆ ಯಾವುದೇ ರೀತಿಯಾದ ಕ್ಲೈಮುಗಳು ಬರದೇ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಈ ಷೆಡ್ಯೂಲ್ ಸ್ವತ್ತಿನ ಮೇಲೆ ಅಂತಹ ವಿಶಿಷ್ಠ ಹಕ್ಕುಗಳು ಮತ್ಯಾರಿಗೂ ಇರುವುದಿಲ್ಲವೆಂದು ಮನದಟ್ಟು ಮಾಡಿಕೊಂಡು ಕ್ರಯ ಪತ್ರವನ್ನು ನೊಂದಾಯಿಸಿಕೊಳ್ಳಲು ಮುಂದಾಗಿರುತ್ತಾರೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರುಣಾ ಗ್ರಾಮಕ್ಕೆ ಸೇರಿದ ಸರ್ವೆ ನಂ. 130/1, ಪೈಕಿ ವಿಸ್ತೀರ್ಣ ಉತ್ತರದ ಕಡೆಗೆ 15½ ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಚಿಕ್ಕನಿಂಗಯ್ಯನವರ ಜಮೀನು ; ಪಶ್ಚಿಮಕ್ಕೆ: ಕುಳ್ಳಪ್ಪ ಮಾದಪ್ಪನವರ ಜಮೀನು ; ಉತ್ತರಕ್ಕೆ: ಪುಟ್ಟಲಿಂಗಯ್ಯ ಮತ್ತು ದೊಡ್ಡಮಾದಯ್ಯನವರ ಜಮೀನು ; ದಕ್ಷಿಣಕ್ಕೆ: ರಸ್ತೆ.

Sd/- Manukumar, B.A.L., LL.B
Advocate, KAR No. 3052/2010,
#388, 5th Main, 1st Stage,
Vijayanagar, Mysuru-570 017.
Mob: 9620828974

ದಿನಾಂಕ: 7–11–2023
ಸ್ಥಳ: ಮೈಸೂರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪುರ (ಬೇ) ಗ್ರಾಮದ ಸರ್ವೆ ನಂಬರ್ 41/1 ರಲ್ಲಿನ ಒಂದು ಎಕರೆ ಮೂವತ್ತೆರಡು ಗುಂಟೆ (1.32.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 4 ; ಪಶ್ಚಿಮಕ್ಕೆ: ಸರ್ವೆ ನಂಬರ್ 40 ; ಉತ್ತರಕ್ಕೆ: ಸರ್ವೆ ನಂಬರ್ 41/2 ; ದಕ್ಷಿಣಕ್ಕೆ: ಸರ್ವೆ ನಂಬರ್ 41/3.

Sd/- N. Prakash Kalappa,
KAR-1996-2000, Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysuru-570 004.
Mob: 9343112535
Email: mnprakashkalappa@gmail.com
ಮೈಸೂರು: 09–11–2023

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಿಂದ ಖರೀದಿ ಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸ ತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾ ಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪುರ (ಬೇ) ಗ್ರಾಮದ ಸರ್ವೆ ನಂಬರ್ 4 ರಲ್ಲಿನ ಆರು ಎಕರೆ ಮೂವತ್ತೆ ರಡು ಗುಂಟೆ (6.32.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಗ್ರಾಮದ ಗಡಿ ; ಪಶ್ಚಿಮಕ್ಕೆ: ಸರ್ವೆ ನಂಬರ್ 3 ಮತ್ತು 41 ; ಉತ್ತರಕ್ಕೆ: ಗ್ರಾಮದ ಗಡಿ ಮತ್ತು ರೈಲ್ವೇ ಲೈನ್ ; ದಕ್ಷಿಣಕ್ಕೆ: ಸರ್ವೆ ನಂಬರ್ 35 ಮತ್ತು 32.

ಐಟಂ–2

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪುರ (ಬೇ) ಗ್ರಾಮದ ಸರ್ವೆ ನಂಬರ್ 41/3 ರಲ್ಲಿನ ಒಂದು ಎಕರೆ ಮೂವತ್ತೆರಡು ಗುಂಟೆ (1.31.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂಬರ್ 4 ; ಪಶ್ಚಿಮಕ್ಕೆ: ಸರ್ವೆ ನಂಬರ್ 40 ; ಉತ್ತರಕ್ಕೆ: ಸರ್ವೆ ನಂಬರ್ 41/1 ; ದಕ್ಷಿಣಕ್ಕೆ: ಸರ್ವೆ ನಂಬರ್ 3.

Sd/- N. Prakash Kalappa,
KAR-1996-2000 Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysuru-570 004.
Mob: 9343112535
Email: mnprakashkalappa@gmail.com
ಮೈಸೂರು: 09–11–2023

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

IFT No: KMF/2023-24/IND0428 ದಿನಾಂಕ:09.11.2023

ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮೂಲಕ ಮಾತ್ರ)

ಒಕ್ಕೂಟದಲ್ಲಿ UHT ಹಾಲು ತಯಾರಿಕೆ ಮತ್ತು ಪ್ಯಾಕಿಂಗ್ ಘಟಕದ ಯೋಜನೆ ಕೈಗೊಳ್ಳಲು Pack-1 ಸಂಸ್ಕರಣೆಗೆ ಸಂಬಂಧಿಸಿದ ಯಂತ್ರೋಪಕರಣಗಳು, ಯು.ಎಚ್.ಟಿ ಹಾಲು ಸಂಸ್ಕರಣೆಯ ಸೈಲೋ, ಯಂತ್ರೋಪಕರಣ, ಯುಟಿಲಿಟಿಗೆ ಸಂಬಂಧಿಸಿದ ಯಂತ್ರೋಪಕರಣಗಳಾದ PNG operated Boiler ಇತ್ಯಾದಿ, ಖರೀದಿಸುವ ಸಂಬಂಧ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ:06.01.2024ರ ಸಂಜೆ:5.00 ಘಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು, (6364430803) ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು,
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

CADA
ಕರ್ನಾಟಕ ಸರ್ಕಾರ
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ದೂರವಾಣಿ ಸಂಖ್ಯೆ: 0821–2414090
ಕಾವೇರಿ ಜಲಾನಯನ ಯೋಜನೆಗಳು–ಮೈಸೂರು
ಕಾರ್ಯಪಾಲಕ ಅಭಿಯಂತರವರ ಕಛೇರಿ
ನಂ.2, ವಿಭಾಗ, ಕಾಜಯೋ, ವಿಜಯನಗರ 1ನೇ ಹಂತ, ಮೈಸೂರು–17
E-mail:eecada2mysore@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :
04/2023–24 ದಿನಾಂಕ: 09–11–2023

ಚಾಮರಾಜನಗರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 02 ಆಯಕಟ್ಟು ರಸ್ತೆ ಹಾಗೂ ಯಳಂದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 03 ಆಯಕಟ್ಟು ರಸ್ತೆ ಕಾಮಗಾರಿಗಳಿಗೆ K/W-1ರ ಪ್ರಕಾರ e-portal ಮೂಲಕ ಐಟಂವಾರು ಟೆಂಡರ್‌ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ.

ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು https://kppp.karnataka.gov.inನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 15.11.2023 ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–12–2023 ಸಂಜೆ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ: 02–12–2023 ಸಂಜೆ 5.00 ಗಂಟೆಯ ನಂತರ

ಸಹಿ/– ಕಾರ್ಯಪಾಲಕ ಅಭಿಯಂತರರು
ನಂ.2, ವಿಭಾಗ, ಕಾಡಾ,
ಕಾಜಯೋ, ಮೈಸೂರು

ವಾಸಾಸಂಇ/ಚಾ.ನಗರ.226/2023–24

ನಕ್ಕರೆ ಅದೇ ಸ್ವರ್ಗ

ತಂದೆ : "ನಿಮ್ಮ ಮೇಷ್ಟ್ರು ಸಿಕ್ಕಿದ್ರು, ಅವರ ಪ್ರಶ್ನೆಗಳಿಗೆ ನೀನು ಉತ್ತರ ಕೊಡಲಿಲ್ಲವಂತೆ"
ಮಗ : "ಹೌದು ಡ್ಯಾಡಿ"
ತಂದೆ : "ಯಾಕೆ ಹಾಗೆ ಮಾಡಿದೆ?"
ಮಗ : "ನೀನೇ ಹೇಳಿದ್ಯಲ್ಲ ಡ್ಯಾಡಿ, ದೊಡ್ಡವರ ಎದುರಿಗೆ ಮಾತನಾಡಬಾರದು ಅಂತ'

ಮೈಸೂರು ಮಿತ್ರ

ಶುಕ್ರವಾರ, 10 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ, ಅವುಗಳನ್ನು ನಾವೇ ಹುಡುಕಿಕೊಂಡು ಹೋಗಬೇಕು –ಅಭಿನಂದನ

ವೇದ ಸುಳ್ಳಾದರೂ { ನೀತಿಯುಳ್ಳವನು
ಗಾದೆ ಸುಳ್ಳಾಗದು { ಖ್ಯಾತಿಪಟ್ಟಾನು

ನಿಮ್ಮ ಪತ್ರಗಳು

ವರ್ಣರಂಜಿತ ವ್ಯಕ್ತಿತ್ವದ ರಾಜಕಾರಣಿ ಡಿ.ಬಿ.ಚಂದ್ರೇಗೌಡ



ಮಾನ್ಯರೆ,

ಹಿರಿಯ ರಾಜಕೀಯ ಮುತ್ಸದ್ದಿ, ಮಾಜಿ ಸ್ಪೀಕರ್ ಡಿ.ಬಿ.ಚಂದ್ರೇಗೌಡ, ವಯೋಸಹಜ ಕಾಯಿಲೆಗಳಿಂದಾಗಿ ತಮ್ಮ 87 ವಯಸ್ಸಿನಲ್ಲಿ ನಿಧನರಾಗಿದ್ದಾರೆ. ವಿಧಾನ ಸಭೆಯ ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕನಾಗಿ, ರಾಜ್ಯ ಸಚಿವರಾಗಿ, ವಿಧಾನ ಸಭೆ ಹಾಗೂ ಪರಿಷತ್ತಿನ ಸದಸ್ಯರಾಗಿ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರಾಗಿ ಡಿ.ಬಿ.ಚಂದ್ರೇಗೌಡ, ರಾಜಕೀಯ ರಂಗದಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದ್ದಾರೆ. ಮೂಲತಃ ಕಾಂಗ್ರೆಸ್ಸಿಗರಾಗಿದ್ದ ಚಂದ್ರೇಗೌಡ ನಂತರ, ಜನತಾ ಪಕ್ಷ ಹಾಗೂ ಕೊನೆಗೆ ಬಿಜೆಪಿ ಸೇರಿದ್ದರು. ತಮ್ಮ ಖಡಕ್ ಮಾತುಗಳಿಗೆ ಹೆಸರಾದ ಚಂದ್ರೇಗೌಡ, ಓರ್ವ ಉತ್ತಮ ಸ್ಪೀಕರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಸಮಾಜವಾದಿ ಹಾಗೂ ಲೋಹಿಯಾವಾದಿ ಸಿದ್ಧಾಂತಗಳಿಗೆ ಬದ್ಧರಾಗಿ ಮೌಲ್ಯನಿಷ್ಠ ರಾಜಕಾರಣಿ ಎಂದೇ ಹೆಸರಾಗಿದ್ದರು. ಅಜಾತಶತ್ರು ಅನ್ನುವ ರೀತಿಯಲ್ಲಿ ಎಲ್ಲಾ ಪಕ್ಷಗಳ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು.

ಚಂದ್ರೇಗೌಡರು ತಾವು ಆಯ್ಕೆಗೊಂಡಿದ್ದ ಚಿಕ್ಕಮಗ ಳೂರು ಲೋಕಸಭಾ ಕ್ಷೇತ್ರವನ್ನು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಬಿಟ್ಟು ಕೊಟ್ಟು, ದೇಶವ್ಯಾಪಿ ಗಮನ ಸೆಳೆದಿದ್ದರು. ನಂತರ, 1983 ರಲ್ಲಿ ಕರ್ನಾಟಕ ಕ್ರಾಂತಿ ರಂಗ ಸೇರಿದರು. ಮುಂದೆ, ಜನಾಪಕ್ಷ, ಜನತಾ ದಳ ಮುಂತಾದ ಪಕ್ಷ ಸೇರಿದ್ದರು. ಅಂತಿಮವಾಗಿ ಬಿಜೆಪಿ ಸೇರಿ, ಬೆಂಗಳೂರು ಉತ್ತರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗುವ ಮೂಲಕ ತಮ್ಮ ರಾಜಕೀಯ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದರು. ಕೆಲವು ವರ್ಷಗಳ ಹಿಂದೆ ಸಕ್ರಿಯ ರಾಜಕೀಯದಿಂದ ನಿವೃತ್ತರಾಗಿದ್ದ ಚಂದ್ರೇಗೌಡ, ತಮ್ಮ ಕುರುಚಲು ಗಡ್ಡದ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದರು. ಬಂಗಾರಪ್ಪನವರಂತೆ, ಅವರು ಕೂಡ, ವರ್ಣರಂಜಿತ ರಾಜಕಾರಿಣಿಯಾಗಿದ್ದರು. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಶೀಘ್ರ ಬರ ಪರಿಹಾರದ ಮೊತ್ತ ಬಿಡುಗಡೆಗೆ ಮನವಿ

ಮಾನ್ಯರೆ,


ರಾಜ್ಯದಲ್ಲಿ ಈ ವರ್ಷ ವಾಡಿಕೆಯಷ್ಟು ಮಳೆ ಸುರಿಯದ ಕಾರಣ ಕೃಷಿ ವಲಯ ಕೈಕೊಟ್ಟಿದೆ. ಇದರಿಂದ ಆಹಾರ ಉತ್ಪಾದನೆ ಕುಂಠಿತವಾಗಿದ್ದು, ರೈತರ ಆದಾಯ ನಷ್ಟವಾಗಿದೆ. ರಾಜ್ಯ ಸರ್ಕಾರ ಈಗಾಗಲೇ 224 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ.

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ಈಗಾಗಲೇ ರಾಜ್ಯದ ಹಲವು ಪ್ರದೇಶಗಳಿಗೆ ಭೇಟಿ ನೀಡಿ ಭೌತಿಕ ಪರಿಶೀಲನೆ, ಸಮೀಕ್ಷೆ ನಡೆಸಿದೆ. ಏತನ್ಮಧ್ಯೆ ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಪ್ರತ್ಯೇಕ ಬರ ಅಧ್ಯಯನ ಮಾಡುವ ಅಗತ್ಯ ಏನಿದೆ? "ಬರ" ವಿಷಯದಲ್ಲೂ ಪಕ್ಷಗಳು ರಾಜಕೀಯ ಮಾಡುತ್ತಿರುವುದು ಸಂಕಷ್ಟದ ಸಮಯದಲ್ಲಿ ಸರಿಯಾದ ನಡೆಯಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡು ಶೀಘ್ರ ಬರ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಿ ರೈತರ ಸಂಕಷ್ಟಕ್ಕೆ ನೆರವಾಗಬೇಕು. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ಆರೋಪ ಮಾಡುವುದನ್ನು ಬಿಡಬೇಕು. ಬರ ಪರಿಹಾರ ಮೊತ್ತ ತರಲು ಪಕ್ಷಭೇದ ಮರೆತು ಸರ್ವಪಕ್ಷಗಳ ಜನಪ್ರತಿನಿಧಿಗಳು ಸಂಘಟಿತ ಪ್ರಯತ್ನ ಮಾಡಬೇಕು. ಒಬ್ಬರ ವಿರುದ್ಧ ಇನ್ನೊಬ್ಬರು ಆರೋಪ–ಪ್ರತ್ಯಾರೋಪ ಮಾಡುವ ಸಮಯ ಇದಲ್ಲ.

–ಪ್ರಸಾದ್ ಜಿ.ಎಂ, ಮೈಸೂರು

ಜೆ.ಬಿ. ರಂಗಸ್ವಾಮಿಯವರ ಅಮೋಘವಾದ ಲೇಖನವಿದು!

ಮಾನ್ಯರೆ,



ದಿನಾಂಕ 1.11.2023 ರಂದು ಜೆ.ಬಿ. ರಂಗಸ್ವಾಮಿ (ನಿವೃತ್ತ ಪೊಲೀಸ್ ಅಧಿಕಾರಿ) ಬರೆದ ಲೇಖನ ಈಗಿನ ಜನರಿಗೆ ಕಣ್ತೆರೆಸುವಂತಿದೆ. ವಿಧಾನಸಭೆಯಲ್ಲಿ ಭಾರೀ ಬಹುಮತದಿಂದ (Thumming majority) ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ತೀರ್ಮಾನಿಸಿದ್ದು, ಈ ಐವತ್ತು ವರ್ಷಗಳ ನಂತರ ಕೆಲವು ಬದಲಾವಣೆ ಬಯಸುತ್ತಿರುವುದು ಅನುಚಿತ ಹಾಗೂ ಇಂಥಹವರು ಕರ್ನಾಟಕದ ಜನರೇ ಎಂದು ಆಶ್ಚರ್ಯವಾಗುತ್ತಿದೆ. ಮುಂದೆ ಈ ತೆರನಾದ ವರ್ತನೆ ಫ್ಯಾಸಿಸಂಗೆ ಕಾರಣವಾಗಬಹುದು.

ಈ ಹಿಂದೆ 250 ವರ್ಷಗಳು ಮುಸಲ್ಮಾನರು, 150 ವರ್ಷ ಆಂಗ್ಲಿಯರ ಆಡಳಿತದಿಂದ ಇನ್ನೂ ನಾವು ಪಾಠ ಕಲಿತಿಲ್ಲ – ಆಶ್ಚರ್ಯ!

–ಎಂ. ಶ್ರೀಕಾಂತ, ರೂಪಾನಗರ, ಮೈಸೂರು.

ದಿನಾಂಕ 1.11.2023ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆಯ 'ಸಮಯೋಚಿತ' ಅಂಕಣದಲ್ಲಿ ಜೆ.ಬಿ. ರಂಗಸ್ವಾಮಿ ಅವರ 'ಕಗ್ಗಂಟಾಗಿದ್ದ ಕರ್ನಾಟಕ!; ಅರಸು ಕನಸು ಅಂತೂ ನನಸು' ಲೇಖನದಲ್ಲಿ ದಿವಂಗತ ಡಿ. ದೇವರಾಜ ಅರಸು ಅವರು, ಈ ನಾಡಿಗೆ ಕರ್ನಾಟಕ ಎಂದು ನಾಮಕರಣ ಮಾಡಲು ತೋರಿದ ಇಚ್ಛಾಶಕ್ತಿಗೆ ಪೂರಕವಾದ ಸಂಗತಿಗಳನ್ನು ಎಳೆ ಎಳೆಯಾಗಿ ನಿರೂಪಿಸಿದ್ದಾರೆ. ಈ ಲೇಖನ ಬೋಧಪ್ರದವಾಗಿ, ಪರಿಣಾಮಕಾರಿಯಾಗಿ ಮೂಡಿ ಬರಲು ಕಾರಣವಾದ 'ಮೈಸೂರು ಮಿತ್ರ' ಬಳಗ ಹಾಗೂ ಲೇಖಕರಾದ ಜೆ.ಬಿ. ರಂಗಸ್ವಾಮಿ ಅವರಿಗೆ ನಮನಪೂರ್ವ ಅಭಿನಂದನೆಗಳು. ಒಟ್ಟು ಸಂಚಿಕೆ ಸಂಗ್ರಹಯೋಗ್ಯ.

– ಎ.ಡಿ. ನಂಜುಂಡಸ್ವಾಮಿ, ಹೆಬ್ಬಾಳು 1ನೇ ಹಂತ, ಮೇಟಗಳ್ಳಿ, ಮೈಸೂರು.



ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

ಸಂಸ್ಮರಣೆ

ಕನ್ನಡ ನನ್ನ ಮೊದಲ ಪ್ರೀತಿ... ಎರಡನೆಯ ಪ್ರೀತಿಯೂ ಅದೇ... ಡಾ. ಹಾ.ಮಾ.ನಾಯಕರು!

ಅದು 1992! ಮೈಸೂರಿನ ರೈಲ್ವೇ ನಿಲ್ದಾಣದಲ್ಲಿ ಅಂದು ರೈಲು ರೋಕೋ ಚಳುವಳಿ. ಮೊದಲ ಮೂರು ಪ್ಲಾಟ್ ಫಾರಂಗೆ ಬಂದಿದ್ದ ರೈಲುಗಳನ್ನು ಚಳುವಳಿಗಾರರು ತಡೆದು ನಿಲ್ಲಿಸಿದ್ದರು. ಮಧ್ಯಾಹ್ನದ ಹೊತ್ತಿಗೆ ಇನ್ನೊಂದು ರೈಲೂ ಬಂತು. ಅದನ್ನೆಲ್ಲೋ ದೂರದಲ್ಲೇ ತಡೆದರು.

ಇತ್ತ ಚಳುವಳಿಗಾರರನ್ನೆಲ್ಲ ವ್ಯಾನಿನಲ್ಲಿ ತುಂಬಿ ಕಳಿಸಿದೆವು. ಪಾಪ, ದೂರದಲ್ಲೇ ನಿಂತ ರೈಲಿನ ಪ್ರಯಾಣಿಕರು ಒಬ್ಬೊಬ್ಬರೇ ಹೆಣ ಭಾರದ ಲಗೇಜ್ ಹೊತ್ತು ಏದುಸಿರು ಬಿಡುತ್ತಾ ಬರುವಂತಾಯಿತು.

ಇತ್ತ, ರೈಲ್ವೆ ಸ್ಟೇಷನ್ ಮುಂಭಾಗದ ಆಟೋ ಸ್ಟ್ಯಾಂಡ್ ಬಳಿ ಏನೋ ಜಗಳ. ಅಲ್ಲಿಗೆ ಪೊಲೀಸರಿಬ್ಬರನ್ನು ಕಳಿಸಿದೆ. ವೃದ್ಧರೊಬ್ಬರ ಸೂಟ್‌ಕೇಸ್ ಹೊತ್ತು ತಂದ ಹಮಾಲಿ ಜೋರು ಗಂಟಲಿನ, ಏರುಧನಿಯಲ್ಲಿ ಜಗಳ ತೆಗೆದಿದ್ದ.

'ಅಲ್ಲಪ್ಪಾ ಮಾಮೂಲಿಯಾಗಿ ಕೊಡೋದೇ 30 ರಿಂದ 40 ರೂಪಾಯಿ. ನೀನು ಏಕದಂ ಇನ್ನೂರು ಕೇಳಿದರೆ ನ್ಯಾಯಾ ಇದೆಯಾ... ವೃದ್ಧರೊಬ್ಬರ ತಕರಾರು.

ಕೊನೆಗೆ ಅವರಿಬ್ಬರನ್ನೂ ಪೊಲೀಸರು ನನ್ನ ಬಳಿ ಕರೆ ತಂದರು.

'ಯಾಕಲೇ! ವಯಸ್ಸಾದವರು ಸಿಕ್ರು ಅಂತ ಹೆಂಗೆ ಬೇಕಾದ್ರೂ ಸವಾರಿ ಮಾಡಬೌದು ಅಂದ್ಕೊಂಡಿದ್ದೀಯಾ' ಗುಟುರು ಹಾಕಿದೆ.

'ಇಲ್ಲಾ ಸಾರ್. ನಾಲ್ಕು ಪ್ಲಾಟ್ ಫಾರಂ ದಾಟಿ ಹೊತ್ಕೊಂಡು ಬಂದಿದ್ದೀನಿ. ಈ ಸೂಟ್ ಕೇಸಂತೂ ಹೆಣಭಾರ. ಇವ್ರಿಗೇ ಗೊತ್ತೈತೆ' ಎಂದ.

ಸರಿ. ಅವೆಲ್ಲಾ ಮಾತು ಬೇಡ. ಈಗ ಫೈನಲ್ಲಾಗಿ ಹೇಳು ಎಷ್ಟು ಕೊಡ್ಬೇಕೂಂತ?

ಎಪ್ಪತ್ತು ಕೊಡಲಿ ಸಾರ್. ಡಬ್ಬಲ್ ಕೆಲ್ಸ ಆಗೈತೆ ಎಂಬತ್ತು ಕೊಡಿ ಎಂದು ಆ ಹಿರಿಯರಿಗೆ ಹೇಳಿದೆ. ಹಮಾಲಿಗೆ, ಆ ಲಗೇಜ್ ತಗಂಡೋಗಿ ನನ್ನ ಜೀಪಿಗಿಡು ಎಂದೆ.

ವೃದ್ಧರು ಹೌಹಾರಿದರು.

ಕೇಸೇನೂ ಬೇಡ ಸಾರ್. ಆಟೋದಲ್ಲಿ ಹೋಗ್ತೀನಿ. ಜಗಳ ಮುಗಿಯಿತು ಅಂದ್ರೆ ಇನ್ನೇನೋ ಜಟಾಪಟಿ ಶುರುವಾಯ್ತಲ್ಲಪ್ಪಾ ಎಂಬ ಆತಂಕ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.


ಬಂದೋಬಸ್ತ್ ಡ್ಯೂಟಿ ಮುಗಿದಿದೆ. ನಾನೂ ನಿಮ್ಮನೆ ಕಡೆಗೇ ಹೋಗ್ತಿದ್ದೇನೆ. ಡ್ರಾಪ್ ಮಾಡ್ತೀನಿ ಕೂತ್ಕಳ್ಳಿ ಎಂದೆ..

ಅವರು ಬೇರ‍್ಯಾರು ಅಲ್ಲ; **ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿರ್ಗಮಿಸಿದ್ದ ಡಾ. ಹಾ.ಮಾ. ನಾಯಕರು.**

ಜೀಪಿನಲ್ಲಿ ಹೋಗುತ್ತಾ ನನ್ನ ಪರಿಚಯ ಹೇಳಿಕೊಂಡೆ. ಕಾಲೇಜು ದಿನಗಳಿಂದಲೂ ನಾನವರ ಅಂಕಣಗಳ ಅಭಿಮಾನಿ ಎಂದು ಅವರ ಅನೇಕ ಪುಸ್ತಕಗಳ ಹೆಸರು ಹೇಳಿದೆ. ಅವರಿಗೂ ತರಂಗದಲ್ಲಿ ತಿಂಗಳ ಹಿಂದೆ ನಾನು ಬರೆದಿದ್ದ 'ಜೇಬುಗಳ್ಳರು' ಲೇಖನ ನೆನಪಿತ್ತು.

ನೀವು ಜೇಬುಗಳ್ಳರ ವಿಶಿಷ್ಟ ಪದಗಳ ಬಗ್ಗೆ ಬರೆದಿದ್ದರಲ್ಲಾ ಇಪ್ಪತ್ತು ರೂಪಾಯಿ ನೋಡಿದರೆ ಸಾಕು. ಈಗಲೂ ನನಗೆ ಕನಕಾಂಬರ ಹೂವು ನೆನಪಾಗುತ್ತೆ !? ಅಂದರು.

ಆ ಲೇಖನದಲ್ಲಿ ಜೇಬುಗಳ್ಳರು ಬಳಸುವ ಅನೇಕ ಶಬ್ದಗಳ ಬಗ್ಗೆ ಉಲ್ಲೇಖಿಸಿದ್ದೆ. ಅವೆಲ್ಲ ಅವರುಗಳದ್ದೇ ಗುಪ್ತ code wordಗಳು. ಆರ್ಟಿಸ್ಟ್–ಪಕ್ಕಾ ಜೇಬುಗಳ್ಳ; ಡಾಲಿ– ಪೊಲೀಸ್ ಪೇದೆ; ಅಬೂರ್–ಸಬ್ ಇನ್ಸ್‌ಪೆಕ್ಟರ್; ಅಡಿಕಟ್ಟು –ಬಸ್ ಹತ್ತುವಾಗ ಕೆಳಗಿನಿಂದ ನುಗ್ಗಾಡುವವರು; ಥಡಿಕರ್ಕೆ ಆರ್ವೋ–ಪರಿಸ್ಥಿತಿ ಹೇಗಿದೆ ಅಂತ ನೋಡಿ ಬಾ; ಸರ್ ಗಾಗ–ಬಾಯಲ್ಲಿ ಉಸಿರಾಡುವ ಬಕರಾ, ಅನ್ಯಮನಸ್ಕ..... ಇತ್ಯಾದಿ.



ಅವರ ಮನೆ ಬಂತು. ಜೀಪ್ ಡ್ರೈವರ್ ಸೂಟ್‌ಕೇಸ್ ಇಳಿಸಿದ. ಬೀಳ್ಕೊಂಡು ಹೋಗುವಾಗ ಡ್ರೈವರ್ ಅಂದ; ಅದರ ಭರ್ತಿ ಬರೀ ಪುಸ್ತಕಗಳೇ ಇದ್ದೋ ಸಾರ್. ಹೆಣಭಾರ!?

ಅಂದಿನ ಅವರ ಪರಿಚಯ ಆಳವಾಯಿತು. ಅವರ ಆಪ್ತ ಸ್ನೇಹವಲಯ ನನಗೂ ಬಳಕೆಯಾದರು. ಒಮ್ಮೆ ಯಾವುದೋ ಮದುವೆಗೆ ಒಟ್ಟಿಗೆ ಹೋಗುವುದಿತ್ತು. ಎಚ್ಚೆಸ್ಕೆ, ಪ್ರಕಾಶಕ ಟಿ.ಎಸ್. ಛಾಯಾಪತಿಯವರನ್ನು ಕರೆದುಕೊಂಡು ಅವರ ಮನೆಯ ಬಳಿಗೆ ಹೋದೆ. ನಮಗಾಗೇ ಕಾಯುತ್ತಿದ್ದ ನಾಯಕರು ಲಗುಬಗೆಯಿಂದ ಬಂದು ಕಾರು ಹತ್ತಿ ಕುಳಿತರು. ಸ್ಟಾರ್ಟ್ ಮಾಡಿದೆ. ಅಷ್ಟರಲ್ಲಿ ಪೇಪರ್ ಹಾಕುವವ ಬಂದ. ಪುನಃ ಇಳಿದು ಹೋಗಿ ಸುಧಾ ಪತ್ರಿಕೆಯ ಮೇಲೆ ಕಣ್ಣಾಡಿಸುತ್ತ ನಿಂತರು. ಆ ದಿನಗಳಲ್ಲಿ ಅವರ ಅಂಕಣಮಾಲೆ ಬರುತ್ತಿತ್ತು.

'ಲೇಖಕ ಎಷ್ಟೇ ದೊಡ್ಡವನಾದರೂ ತನ್ನ ಬರಹಗಳು ಅಂದ್ರೆ ಮಗುವಿನ ಪ್ರೀತಿ ನೋಡಿ' ಉದ್ಗರಿಸಿದರು ಎಚ್ಚೆಸ್ಕೆ. ದಾರಿ ಮಧ್ಯೆ ಛಾಯಾಪತಿಯವರು ನಾಯಕರನ್ನು ಕೇಳಿದರು.

'ತಮ್ಮ ಅಂಕಣಗಳು ಒಂದು ಪುಟ ಅಂದ್ರೆ ಒಂದೇ ಪುಟಕ್ಕೆ ಸರಿಯಾಗಿ ಮುಕ್ತಾಯ ಆಗಿರುತ್ತವೆ. ಅದರ ಲೆಕ್ಕಾಚಾರ ಹೇಗೆ ಸರ್'

'ಹಾಗೇನಿಲ್ಲ. ಅದೆಷ್ಟು ರೂಢಿಯಾಗಿದೆ ಅಂದ್ರೆ ಪತ್ರಿಕೆ ಪುಟದ ಕೊನೆಗೆ ಸರಿಯಾಗಿ ಲೇಖನ ಮುಕ್ತಾಯವಾಗುತ್ತೆ. ಅದಕ್ಕಾಗಿ ವಿಶೇಷ ಯತ್ನವನ್ನೂ ಮಾಡೋದಿಲ್ಲ. ನನಗೂ ಅದು ವಿಸ್ಮಯ' ಅಂದರು.

ಅಂಕಣ ಬರಹಕ್ಕಾಗಿಯೇ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದವರು ಡಾ. ಹಾ.ಮಾ.ನಾ. ಅವರು.

* * *

1979ರಲ್ಲಿ ಲಂಕೇಶ್ ಪತ್ರಿಕೆ ಪ್ರಾರಂಭವಾದಾಗ...

ಸಹ ಲೇಖಕ–ಅಧ್ಯಾಪಕನೊಬ್ಬ ಪತ್ರಿಕೆ ಮಾಡಿದ್ದಾರೆಂದು ಹಾ.ಮಾ.ನಾಯಕರು ಮೆಚ್ಚಿ ಲೇಖನ ಬರೆದು ಶುಭ ಹಾರೈಸಿದ್ದರು.

ಮುಂದೆ 1982ರ ಗೋಕಾಕ್ ಚಳುವಳಿಯ ವೇಳೆ ಅವರನ್ನು ಬೇಕೆಂದೇ ಹಾಮಾನಾ, ವಾಟಾನಾ ಹಂಪನಾ ಎಂಬ ಮೂವರು......! ಎಂದು ಹೀಯ್ಯಾಳಿಸಿ ಲಂಕೇಶ್ ಬರೆದರು.

ಲಂಕೇಶರನ್ನು ಕುರಿತು ಹಾ.ಮಾ.ನಾಯಕರು ಆಗ ಬರೆದಿದ್ದ ಮಾತು ಇದು;

'ಎಂತಹ ಕ್ಷುದ್ರ ಜಂತುವಿನಿಂದಲೂ ಕಲಿಯುವ ಪಾಠ ಒಂದಿರುತ್ತದೆ ಎಂದು ಹೇಳುತ್ತಾರೆ. ಆದರೆ ಈ ಲಂಕೇಶನಿಂದ ಕಲಿಯುವಂತಹ ಒಂದೇ ಒಂದು ಸಂಗತಿಯೂ ಇಲ್ಲ'

> "ಲೇಖಕ ಎಷ್ಟೇ ದೊಡ್ಡವನಾದರೂ ತನ್ನ ಬರಹಗಳು ಅಂದ್ರೆ ಮಗುವಿನ ಪ್ರೀತಿ ನೋಡಿ' ಉದ್ಗರಿಸಿದರು ಎಚ್ಚೆಸ್ಕೆ. ದಾರಿ ಮಧ್ಯೆ ಛಾಯಾಪತಿಯವರು ನಾಯಕರನ್ನು ಕೇಳಿದರು. 'ತಮ್ಮ ಅಂಕಣಗಳು ಒಂದು ಪುಟ ಅಂದ್ರೆ ಒಂದೇ ಪುಟಕ್ಕೆ ಸರಿಯಾಗಿ ಮುಕ್ತಾಯ ಆಗಿರುತ್ತವೆ. ಅದರ ಲೆಕ್ಕಾಚಾರ ಹೇಗೆ ಸರ್' 'ಹಾಗೇನಿಲ್ಲ. ಅದೆಷ್ಟು ರೂಢಿಯಾಗಿದೆ ಅಂದ್ರೆ ಪತ್ರಿಕೆ ಪುಟದ ಕೊನೆಗೆ ಸರಿಯಾಗಿ ಲೇಖನ ಮುಕ್ತಾಯವಾಗುತ್ತೆ. ಅದಕ್ಕಾಗಿ ವಿಶೇಷ ಯತ್ನವನ್ನೂ ಮಾಡೋದಿಲ್ಲ. ನನಗೂ ಅದು ವಿಸ್ಮಯ' ಅಂದರು. ಅಂಕಣ ಬರಹಕ್ಕಾಗಿಯೇ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದವರು ಡಾ. ಹಾ.ಮಾ.ನಾ. ಅವರು.

* * *

ಡಾ.ಹಾಮಾ ನಾಯಕರು ಗುಲ್ಬರ್ಗಾ ವಿಶ್ವವಿದ್ಯಾ ಲಯದ ಕುಲಪತಿಯಾಗಿದ್ದಾಗ ನಡೆದ ಘಟನೆ ಕುರಿತು ಲಂಕೇಶ್ ಪತ್ರಿಕೆಯಲ್ಲಿ ಅವಹೇಳನಕಾರಿ ಲೇಖನವೊಂದು ಪ್ರಕಟವಾಗಿತ್ತು. ನಾಯಕರ ಪಾತ್ರವೇ ಇರದಿದ್ದರೂ ವಿನಾಕಾರಣ ಅವರನ್ನು ತೇಜೋವಧೆ ಮಾಡಲಾಗಿತ್ತು.

ಪ್ರಕರಣ ಕೋರ್ಟಿನ ಮೆಟ್ಟಿಲೇರಿತು. ಲಂಕೇಶ್ ಪ್ರತಿ ಬಾರಿಯೂ ತಮ್ಮ 'ಬಿಡುವಿಲ್ಲದ' ಕಾರ್ಯಕ್ರಮಗಳಿಂದಾಗಿ ಕೋರ್ಟಿಗೆ ಹಾಜರಾಗುತ್ತಿರಲಿಲ್ಲ.

ಈ ಬಗೆಯ ದುರುದ್ದೇಶಪೂರ್ವಕ ಗೈರು ಹಾಜರಿಯಿಂದ ನ್ಯಾಯಾಲಯವನ್ನು ಅವಮಾನಿಸುತ್ತಿದ್ದಾರೆಂಬ ಆಕ್ಷೇಪ ಸಲ್ಲಿಸಲಾಯಿತು. ನಾನ್ ಬೇಯ್ಲಬಲ್ ವಾರಂಟ್ ಜಾರಿಯಾಯಿತು. ಮರುಕ್ಷಣವೇ ಲಂಕೇಶ್ ರಾಜಿ ಸಂಧಾನಕ್ಕೆ ಬಂದರು. ಕ್ಷಮೆ ಕೇಳಿದರು.

ಅದಕ್ಕೆ ನಾಯಕರೆಂದರು; 'ಇದನ್ನೇ ಪತ್ರಿಕೆಯಲ್ಲಿ ಪ್ರಕಟಿಸಿರಿ. ಕೇಸು ವಾಪಸ್ ತೆಗೆದುಕೊಳ್ಳುತ್ತೇನೆ.'

ಹಾಗೆ ಪ್ರಕಟಿಸಿದರೆ ತನ್ನ ಪತ್ರಿಕೆಯ 'ಕ್ರೆಡಿಬಿಲಿಟಿ (ವಿಶ್ವಾಸಾರ್ಹತೆ)' ಕಡಿಮೆ ಆಗುತ್ತದೆ ಅಂತ ಅವಲತ್ತುಕೊಂಡ ಲಂಕೇಶ್‌ಗೆ ನಾಯಕರು; 'ನಿಮ್ಮ ಕ್ರೆಡಿಬಿಲಿಟಿ ಉಳಿಸಲು ನನ್ನ ಮರ್ಯಾದೆಯನ್ನು ಹರಾಜು ಹಾಕಲೇ'

ಕೊನೆಗೂ ಕೋರ್ಟ್‌ನಲ್ಲಿ ಲಂಕೇಶ್ ಬೇಷರತ್ತಾಗಿ ಕ್ಷಮಾಪಣೆ ಕೇಳಿದ ನಂತರವೇ ನಾಯಕರು ತಮ್ಮ ಮೊಕದ್ದಮೆಯನ್ನು ಹಿಂದೆ ತೆಗೆದುಕೊಂಡರು. ಆದರೆ ಈ ಬಗೆಯ ಮಿಥ್ಯಾರೋಪದ ಭರ್ತ್ಸನೆ ಅವಮಾನವನ್ನು ನುಂಗಿಕೊಂಡು ಜೀವನವಿಡೀ ಕೊರಗಿದ ಅದೆಷ್ಟು ಜನರು ಇದ್ದರೋ ಗೊತ್ತಿಲ್ಲ.

ಲಂಕೇಶ್ ತೀರಿಕೊಂಡಾಗ ಎಲ್ಲ ಪತ್ರಿಕೆಗಳಲ್ಲೂ 'ಅಗಲಿದ ಜೀವ', 'ಸಾಕ್ಷಿ ಪ್ರಜ್ಞೆ' ಅಂತೆಲ್ಲ ಸವಕಲು ಪದಗಳಲ್ಲಿ ಶ್ರದ್ಧಾಂಜಲಿ ಬರುತ್ತಿದ್ದಾಗ, ಮೇಲಿನ ಪ್ರಕರಣವನ್ನು ಉಲ್ಲೇಖಿಸಿ ಹಾ ಮಾ ನಾಯಕರು ಅಂಕಣವನ್ನು ಬರೆದರು. ಕಹಿಯನ್ನು ಬದಿಗಿಟ್ಟು ಲಂಕೇಶ್ ಬಗ್ಗೆ ನಾಲ್ಕಾರು ಒಳ್ಳೆಯ ಮಾತು ಬರೆದಿದ್ದರು, 'ಲಂಕೇಶ್ ಉತ್ತಮ ಕತೆಗಾರ, ಸಾಹಿತಿ. ಅವರು ಪತ್ರಿಕೆ ಪ್ರಾರಂಭಿಸಿದ್ದರಿಂದ ಪತ್ರಿಕೋದ್ಯಮವೇನೂ ಶ್ರೀಮಂತವಾಗಲಿಲ್ಲ. ಆದರೆ ಕನ್ನಡ ಸಾಹಿತ್ಯಕ್ಕೆ ನಷ್ಟವಾಯಿತು'!.

* * *

ಇನ್ನೊಂದು ಪ್ರಸಂಗ

ಕಾರ್ಗಿಲ್ ವಿಜಯೋತ್ಸವದ ಸಲುವಾಗಿ ಡಾ.ರಾಜ್ ರಸಮಂಜರಿ ಕಾರ್ಯಕ್ರಮ ಮೈಸೂರಿನಲ್ಲಿ ನಡೆಯಿತು. ಉದಯ ಟಿವಿಯ ನೇರ ಪ್ರಸಾರ. ಕಾರ್ಯಕ್ರಮದ ನಿರೂಪಣೆ ನನ್ನದೇ.

ಕಾರ್ಯಕ್ರಮಕ್ಕೆ ಮೊದಲು ತೆರೆಯ ಹಿಂದುಗಡೆ ರಂಗಪೂಜೆ ನಡೆಯಿತು.

ಮುಖ್ಯ ಅತಿಥಿಗಳಾಗಿ ಬಂದಿದ್ದ ಡಾ.ಹಾ.ಮಾ. ನಾಯಕರು, ಕೆ.ಎಸ್. ಅಶ್ವಥ್ ಮತ್ತು ಎಚ್ಚೆಸ್ಕೆ, ಪ್ರಭಾ ಚಿತ್ರಮಂದಿರದ ವಾಸುದೇವ ಮೂರ್ತಿಯವರು ಕಲಾಮಂದಿರದಲ್ಲಿ ಆಸೀನರಾಗಿದ್ದರು. ಅವರನ್ನು ವೇದಿಕೆ ಪರದೆಯ ಹಿಂಭಾಗಕ್ಕೆ ಕರೆದೊಯ್ದೆ ಸ್ಟೇಜಿನ ಒಳಗಡೆ ನಡೆಯುತ್ತಿದ್ದ ಪೂಜಾ ಸಿದ್ಧತೆ ನಡೆಯುತ್ತಿತ್ತು. ಡಾ.ರಾಜ್ ಸೇರಿದಂತೆ ಅತಿಥಿಗಳೆಲ್ಲರೂ ಒಂದೆಡೆ ನಿಂತಿದ್ದರು. ಮಾತಿಗೂ ಸಮಯವಿತ್ತು. ಡಾ.ಹಾ.ಮಾ. ನಾಯಕರನ್ನು ರಾಜ್ ಅವರಿಗೆ ಪರಿಚಯಿಸುತ್ತಾ, 'ತಮಗೆ ಡಾಕ್ಟರೇಟ್ ಕೊಡಲೇಬೇಕೆಂದು ಯೂನಿವರ್ಸಿಟಿ ಸಭೆಯಲ್ಲಿ ಒತ್ತಾಯ ಮಾಡಿದ್ದು ಇವರೇ ಸಾರ್.

ಕನ್ನಡ ಚಿತ್ರಗಳನ್ನು ಬಿಟ್ಟು ಬೇರ‍್ಯಾವ ಭಾಷೆಯಲ್ಲೂ ನಟಿಸೋದಿಲ್ಲ ಎಂದು ಪ್ರತಿಜ್ಞೆ ಮಾಡಿರುವ ಏಕೈಕ ನಟ ರಾಜಕುಮಾರ್. ಅವರಿಗಲ್ಲದೆ ಯಾರಿಗೆ ಡಾಕ್ಟರೇಟ್ ಕೊಡ್ತೀರಿ ಎಂದು ವಾದ ಮಾಡಿದ್ದ ಡಾ.ಹಾ.ಮಾ. ನಾಯಕರು ಇವರೇ ಎಂದು ಹೇಳಿದೆ.

ಡಾ.ರಾಜ್ ಅವರಿಗೆ ಮಾತೇ ಹೊರಡಲಿಲ್ಲ. ಸುಮ್ಮನೆ ನಾಯಕರ ಕೈಗಳನ್ನು ವಿನೀತರಾಗಿ ಹಿಡಿದುಕೊಂಡರು. ಕೃತಜ್ಞತೆ ಎಂಬುದು ಅವರ ನರನಾಡಿಗಳಲ್ಲೂ ಪ್ರವಹಿಸುತ್ತಿತ್ತು.

ಡಾ.ನಾಯಕರೂ ತಮ್ಮ ಹಾಗೇ ಕನ್ನಡದ ದೀಕ್ಷೆ ಪಡೆದವರು. ನನ್ನ ಮೊದಲ ಆದ್ಯತೆ ಕನ್ನಡ. ಕೊನೆಯದೂ ಅದೇ ಅನ್ನೋ ಮಾತನ್ನು ಹೇಳಿದ್ದು ಇವರೇ ಸರ್. ಡಾ.ರಾಜ್ ಏನೂ ಮಾತಾಡಲಿಲ್ಲ. ನಾಯಕರನ್ನೇ ದಿಟ್ಟಿಸುತ್ತ ಅವರ ಕಣ್ಣುಗಳು ಮಗುವಿನ ಕಣ್ಣಾಗಿದ್ದವು.


ಒಂದೆರಡು ದಿನ ಕಳೆದ ಮೇಲೆ ಎಚ್ಚೆಸ್ಕೆಯವರು, ಮಹಾರಾಜ ಕಾಲೇಜಿನ ಪೆವಿಲಿಯನ್ ಮೈದಾನದಲ್ಲಿ ಸಿಕ್ಕರು. ದಿನ ನಿತ್ಯವೂ ನನಗೆ ವಾಕಿಂಗ್‌ನಲ್ಲಿ ಸಿಗುತ್ತಿದ್ದರವರು. ನಾಯಕರ ಬಗ್ಗೆ ನೀವು ರಾಜಕುಮಾರ್‌ಗೆ ಹೇಳಿದ್ದು ಒಳ್ಳೆಯದಾಯಿತು. ಅವರು ಸಾಮಾನ್ಯವಾಗಿ ಯಾವ ಸಿನಿಮಾವನ್ನೂ ನೋಡೋದಿಲ್ಲ. ನಾಯಕರ ಕನ್ನಡದ ಪ್ರೀತಿ, ರಾಜ್‌ಕುಮಾರ್ ಮತ್ತು ಗೊರೂರರಿಗೆ ಡಾಕ್ಟರೇಟ್ ಕೊಡಿಸಿತು ನೋಡಿ ಎಂದರು.

* * *

ಕನ್ನಡಕ್ಕೇ ನನ್ನ ಮೊತ್ತ ಮೊದಲ ಆದ್ಯತೆ. ಕಡೆಯದೂ ಅದೇ ಎಂದ ಡಾ.ಹಾ.ಮಾ.ನಾಯಕರು ಹಾಗೇ ಬದುಕಿದರು, ಬಾಳಿದರು. ಅವರು ಅಸ್ತಂಗತರಾಗಿ ಇಂದಿಗೆ (10–11–2000) 23 ವರ್ಷ.

ಸುಬ್ಬರಾಯನ ಕೆರೆಯ ಶ್ರೀ ಗುರು ರಾಘವೇಂದ್ರಸ್ವಾಮಿ ಮಠಕ್ಕೆ ಶ್ರೀ ಸುಬುಧೇಂದ್ರ ತೀರ್ಥ ಶ್ರೀಗಳ ಭೇಟಿ

ಮೈಸೂರು, ನ. 9– ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥ ಶ್ರೀಗಳು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸುಬ್ಬರಾಯನ ಕೆರೆಯ ನಂಜನಗೂಡು ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿ ಭಕ್ತಾದಿಗಳಿಗೆ ಆಶೀರ್ವಚನ ನೀಡಿದರು.



ಬಳಿಕ ಮಾತನಾಡಿದ ಮಂತ್ರಾಲಯದ ಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಸುಬ್ಬ ರಾಯನಕೆರೆಯ ದಡದಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳ ಮಠದ 75 ವರ್ಷಗಳ ವಜ್ರ ಮಹೋತ್ಸವ ಆಚರಣೆ ನಿಟ್ಟಿನಲ್ಲಿ ರಾಘವೇಂದ್ರ ಸ್ವಾಮಿಗಳ ವೈಭವದ ಉತ್ಸವ ಆಚರಣೆಗೆ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಪಂಡಿತರೊಂದಿಗೆ ಮೈಸೂರು ಮತ್ತು ನಂಜನಗೂಡಿನಲ್ಲಿ ಒಂದು ದಿನದ ಧಾರ್ಮಿಕ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ ಸುಬ್ಬರಾಯನಕೆರೆಯ ಮಠಕ್ಕೆ ಭಕ್ತವಲಯ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಭಕ್ತರ ಅನುಕೂಲಕ್ಕಾಗಿ ಅಭಿವೃದ್ಧಿ ಕಾರ್ಯಗಳನ್ನು ಸಹ ಕೈಗೊಳ್ಳಲು ರೂಪುರೇಷೆ ರೂಪಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕರಾದ ಟಿ.ಎಸ್. ಶ್ರೀವತ್ಸ ಸಹ ಆಶೀರ್ವಾದ ಪಡೆದರು. ನಂತರ ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಮನೆಮನೆಯಲ್ಲೂ ರಾಮ ನಾಮ ಜಪದ ಶತ ಕೋಟಿ ಶ್ರೀ ರಾಮ ತಾರಕ ನಾಮ ಜಪ ಮಹಾ ಯಜ್ಞದ ಪೋಸ್ಟರ್ ಬಿಡುಗಡೆಗೊಳಿಸಿದರು.

ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಿ ಟಿ ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ. ಶ್ರೀಕಂಠ ಕುಮಾರ್, ಪುಷ್ಪಾ ಐಯ್ಯಂಗಾರ್, ಉದ್ಯಮಿಗಳಾದ ಜಿ ರಘು, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸುಧಾಕರ, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ ಕಡಕೋಳ ಜಗದೀಶ್, ನಾಗೇಂದ್ರಬಾಬು, ಲತಾ ಬಾಲಕೃಷ್ಣ ಸುಚೀಂದ್ರ ಚಕ್ರಪಾಣಿ, ಕಿಶೋರ್, ದೇವಸ್ಥಾನ ಸಮಿತಿಯ ಸದಸ್ಯರು ಹಾಜರಿದ್ದರು.

ಬೆಳಗಾವಿಯ ಸುವರ್ಣ ಸೌಧದಲ್ಲಿ ಡಿ.4ರಿಂದ 15ರವರೆಗೆ ಚಳಿಗಾಲದ ಅಧಿವೇಶನ

ಬೆಂಗಳೂರು, ನ.9– ಬೆಳಗಾವಿಯ ಸುವರ್ಣ ಸೌಧದಲ್ಲಿ ಡಿ.4 ರಿಂದ 15ರವರೆಗೆ 10 ದಿನಗಳ ಕಾಲ ಚಳಿಗಾಲದ ಅಧಿವೇಶನ ನಡೆಸಲು ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್ ಕೆ ಪಾಟೀಲ್ ಅವರು, ಬೆಳಗಾವಿಯಲ್ಲಿ ಡಿ.4ರಿಂದ 15ರವರೆಗೆ 10 ದಿನಗಳ ಕಾಲ ವಿಧಾನ ಮಂಡಲ ಅಧಿವೇಶನ ನಡೆಸಲು ಸಂಪುಟ ಸಭೆ ನಿರ್ಧರಿಸಿದೆ ಎಂದರು.

ಸಚಿವ ಸಂಪುಟ ಸಭೆಯಲ್ಲಿ ಬರಗಾಲದ ಬಗ್ಗೆಯೂ ವಿಸ್ತೃತವಾಗಿ ಚರ್ಚೆ ಮಾಡಿದ್ದೇವೆ. ಬರ ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಮಾಡಿದ್ದೇವೆ, ಆದರೆ ಇದುವರೆಗೂ ಕೇಂದ್ರ ಸರ್ಕಾರ ನಯಾ ಪೈಸೆ ಬಿಡುಗಡೆ ಮಾಡಿಲ್ಲ. ಇವತ್ತಿನ ಸಭೆಯಲ್ಲಿ ಕೇಂದ್ರ ಸರ್ಕಾರದ ನಡೆ ವಿರುದ್ಧ ಖಂಡನೆ ವ್ಯಕ್ತಪಡಿಸಿದ್ದೇವೆ ಎಂದರು. ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಬರಗಾಲ ಪರಿಹಾರದ ಕೆಲಸಗಳು ಶುರುವಾಗಬೇಕು. ಈಗಾಗಲೇ 700–800 ಕೋಟಿ ರೂಪಾಯಿ ಜಿಲ್ಲಾಧಿಕಾರಿಗಳ ಅಕೌಂಟ್‌ನಲ್ಲಿದೆ, ಬರಗಾಲ ನಿರ್ವಹಣೆಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಲು ಸಿಎಂ ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಕನಕಪುರ ತಾಲೂಕಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮೇಲ್ದರ್ಜೆಗೆ ಏರಿಸಲು 10.38 ಕೋಟಿ ರೂ. ಬಿಡುಗಡೆ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇನ್ಫೋಸಿಸ್ ಕಂಪನಿ ವತಿಯಿಂದ ಸಿಎಸ್‌ಆರ್ ಫಂಡ್ ನಿಂದ ಕನಕಪುರದ ತಾಯಿ ಆಸ್ಪತ್ರೆ ನಿರ್ಮಿಸಲಾಗುವುದು ಎಂದು ಎಚ್.ಕೆ.ಪಾಟೀಲ್ ತಿಳಿಸಿದರು. ಇನ್ನು ವಾಯವ್ಯ ಸಾರಿಗೆಯಲ್ಲಿ16.20 ಕೋಟಿ ವೆಚ್ಚದಲ್ಲಿ 45 ಬಸ್‌ಗಳ ಖರೀದಿಗೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಹುಬ್ಬಳ್ಳಿ ಬಿ.ಆರ್.ಟಿ.ಗೆ 45 ಕೋಟಿ ರೂ. ವೆಚ್ಚದಲ್ಲಿ 100 ಬಸ್ ಖರೀದಿಗೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ ಎಂದರು.

ಮೈಸೂರು–ಮಂಗಳೂರು ನಡುವೆ ದೀಪಾವಳಿ ವಿಶೇಷ ರೈಲು ಸಂಚಾರ



ಮೈಸೂರು, ನ.9(ಪಿಎಂ)– ಹೆಚ್ಚುವರಿ ದಟ್ಟಣೆ ತಗ್ಗಿಸಲು ದೀಪಾವಳಿ ಹಬ್ಬ ಪ್ರಯುಕ್ತ ಮೈಸೂರು ಮತ್ತು ಮಂಗಳೂರು ನಡುವೆ ಸಿಂಗಲ್ ಟ್ರಿಪ್ ದೀಪಾವಳಿ ವಿಶೇಷ ರೈಲು ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ. ಸಂಖ್ಯೆ 07303ರ ರೈಲು ನ.10ರಂದು ರಾತ್ರಿ 8.30ಕ್ಕೆ ಮೈಸೂರಿನಿಂದ ಹೊರಟು, ನ.11ರ ಬೆಳಗ್ಗೆ 9.40ಕ್ಕೆ ಮಂಗಳೂರು ತಲುಪಲಿದೆ. ಮಂಡ್ಯ, ಕೆಂಗೇರಿ, ಬೆಂಗಳೂರು, ಯಶವಂತಪುರ, ಚಿಕ್ಕಬಾಣಾವರ, ನೆಲಮಂಗಲ, ಕುಣಿಗಲ್, ಶ್ರವಣಬೆಳಗೊಳ, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ, ಕುಕ್ಕೆ ಮತ್ತು ಪುತ್ತೂರು, ಬಂಟ್ವಾಳ ಮತ್ತು ಮಂಗಳೂರು ರೈಲ್ವೆ ನಿಲ್ದಾಣ ಮಾರ್ಗದಲ್ಲಿ ಸದರಿ ರೈಲು ಸಂಚರಿಸಲಿದೆ. ಸಂಖ್ಯೆ 07304ರ ರೈಲು ನ.11ರಂದು ಬೆಳಗ್ಗೆ 11.40ಕ್ಕೆ ಮಂಗಳೂರಿನಿಂದ ಹೊರಟು, ನ.12ರ ರಾತ್ರಿ 12.50ಕ್ಕೆ ಮೈಸೂರಿಗೆ ಆಗಮಿಸಲಿದೆ. ಬಂಟ್ವಾಳ, ಕುಕ್ಕೆ ಪುತ್ತೂರು, ಸುಬ್ರಹ್ಮಣ್ಯ, ಸಕಲೇಶಪುರ, ಹಾಸನ, ಚನ್ನ ರಾಯಪಟ್ಟಣ, ಶ್ರವಣಬೆಳಗೊಳ, ಕುಣಿಗಲ್, ನೆಲಮಂಗಲ, ಚಿಕ್ಕಬಾಣಾವರ, ಯಶವಂತಪುರ, ಬೆಂಗಳೂರು, ಕೆಂಗೇರಿ ಮತ್ತು ಮಂಡ್ಯ ರೈಲು ನಿಲ್ದಾಣ ಮಾರ್ಗದಲ್ಲಿ ಈ ರೈಲು ಮೈಸೂರಿಗೆ ಆಗಮಿಸಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರಲ್ಲಿ ಸಿಐಡಿ ಎಡಿಜಿಪಿ ಮನಿಷ್ ಕರ್ಬಿಕರ್ ಅವರಿಂದ ಪೊಲೀಸ್ ಘಟಕಗಳ ಪರಿವೀಕ್ಷಣೆ







ಮೈಸೂರು, ನ.9(ಆರ್‌ಕೆ)–ಸಿಐಡಿ (ಆರ್ಥಿಕ ಅಪರಾಧಗಳು) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಮನಿಷ್ ಕರ್ಬಿಕರ್ ಅವರು ಮೈಸೂರಲ್ಲಿ 2 ದಿನಗಳ ಕಾಲ ಪೊಲೀಸ್ ಘಟಕಗಳ ಕಾರ್ಯವೈಖರಿ ಕುರಿತು ಪರಿವೀಕ್ಷಣೆ ನಡೆಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ನಿರ್ದೇಶನದಂತೆ ಬುಧವಾರ ಬೆಳಗ್ಗೆ 11 ಗಂಟೆಗೆ ಮೈಸೂರಿಗೆ ಆಗಮಿಸಿದ ಅವರು, ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಆರ್ಥಿಕ ಅಪರಾಧಗಳ ಕುರಿತಂತೆ ಸಭೆ ನಡೆಸಿ, ತನಿಖೆ ಪ್ರಗತಿ ಹಾಗೂ ಸೈಬರ್ ಕ್ರೈಂ ನಿಯಂತ್ರಿಸುವ ನಿಟ್ಟಿನಲ್ಲಿ ಕೈಗೊಳ್ಳುತ್ತಿರುವ ಕ್ರಮದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಮಧ್ಯಾಹ್ನದ ನಂತರ ನಗರ ವ್ಯಾಪ್ತಿಯ ಎಲ್ಲಾ ಉಪವಿಭಾಗಗಳ ಎಸಿಪಿಗಳು, ಠಾಣಾ ಇನ್ಸ್‌ಪೆಕ್ಟರ್‌ಗಳೊಂದಿಗೆ ಅಪರಾಧ, ಕಾನೂನು –ಸುವ್ಯವಸ್ಥೆ, ಸಂಚಾರ ಕುರಿತಂತೆ ಪ್ರಗತಿ ಪರಿಶೀಲಿಸಿದ ಅವರು ಬುಧವಾರ ರಾತ್ರಿ ಮೈಸೂರಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ ಸಿಎಆರ್ ಮೈದಾನದಲ್ಲಿ ಪರಿವೀಕ್ಷಣಾ ಕವಾಯತು ಪಥ ಸಂಚಲನ ನಡೆಸಿದ ಮನಿಷ್ ಕರ್ಬಿಕರ್, ಪೊಲೀಸ್ ವಂದನೆ ಸ್ವೀಕರಿಸಿದ ಬಳಿಕ ಸಿಎಆರ್ ಘಟಕ, ಪೊಲೀಸ್ ವಾಹನಗಳು, ಚಾಲಕರ ಕಾರ್ಯಕ್ಷಮತೆ, ಸ್ಪೆಷಲ್ ಬ್ರ್ಯಾಂಚ್, ಸಿಎಸ್‌ಬಿ, ಸಂಚಾರ ವಿಭಾಗ, ಶಸ್ತ್ರಾಗಾರ, ಪೊಲೀಸ್ ಬ್ಯಾಂಡ್ ಮ್ಯೂಸಿಯಂ, ಸಂಗೀತ ಉಪಕರಣಗಳು, ಮೌಂಟೆಡ್ ಪೊಲೀಸ್, ತಾತ್ಕಾಲಿಕ ಪೊಲೀಸ್ ತರಬೇತಿ ಕೇಂದ್ರ, ಶ್ವಾನ ದಳ, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ನಿರ್ವಹಣೆ ಮತ್ತು ಕಾರ್ಯವೈಖರಿ ಬಗ್ಗೆ ಪರಿಶೀಲಿಸಿದರು. ಮೈಸೂರಿನ ಪೊಲೀಸ್ ಘಟಕಗಳ ಅಧಿಕಾರಿ, ಸಿಬ್ಬಂದಿ ಕಾರ್ಯಕ್ಷಮತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಎಡಿಜಿಪಿ, ಸಿಬ್ಬಂದಿ ಕುಂದು–ಕೊರತೆ ವಿಚಾರಿಸಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎನ್.ಮುತ್ತುರಾಜ್, ಎಸ್.ಜಾಹ್ನವಿ, ಸಿಎಆರ್ ಡಿಸಿಪಿ ಎ.ಮಾರುತಿ, ಮೌಂಟೆಡ್ ಕಂಪನಿಯ ಕಮಾಂಡೆಂಟ್ ಶೈಲೇಂದ್ರ, ಎಲ್ಲಾ ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳೂ ಈ ಸಂದರ್ಭ ಉಪಸ್ಥಿತರಿದ್ದರು.

ದಿವಂಗತ ಶಂಕರ್‌ನಾಗ್ ಹುಟ್ಟುಹಬ್ಬ ಆಚರಣೆ



ಮೈಸೂರು,ನ.9–ಮೈಸೂರಿನ ಹೊಯ್ಸಳ ಟ್ರಸ್ಟ್ ಹಾಗೂ ಶ್ರೀ ಭುವನೇಶ್ವರಿ ಆಟೋ ನಿಲ್ದಾಣದ ವತಿಯಿಂದ ನಜರ್‌ಬಾದ್ ಪೊಲೀಸ್ ಸ್ಟೇಷನ್ ವೃತ್ತದಲ್ಲಿ ಖ್ಯಾತ ನಟ ದಿವಂಗತ ಶಂಕರ್‌ನಾಗ್ ಜನ್ಮದಿನಾಚರಣೆಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಚಾಲಕರಿಗೆ ಸಮವಸ್ತ್ರ ವಿತರಿಸಿ, ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾಂಗ್ರೆಸ್ ಮುಖಂಡರಾದ ಪಳನಿ ರಾಜೇಶ್, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ರವಿ ನಾಯಕ್, ವರುಣಾ ಮಹದೇವ್, ಡಾ.ಸುಶ್ರುತ್‌ಗೌಡ, ಉದ್ಯಮಿಗಳಾದ ಜಟ್ಟಿ ಹುಂಡಿ ಗೋಪಾಲ್, ಸುನೀಲ್ ನಾರಾಯಣ್, ಜೆ.ಜೆ.ಆನಂದ್, ಆಟೋ ಚಾಲಕರ ಸಂಘದ ಅಧ್ಯಕ್ಷ ಸ್ವಾಮಿ, ಲಕ್ಷ್ಮೀನಾರಾಯಣ್, ಅರಸು, ತಮ್ಮಯ್ಯ, ಲೋಕೇಶ್ ಮತ್ತಿತರು ಉಪಸ್ಥಿತರಿದ್ದರು.

ನಾಳೆ ರೈಡ್ ವಿತ್ ಪ್ರೈಡ್ ಫಾರ್ ವಾವ್ ಕಾರ್ಯಕ್ರಮ



ಮೈಸೂರು,ನ.9(ಜಿಎ)–ವಿ ಇಂಡಿಯಾ ಪ್ರೈಡ್ ಹುಮ್ಯಾನಿಟೇರಿಯನ್ ಫೌಂಡೇಶನ್‌ನಿಂದ ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಒಳಗೊಳ್ಳುವಿಕೆಯ ಜಾಗೃತಿಗಾಗಿ ನ.11ರಂದು ಬೆಳಗ್ಗೆ 11ಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ರೈಡ್ ವಿತ್ ಪ್ರೈಡ್ ಫಾರ್ ವಾವ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಸ್ಥಾಪಕಿ ಡಾ.ಅನಿತಾ ಪ್ರಸಾದ್ ತಿಳಿಸಿದರು.

ನಗರ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗತ್ವ ಅಲ್ಪಸಂಖ್ಯಾತರ ಸಾಂಸ್ಕೃತಿಕ, ಸಾಹಸಮಯ ಬದುಕನ್ನು ಪ್ರೇರೇಪಿಸುತ್ತಾ ವೈಯಕ್ತಿಕ ಬೆಳವಣಿಗೆಯನ್ನು ಖಾತರಿಗೊಳಿಸುವುದು ಸಂಸ್ಥೆ ಉದ್ದೇಶ. ಸಮಾಜವು ಅವಕಾಶ ನೀಡಿದರೆ ಮಾತ್ರ ಯಾವುದೇ ಅಭಿವೃದ್ಧಿ ಸಾಧ್ಯ. ಅದಕ್ಕಾಗಿ ಮಾರ್ಗಗಳನ್ನು ಸೃಷ್ಟಿಸುವುದೇ ಗುರಿ ಎಂದರು.

ಮಹಿಂದ್ರಾ ಸಂಸ್ಥೆ ಡೀಲರ್ ಆದ ಇಂಡಿಯಾ ಗ್ಯಾರೇಜ್ ಅವರು ನಮಗೆ ಎರಡು ಮಹಿಂದ್ರಾ ಥಾರ್ ಮತ್ತು ಒಂದು ಎಲೆಕ್ಟ್ರಿಕ್ ವಾಹನ ನೀಡಲಿದ್ದು, ಅದರಲ್ಲಿ ನಮ್ಮ ಸಮುದಾಯದ ವಿವಿಧ ಪ್ರತಿನಿಧಿಗಳು ಕುಳಿತು ಇಲ್ಲಿಂದ ಎಚ್.ಡಿ.ಕೋಟೆಯ ಕಬಿನಿ ಹಿನ್ನೀರಿಗೆ ಪ್ರಯಾಣಿಸಲಿದ್ದೇವೆ. ಈ ಜಾಗೃತಿ ಪ್ರಯಾಣಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಸಂಸದ ಪ್ರತಾಪಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಉಪಮೇಯರ್ ಜಿ. ರೂಪ ಹಾಗೂ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಸಾಥ್ ನೀಡಿದ್ದಾರೆ ಎಂದು ತಿಳಿಸಿದರು.

ರಾಜ್ಯಮಟ್ಟದಲ್ಲಿ ಕಂಚಿನ ಪದಕ



ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯಮಟ್ಟದ ಬಾಕ್ಸಿಂಗ್ ಸ್ಪರ್ಧೆಯ 48 ಕೆಜಿ ವಿಭಾಗದಲ್ಲಿ ಭಾಗವಹಿಸಿ ಕಂಚಿನ ಪದಕ ಪಡೆದ ದಟ್ಟಗಳ್ಳಿ ಬಡಾವಣೆಯಲ್ಲಿರುವ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜಿನ ಪ್ರಥಮ ವರ್ಷದ ವಿಜ್ಞಾನ ವಿಭಾಗದ ವಿದ್ಯಾರ್ಥಿ ಗುರುಚರಣ್‌ನನ್ನು ಕಾಲೇಜಿನ ಆಡಳಿತ ಅಧಿಕಾರಿ ಜಯದೇವರಾಜೇ ಅರಸ್, ಪ್ರಾಂಶುಪಾಲ ರಚನ್ ಅಪ್ಪಣ್ಣಮಯ್ಯ, ದೈಹಿಕ ನಿರ್ದೇಶಕ ಹರೀಶ್ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ನ.9–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ವಿಜಯನಗರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ತುರ್ತು ಕೆಲಸದ ನಿಮಿತ್ತ ನ.11 ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಗೋಕುಲಂ 1ನೇ ಮತ್ತು 2ನೇ ಹಂತ, ಮಾದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿಪುರಂ, ಸಿಎಫ್‌ಟಿಆರ್‌ಐ, ಡಿ.ಸಿ.ಹೌಸ್, ನರ್ಸ್ ಕ್ವಾಟ್ರಸ್, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಎಂ.ಎಂ.ಸಿ ಲೇಡಿಸ್ ಹಾಸ್ಟೆಲ್, ಜನರಲ್ ತಿಮ್ಮಯ್ಯ ರಸ್ತೆ, ಬೃಂದಾವನ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಟಾರ್ ಬೇ ಹಾಗೂ ಸುತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆರ್‌ಎಸ್‌ಎಸ್ ಹಿರಿಯ ಮುಖಂಡ ಯು.ವಿಠ್ಠಲರಾವ್ ನಿಧನ



ಮೈಸೂರು, ನ.9–ಮೈಸೂರಿನ ತಿಲಕ್‌ನಗರ ನಿವಾಸಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ದ ಹಿರಿಯರಾದ ಯು.ವಿಠ್ಠಲರಾವ್(94) ಅವರು ಗುರುವಾರ ಬೆಳಗ್ಗೆ ನಿಧನರಾದರು.

ಮೈಸೂರಿನಲ್ಲಿ 1959ರಿಂದ ಸಂಘದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಇವರು, ಶ್ರೀ ಜನಜಾಗರಣ ಟ್ರಸ್ಟ್ ಸ್ಥಾಪಕ ಅಧ್ಯಕ್ಷರಾಗಿ ಸಂಘದ ಕಾರ್ಯಾಲಯ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರಿಚ್ಛೆಯಂತೆ ದೇಹವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

ಜನ ಜಾಗರಣ ಟ್ರಸ್ಟ್‌ನ ಸಂಸ್ಥಾಪನಾ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಶಿಸ್ತಿನ ಸಿಪಾಯಿ, ಅಪ್ಪಟ ರಾಷ್ಟ್ರೀಯವಾದಿಯಾಗಿದ್ದ ಶ್ರೀಯುತ ವಿಠ್ಠಲ ರಾವ್‌ರವರ ನಿಧನದಿಂದ ತುಂಬಲಾಗದ ನಷ್ಟವಾಗಿದೆ. ಒಬ್ಬ ಸಂಘದ ಸ್ವಯಂ ಸೇವಕ ಹೇಗಿರುತ್ತಾರೆ ಎಂಬುದಕ್ಕೆ ವಿಠ್ಠಲ ರಾವ್‌ರವರು ಮಾದರಿಯಾಗಿದ್ದರು ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸರವರು ದು:ಖ ವ್ಯಕ್ತಪಡಿಸಿದ್ದಾರೆ. ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ನ.20ರವರೆಗೆ ಜಂಬೋ ಸರ್ಕಸ್ ಪ್ರದರ್ಶನ; ಶಾಲಾ ಮಕ್ಕಳಿಗೆ ರಿಯಾಯಿತಿ



ಮೈಸೂರು, ನ.9(ಎಂಕೆ)– ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಜರ್‌ಬಾದ್‌ನ ಕಾರಂಜಿಕೆರೆ ಬಳಿ, ಮೃಗಾಲಯದ ಹಿಂಭಾಗದ ಮೈದಾನದಲ್ಲಿ ನಡೆಯುತ್ತಿರುವ ಜಂಬೊ ಸರ್ಕಸ್ ನ.20ರವರೆಗೆ ಪ್ರದರ್ಶನಗೊಳ್ಳಲಿದೆ.

ಸಾಹಸ ಕಲಾ ದಂಪತಿಗಳಾದ ಪಶ್ಚಿಮ ಬಂಗಾಳದ ರೇಣುಕಾ ಮತ್ತು ಚೆನ್ನೈನ ವಿಕ್ಕಿ ನೇತೃತ್ವದ ತಂಡದಲ್ಲಿರುವ 150 ಮಂದಿ ಕಲಾವಿದರು 'ಸಿಂಗಲ್ ಸ್ಯಾರಿ ಬ್ಯಾನೆಲ್ಸ್', 'ಕ್ಯಾಂಡಲ್ ಬೋನ್ ಲೆಸ್', 'ಟವರ್ ಬಾಸ್ಕೆಟ್ ಬಾಲ್', 'ಪ್ಲಾಸ್ಟಿಕ್ ಬೋನ್ ಲೆಸ್', 'ರಷ್ಯನ್ ರಿಂಗ್ ಡ್ಯಾನ್ಸ್', 'ಗ್ಲೋಬ್ ರೈಡಿಂಗ್', 'ಪವರ್ ಲಿಫ್ಟಿಂಗ್'(ಬಾಯಿಯಿಂದ ತೂಕ ಎತ್ತುವುದು), 'ಆಫ್ರಿಕನ್ ಫೈರ್ ಡ್ಯಾನ್ಸ್', 'ಫುಟ್ ಜಗ್ಲಿಂಗ್' 'ಅಮೆರಿಕನ್ ಸ್ಪೇಸ್ ಆನ್ ವೀಲ್ಸ್', 'ಡಾಗ್ ಶೋ' ಸೇರಿದಂತೆ 26 ಬಗೆಯ ಸಾಹಸ ಪ್ರದರ್ಶನ ನೀಡಿದರೆ, ನಕ್ಕು ನಗಿಸುವ 'ಜೋಕರ್ಸ್'ಗಳ ತುಂಟಾಟ ರಂಜನೀಯವಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ: ಮಧ್ಯಾಹ್ನ 1 ಗಂಟೆಗೆ, ಸಂಜೆ 4 ಮತ್ತು 7 ಗಂಟೆ ಸೇರಿ ಪ್ರತಿನಿತ್ಯ ಮೂರು ಪ್ರದರ್ಶನಗಳಿರಲಿದ್ದು, ಮಕ್ಕಳ ದಿನಾಚರಣೆ ಅಂಗವಾಗಿ ತಂಡ ಸಮೇತವಾಗಿ ಬರುವ ವಿದ್ಯಾರ್ಥಿಗಳಿಗೆ ಟಿಕೆಟ್ ಖರೀದಿಯಲ್ಲಿ ರಿಯಾಯಿತಿ ನೀಡಲಾಗುವುದು ಎಂದು ಜಂಬೊ ಸರ್ಕಸ್ ಮಾಲೀಕ ಪ್ರೇಮ್‌ನಾಥ್ ತಿಳಿಸಿದ್ದಾರೆ.

ಮಳೆ ಹಾನಿ ಪ್ರದೇಶಗಳಲ್ಲಿ ಶಾಸಕ ಹರೀಶ್‌ಗೌಡ ಪರಿಶೀಲನೆ



ಮೈಸೂರು,ನ.9(ಎಸ್‌ಬಿಡಿ)–ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, ಮಳೆ ಹಾನಿ ಪ್ರದೇಶಗಳಿಗೆ ಗುರುವಾರ ಬೆಳಗ್ಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಂಗಳವಾರ ಮಹಾಮಳೆಯಿಂದ ಕಂಗಾಲಾಗಿದ್ದ ತಗ್ಗು ಪ್ರದೇಶದ ಮನೆಗಳ ನಿವಾಸಿಗಳಿಗೆ ಬುಧವಾರ ತಡರಾತ್ರಿ ಭಾರಿ ಮಳೆ ಸುರಿದು ನಿದ್ದೆಗೆಡಿಸಿತು. ಧಾರಾಕಾರ ಮಳೆಯಿಂದ ಹಲವು ಮನೆಗಳಿಗೆ ನುಗ್ಗಿದ ಮಳೆ ನೀರು ಹೈರಾಣಾಗಿತ್ತು. ಈ ಬಗ್ಗೆ ಕಾರ್ಪೊರೇಟರ್‌ಗಳು ಮಾಹಿತಿ ನೀಡಿದ್ದರ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ ಶಾಸಕರು ಹಾನಿ ಪ್ರದೇಶಗಳಿಗೆ ದೌಡಾಯಿಸಿದರು. ಮೇಟಗಳ್ಳಿ ವಾರ್ಡ್(ಸಂಖ್ಯೆ 7) ವ್ಯಾಪ್ತಿಯ ಬಿಎಂಶ್ರೀನಗರಕ್ಕೆ ತೆರಳಿ ನೊಂದ ನಿವಾಸಿಗಳ ಸಮಸ್ಯೆ ಆಲಿಸಿದರು. ಬಳಿಕ ಬೃಂದಾವನ ಬಡಾವಣೆ, ಹೆಬ್ಬಾಳು ನಿಂಗಯ್ಯನ ಕೆರೆ, ಹೆಬ್ಬಾಳು ಕೈಗಾರಿಕಾ ಪ್ರದೇಶಗಳಿಗೆ ಭೇಟಿ ನೀಡಿ, ಮಳೆಯಿಂದಾದ ಅವಾಂತರವನ್ನು ನೋಡಿ, ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಕೆ.ಹರೀಶ್‌ಗೌಡರು, ಮುಂಗಾರು ಸಂದರ್ಭದಲ್ಲೇ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರಿಂದ ಹೆಚ್ಚಿನ ಸಮಸ್ಯೆಯಾಗಿಲ್ಲ. ಆದರೆ ಎಡೆಬಿಡದೆ ಧಾರಾಕಾರ ಮಳೆ ಸುರಿದಿದ್ದರಿಂದ ತಗ್ಗು ಪ್ರದೇಶದ ಮನೆಯವರಿಗೆ ತೊಂದರೆಯಾಗಿದೆ. ನಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಹಾನಿಯಾಗಿಲ್ಲ. ಆದರೆ ಕೆಲ ಮನೆಗಳಿಗೆ ಚರಂಡಿ ನೀರು ನುಗ್ಗಿರುವ ಬಗ್ಗೆ ದೂರು ಬಂದಿದೆ. ಸ್ಥಳೀಯ ಕಾರ್ಪೊರೇಟರ್‌ಗಳು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಪರಿಶೀಲಿಸಿ, ಸೂಕ್ತ ಕ್ರಮಕ್ಕೆ ಸೂಚನೆ ನೀಡಿದ್ದೇನೆ ಎಂದರು. ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯ ರಮೇಶ್, ಸ್ಥಳೀಯ ಮುಖಂಡ ವಿನಯ್, ಪಾಲಿಕೆ ಎಸ್‌ಇ ಸಿಂಧು, ಇಇ ಮಹೇಶ್, ವಾಣಿವಿಲಾಸ ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಳಿ ರವಿಕುಮಾರ್, ಮುಸ್ತಫಾ, ಅಭಿವೃದ್ಧಿ ಅಧಿಕಾರಿ ಮನುಗೌಡ ಮತ್ತಿತರರಿದ್ದರು.

ವಿಶ್ವ ಕಿಕ್ ಬಾಕ್ಸಿಂಗ್‌ನಲ್ಲಿ ಪದಕ ಗೆದ್ದ ಪರೀಕ್ಷಿತ್ ಪ್ರದೀಪ್‌ಗೆ ಇಂದು ಸನ್ಮಾನ



ಮೈಸೂರು,ನ.9–ಜರ್ಮನಿಯಲ್ಲಿ ಇತ್ತೀಚೆಗೆ ನಡೆದ ವರ್ಲ್ಡ್ ಕಿಕ್ ಬಾಕ್ಸಿಂಗ್ ಪಂದ್ಯಾವಳಿಯಲ್ಲಿ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದಿರುವ ಪರೀಕ್ಷಿತ್ ಪ್ರದೀಪ್‌ಗೆ ನ.10ರಂದು ಸಂಜೆ 6.30ಕ್ಕೆ ಎಂ.ಜಿ ರಸ್ತೆಯಲ್ಲಿರುವ ಸಿಪಾಯಿ ಗ್ರಾಂಡೆ ಹೋಟೆಲ್‌ನಲ್ಲಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಶಾಸಕ ಟಿ.ಎಸ್.ಶ್ರೀವತ್ಸ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್, ಮಾಜಿ ಶಾಸಕ ಎಲ್.ನಾಗೇಂದ್ರ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್‌ನ ವಿಕ್ರಂ ಅಯ್ಯಂಗಾರ್ ತಿಳಿಸಿದ್ದಾರೆ.



ಮೈಸೂರಿನ ಎನ್.ಆರ್.ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಕಾಲೇಜಿನ ಸೆಕ್ರೆಟರಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದಿರುವ ಗುಂಡ್ಲುಪೇಟೆ ತಾಲೂಕಿನ ಕಬ್ಬಳ್ಳಿಯ ಮಂಜುಳಾ ಮತ್ತು ಶಿವನಂಜೇಗೌಡರ ಮಗಳಾದ ಎಸ್.ನಂದಿತಾ ಅವರನ್ನು ಕಾಲೇಜಿನ ಪ್ರಾಂಶುಪಾಲ ಹರೀಶ್ವರಪ್ಪ, ತರಬೇತಿ ಅಧಿಕಾರಿ ನಾಗೇಶ್, ಕಿರಿಯ ತರಬೇತಿ ಅಧಿಕಾರಿ ಜಿ.ಎಸ್.ಸುಮತಿ ಅಭಿನಂದಿಸಿದರು.

ಸಂಪುಟ ಉಪಸಮಿತಿ ಸಲ್ಲಿಸಿರುವ ಎಸ್ಸಿ ಆಂತರಿಕ ಮೀಸಲಾತಿ ಶಿಫಾರಸು ಹಿಂಪಡೆಯಲು ಆಗ್ರಹ



ಮೈಸೂರು,ನ.9(ಜಿಎ)–ರಾಜ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಸಂಬಂಧಿಸಿದಂತೆ ಆಂತರಿಕ ಮೀಸಲಾತಿಯನ್ನು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಸಚಿವ ಸಂಪುಟದ ಉಪಸಮಿತಿ ಶಿಫಾರಸ್ಸು ಅವೈಜ್ಞಾನಿಕ ವರದಿಯನ್ನು ಮುಖ್ಯಮಂತ್ರಿಗಳು ಹಿಂಪಡೆಯಬೇಕು ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಕೂಗು ಪರಿಶಿಷ್ಟ ಜಾತಿಗಳಲ್ಲೇ ಇರುವ ಕೆಲ ಸಮುದಾಯಗಳಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅಂದಿನ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ, ಸಣ್ಣ ನೀರಾವರಿ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ವಿವಿಧ ಪರಿಶಿಷ್ಟ ಜಾತಗಳಿಗೆ ಸಂಬಂಧಿಸಿದಂತೆ ಆಂತರಿಕ ಮೀಸಲಾತಿಗೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿ 2011ರ ಜನಗಣತಿ ಆಧಾರಮೇಲೆ ಸಂಪುಟ ಉಪ ಸಮಿತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಆಂತರಿಕ ಮೀಸಲಾತಿಗೆ ಸಂಬಂಧಿಸಿದಂತೆ 101 ಪರಿಶಿಷ್ಟ ಜಾತಿಗಳನ್ನು ನಾಲ್ಕು ವರ್ಗಗಳಾಗಿ ವರ್ಗೀಕರಿಸಿ ಸರ್ಕಾರ ಆದೇಶ ಹೊರಡಿಸಿದೆ. ಅದರಂತೆ 2023ರ ಮಾರ್ಚ್ 27ರಂದು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಧರಿಸಿ ಕಳುಹಿಸಿದ್ದಾರೆ. ಆದರೆ, ಅದರಲ್ಲಿ ನಾಲ್ಕು ವರ್ಗಗಳಿಗೆ ನೀಡಿರುವ ಮೀಸಲಾತಿಯೂ ಅವೈಜ್ಞಾನಿಕವಾಗಿದೆ. ಇದನ್ನು ಇಟ್ಟುಕೊಂಡು ಬಿಜೆಪಿ 2018ರಲ್ಲಿ ಓಟು ಪಡೆದುಕೊಂಡು ಅಧಿಕಾರಕ್ಕೆ ಬಂದಿತು ಎಂದು ಆರೋಪಿಸಿದರು.

ಈ ವಿವಿಧ ನಾಲ್ಕು ಶ್ರೇಣಿಗಳಲ್ಲಿ ನಿಗದಿಪಡಿಸಿರುವ ಆಂತರಿಕ ಮೀಸಲಾತಿಯು ಜಾತಿಗಳ ಮಧ್ಯೆ ವೈಷಮ್ಯ, ಭೇದಭಾವ ಮತ್ತು ತಾರತಮ್ಯವನ್ನುಂಟು ಮಾಡುತ್ತದೆ. ಹಾಗೇ ವಿದ್ಯಾಭ್ಯಾಸ, ಉದ್ಯೋಗ ಮತ್ತು ಸರ್ಕಾರದ ಸವಲತ್ತುಗಳನ್ನು ಪಡೆಯುವಲ್ಲಿ ಅನಾನುಕೂಲ ಉಂಟಾಗಿ ಸಾಮರಸ್ಯ ಕದಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಆದ್ದರಿಂದ ಮುಖ್ಯಮಂತ್ರಿಗಳು ಶೀಘ್ರವಾಗಿ ಶಿಫಾರಸ್ಸು ಮಾಡಿರುವ ಅವೈಜ್ಞಾನಿಕ ವರದಿಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ಹಿಂದೆ ಆಂತರಿಕ ಮೀಸಲಾತಿ ವಿಚಾರಗಳನ್ನು ಇಟ್ಟುಕೊಂಡು ಮಾಜಿ ಸಚಿವ ಹೆಚ್. ಆಂಜನೇಯ ಅಪಪ್ರಚಾರ ಮಾಡಿದ್ದರ ಪರಿಣಾಮ 2018ರಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುವ ಸ್ಥಿತಿ ಬಂದಿತ್ತು. ಈಗ ಕೆ.ಹೆಚ್.ಮುನಿಯಪ್ಪ ಅವರು ಇದರ ಬಗ್ಗೆ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಆದ್ದರಿಂದ ಯಾವುದೇ ಮುಖಂಡರು ಮುಂದಿನ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಆಂತರಿಕ ಮೀಸಲಾತಿ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಎಂದರು.

ನ.12, ಹಂಸಲೇಖ ಗೀತೆಗಳ ಸಂಗೀತ ಸಂಜೆ





ಮೈಸೂರು, ನ.9(ಜಿಎ)–ಅಶಕ್ತ ಮತ್ತು ಅನಾರೋಗ್ಯಪೀಡಿತ ಕಲಾವಿದರಿಗಾಗಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ನ.12 ರಂದು ಸಂಜೆ 5ಕ್ಕೆ ನಗರದ ಕಲಾಮಂದಿರದಲ್ಲಿ 'ಹಂಸಗೀತೆ' ಶೀರ್ಷಿಕೆಯಡಿ ಹಂಸಲೇಖ ಅವರ ಚಿತ್ರಗೀತೆಗಳ ಸಂಗೀತ ಸಂಜೆ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಜಯರಾಮರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಶ್ರೀ ಭಾಷ್ಯಂ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮಾಜಿ ಶಾಸಕ ಎಸ್.ಬಾಲರಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹೃದಯ ತಜ್ಞ ಡಾ.ಸಂತೋಷ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸಲಿದ್ದಾರೆ ಎಂದರು. ಅಶಕ್ತ ಮತ್ತು ಅನಾರೋಗ್ಯಪೀಡಿತ ಕಲಾವಿದರಿಗಾಗಿ ಏರ್ಪಡಿಸಿರುವ ಸಂಗೀತ ಸಂಜೆ ಕಾರ್ಯಕ್ರಮವಾಗಿರುವುದರಿಂದ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದ್ದು, ಇದಕ್ಕಾಗಿ ಒಂದು ಪ್ರತ್ಯೇಕ ಕೌಂಟರ್ ತೆರೆಯಲಾಗುತ್ತಿದ್ದು, ನ.12 ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೂ ಟಿಕೆಟ್ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕ ಆರ್.ಸುಧೀಂದ್ರ, ಸುರೇಶ್, ನಂದಕುಮಾರ್, ಮಹದೇವಪ್ರಸಾದ್, ಸುಚೀಂದ್ರ ಉಪಸ್ಥಿತರಿದ್ದರು.

ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಳಿಸಿ

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಮಂಜು ಅಧಿಕಾರಿಗಳಿಗೆ ಸೂಚನೆ



ಮೈಸೂರು,ನ.9–ಯಾವುದೇ ರೀತಿಯ ತಾರತಮ್ಯವಿಲ್ಲದೆ ಮಕ್ಕಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಜವಾಬ್ದಾರಿಯಾಗಿದ್ದು, ಈ ಕುರಿತಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಶ್ರೀಮತಿ ಮಂಜು ತಿಳಿಸಿದರು.

ಜಿಲ್ಲಾ ಪಂಚಾಯತ್ ಕಚೇರಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಮತ್ತು ಅವುಗಳ ರೂಪುರೇಷೆಗಳನ್ನು ತಯಾರಿಸುವ ಬಗ್ಗೆ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿ ಅವರು ಮಾತನಾಡಿದರು.

ರಾಜ್ಯ ಮಕ್ಕಳ ರಕ್ಷಣಾ ಆಯೋಗವು ಮಕ್ಕಳ ರಕ್ಷಣೆಗೆ ಬದ್ಧವಾಗಿದ್ದು, ಅವುಗಳ ಉಲ್ಲಂಘನೆಯಾಗದಂತೆ ಸಂಬಂಧಪಟ್ಟ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ತಮಗೆ ನಿಗದಿಪಡಿಸಿರುವ ಕರ್ತವ್ಯಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಮಕ್ಕಳ ಹಕ್ಕುಗಳನ್ನು ರಕ್ಷಿಸಬೇಕು ಎಂದರು.

ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕೈಗೊಂಡು, ಮಕ್ಕಳ ಹಕ್ಕುಗಳ ಕುರಿತು ಹೆಚ್ಚು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಮಕ್ಕಳಿಗೆ ಶೌಚಾಲಯ, ಪುಸ್ತಕ, ಸಮವಸ್ತ್ರ ಸೇರಿದಂತೆ ಸರ್ಕಾರದಿಂದ ನೀಡುವ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ತಿಳಿಸಿದರು. ಎಲ್ಲಾ ಶಾಲಾ ಕಾಲೇಜುಗಳಲ್ಲಿ ಪೋಕ್ಸೋ ಕಾಯಿದೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದರು.

ಶಾಲಾ ವಾಹನಗಳಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚು ಮಕ್ಕಳನ್ನು ಕರೆದುಕೊಂಡು ಹೋಗುತ್ತಿರುವುದು ಕಂಡು ಬರುತ್ತಿದ್ದು, ಈ ಬಗ್ಗೆ ಆರ್.ಟಿ.ಓ. ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಅಂತಹ ಕಡೆಗಳಲ್ಲಿ ಹೆಚ್ಚು ಬಸ್‌ಗಳನ್ನು ನಿಯೋಜಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮಕ್ಕಳ ರಕ್ಷಣೆಗೆ ಮತ್ತು ಮಕ್ಕಳ ಸಮಗ್ರ ಬೆಳವಣಿಗೆಗೆ ಎಲ್ಲಾ ಇಲಾಖೆಗಳು ಪೂರಕ ವಾತಾವರಣ ನಿರ್ಮಾಣ ಮಾಡುವುದರ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು. ಮಕ್ಕಳ ರಕ್ಷಣೆಗಾಗಿ ರೂಪಿಸಿರುವ ಕಾಯ್ದೆಯ ಆಶಯ ಮತ್ತು ಉದ್ದೇಶಗಳನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕು ಎಂದು ತಿಳಿಸಿದರು.

ಮಕ್ಕಳ ರಕ್ಷಣೆಗಾಗಿ ಕಾರ್ಯನಿರ್ವಹಿಸುವ ಎಲ್ಲಾ ಅನುಷ್ಠಾನ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯ ನಿರ್ವಹಿಸಿ, ಮಕ್ಕಳ ಹಕ್ಕುಗಳ ರಕ್ಷಣೆಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ ಮಾತನಾಡಿ, ಮಕ್ಕಳ ಹಕ್ಕುಗಳ ರಕ್ಷಣೆ ಸಂಬಂಧ ಇರುವ ಕಾಯ್ದೆಯ ಬಗ್ಗೆ ಅಧಿಕಾರಿಗಳು ಹೆಚ್ಚು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಸವರಾಜು, ಜಿಲ್ಲಾ ರಕ್ಷಣಾ ಘಟಕದ ಅಧಿಕಾರಿ ಯೋಗೇಶ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

> “ಮಕ್ಕಳಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ, ಮಕ್ಕಳ ಹಕ್ಕುಗಳ ಕುರಿತು ಅಧಿಕಾರಿ ಹಾಗೂ ಸಿಬ್ಬಂದಿಗೆ ಕಾನೂನು ಅರಿವು ಮೂಡಿಸಬೇಕು. ಆಸ್ಪತ್ರೆಗಳಲ್ಲಿ ಮಕ್ಕಳ ಆರೋಗ್ಯ ತಪಾಸಣೆ ವೇಳೆ ವೈದ್ಯರು ತಾತ್ಸಾರ ಮಾಡದೆ ಅವರಿಗೆ ಸ್ಪಂದಿಸಿ, ಅಗತ್ಯ ವೈದ್ಯಕೀಯ ನೆರವು ನೀಡಬೇಕು. ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪ್ರಕರಣಗಳು ಕಡಿಮೆಯಾಗಬೇಕು. ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡುವಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಬೇಕು. **–ಮಂಜು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ**

ಮಂಡ್ಯ, ಮದ್ದೂರು, ಪಾಂಡವಪುರ, ನಾಗಮಂಗಲಗಳಲ್ಲಿ

ಮಾಜಿ ಸಿಎಂ ಡಿವಿಎಸ್ ನೇತೃತ್ವದಲ್ಲಿ ಬರ ಅಧ್ಯಯನ

ಮಂಡ್ಯ, ನ.9– ಜಿಲ್ಲೆಯ ವಿವಿಧೆಡೆ ಮಳೆ ಕೊರತೆಯಿಂದ ಬರ ಪರಿಸ್ಥಿತಿ ನಿರ್ಮಾಣವಾಗಿರುವ ಪ್ರದೇಶಗಳನ್ನು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ನೇತೃತ್ವದ ಬಿಜೆಪಿ ತಂಡ ಗುರುವಾರ ಅಧ್ಯಯನ ನಡೆಸಿತು.

ಜಿಲ್ಲೆಯ ಮದ್ದೂರು ತಾಲೂಕಿನ ಮಲ್ಲನ ಕುಪ್ಪೆ, ಸಿದ್ದೇಗೌಡನದೊಡ್ಡಿ, ಗೆಜ್ಜಲಗೆರೆ ಕೈಗಾರಿಕಾ ಪ್ರದೇಶ, ಪಾಂಡವಪುರ ತಾಲೂಕಿನ ದೊಡ್ಡ ಬ್ಯಾಡರಹಳ್ಳಿ, ಮಂಡ್ಯ ತಾಲೂಕಿನ ಬೇಬಿ, ದೊಡ್ಡಗರುಡನಹಳ್ಳಿ, ಬ್ರಹ್ಮದೇವರಹಳ್ಳಿ, ನಾಗಮಂಗಲ ತಾಲೂಕಿನ ಚೀಣ್ಯ, ಬೆಳ್ಳೂರು, ಕದಬಹಳ್ಳಿ ಸೇರಿದಂತೆ ವಿವಿಧೆಡೆ ಡಿವಿಎಸ್ ನೇತೃತ್ವದ ತಂಡ ಬರ ಪರಿಶೀಲನೆ ನಡೆಸಿತು.

ಇತ್ತೀಚೆಗೆ ಚಿರತೆ ದಾಳಿ ಮಾಡಿ ಆಡು ಮತ್ತು ನಾಯಿ ಎತ್ತುಕೊಂಡು ಹೋಗಿದ್ದ ಮದ್ದೂರಿನ ಸಿದ್ದೇಗೌಡದೊಡ್ಡಿ ಗ್ರಾಮದ ಕಾಳಯ್ಯ ಎಂಬುವರ ಮನೆಗೆ ಭೇಟಿ ಕೊಟ್ಟ ಬರ ಅಧ್ಯಯನ ತಂಡ ರೈತನ ಸಮಸ್ಯೆ ಆಲಿಸಿತು. ಅಲ್ಲದೇ ಚಿರತೆ ಹಾವಳಿ ಹೆಚ್ಚಾಗಿ ದೆಯಾ, ಮಳೆ ಹೇಗೆ ಬಂದಿದೆ. ವಿದ್ಯುತ್ ಪೂರೈಕೆ ಹೇಗಿದೆ? ತ್ರೀ ಫೇಸ್ ಕರೆಂಟ್ ಕೊಡುತ್ತಿರುವ ಬಗ್ಗೆ ಹಾಗೂ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದಾರಾ? ಸಮಸ್ಯೆ ಕೇಳಿದ್ದಾರಾ ಎಂದು ಮಾಜಿ ಸಿಎಂ ಸದಾನಂದಗೌಡ ರೈತರ ಬಳಿ ಮಾಹಿತಿ ಪಡೆದರು.



ಬಿಜೆಪಿ ಬರ ಅಧ್ಯಯನ ತಂಡದ ಎದುರು ಸಮಸ್ಯೆ ಹೇಳಿಕೊಂಡ ರೈತರು, ಸಿದ್ದೇಗೌಡನದೊಡ್ಡಿ ಗ್ರಾಮದಲ್ಲಿ ಚಿರತೆ ದಾಳಿ ಹೆಚ್ಚಾಗಿದೆ. ವಿದ್ಯುತ್ ಸಮಸ್ಯೆ ಸಹ ಇದೆ. ವಿದ್ಯುತ್ ಟಿಸಿಗೂ ದುಡ್ಡು ಕೊಡ ಬೇಕಿದೆ. ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಅಳಲು ತೋಡಿಕೊಂಡರು. ಸಹಕಾರ ಬ್ಯಾಂಕ್‌ನ ಸಾಲ ಮನ್ನಾ ಆಗಿದೀಯಾ ಎಂದು ಬರ ಅಧ್ಯಯನ ತಂಡ ಮಾಹಿತಿ ಕಲೆ ಹಾಕಿತು.

ಸಿದ್ದೇಗೌಡದೊಡ್ಡಿಯಲ್ಲಿ ಚಿರತೆ ಹಾವಳಿ ಹೆಚ್ಚಳ ಹಿನ್ನೆಲೆಯಲ್ಲಿ ಆರ್‌ಎಫ್‌ಒ ಶ್ರೀಧರ್‌ಗೆ ಕರೆ ಮಾಡಿ ಸದಾನಂದ ಗೌಡರು ಮಾಹಿತಿ ಪಡೆದುಕೊಂಡರು.

ಬಳಿಕ ಮದ್ದೂರು ತಾಲೂಕಿನ ಹರಕನ ಹಳ್ಳಿ ಗ್ರಾಮಕ್ಕೆ ಭೇಟಿಕೊಟ್ಟ ಬಿಜೆಪಿ ತಂಡ, ಗ್ರಾಮದ ಹಲವರನ್ನು ಭೇಟಿ ಮಾಡಿ, ಬರದ ಬಗ್ಗೆ ಮಾಹಿತಿ ಪಡೆಯಿತು. ಇದೇ ವೇಳೆ ಮಾಜಿ ಸಿಎಂ ಸದಾನಂದಗೌಡರಿಗೆ ರಂಜಿತ್ ಎಂಬ ಯುವಕ ಟಗರು ಮರಿ ಕೊಡಲು ಮುಂದಾದರು. ಅದನ್ನು ಮುಟ್ಟಿ ನಯವಾಗಿ ತಿರಸ್ಕರಿಸಿದ ಗೌಡರು, ಬೇಡ, ನೀನು ಸಾಕು ಎಂದರು.

ಪಾಂಡವಪುರ ತಾಲೂಕಿನ ನೊದೆ ಕೊಪ್ಪಲು ಗ್ರಾಮಕ್ಕೆ ಆಗಮಿಸಿದ ಬಿಜೆಪಿ ತಂಡ, ಆಲೆಮನೆ ಹಾಗೂ ಕಬ್ಬಿನ ಗದ್ದೆ ವೀಕ್ಷಣೆ ಮಾಡಿ ರೈತರಿಂದ ಮಾಹಿತಿ ಪಡೆಯಿತು. ಬಳಿಕ ದೊಡ್ಡ ಬ್ಯಾಡರಹಳ್ಳಿಗೆ ಆಗಮಿಸಿ ಅಲ್ಲೂ ಸಹ ಆಲೆ ಮನೆಗೆ ಭೇಟಿ ನೀಡಿ ಸಮಸ್ಯೆ ಆಲಿಸಿತು. ಇದೇ ವೇಳೆ ಡಿ.ವಿ.ಸದಾನಂದಗೌಡರು ರೈತರೊಂದಿಗೆ ಸಂವಾದ ನಡೆಸಿದರು. ಈ ವೇಳೆ ಸಾಲು ಸಾಲು ಸಮಸ್ಯೆಗಳನ್ನು ತಂಡದ ಬಳಿ ಗ್ರಾಮಸ್ಥರು ಹಾಗೂ ರೈತರು ಹೇಳಿಕೊಂಡರು.

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರ ದಾಹದಿಂದ ಸ್ವಾರ್ಥಕ್ಕಾಗಿ ಜನರನ್ನು ಬಲಿ ಕೊಟ್ಟು ಅಧಿಕಾರ ನಡೆಸುತ್ತಿದೆ. ಜಿಲ್ಲೆಯಲ್ಲಿ ನೀರಿಲ್ಲದೆ ಬೆಳೆಗಳು ಒಣಗುತ್ತಿವೆ. ತಮಿಳುನಾಡಿನಲ್ಲಿ 60 ಟಿಎಂಸಿ ನೀರಿದ್ದರೂ, ರಾಜ್ಯ ಕಾಂಗ್ರೆಸ್ ಸರ್ಕಾರ ತಮಿಳುನಾಡಿನ ಕಾಂಗ್ರೆಸ್ ಒಕ್ಕೂಟದ ದೋಸ್ತಿ ಸರ್ಕಾರಕ್ಕಾಗಿ ನೀರು ಹರಿಸಿತು. ವಿದ್ಯುತ್ ಸಮಸ್ಯೆಯಂತು ಹೇಳ ತೀರದಾಗಿದೆ. ವಿದ್ಯುತ್ ಸಮಸ್ಯೆಯಿಂದ ರೈತರು, ಕೈಗಾರಿಕೆ, ಉದ್ಯಮಗಳು ನಲುಗಿ ಹೋಗಿವೆ ಎಂದು ಹರಿಹಾಯ್ದರು.

ರಾಜ್ಯದಲ್ಲಿ ಎದುರಾಗಿರುವ ಬರದ ಬಗ್ಗೆ ಅಧ್ಯಯನ ಮಾಡದೆ ಸರ್ಕಾರದ ಮಂತ್ರಿಗಳು, ಶಾಸಕರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ. ಬಿಜೆಪಿ ಪಕ್ಷ ಬರದ ಬಗ್ಗೆ ಅಧ್ಯಯನ ಮಾಡಿ ರಾಜ್ಯ, ಕೇಂದ್ರ ಸರ್ಕಾರಕ್ಕೆ ಗ್ರೌಂಡ್ ರಿಪೋರ್ಟ್ ಸಲ್ಲಿಸಲು ರಾಜ್ಯದ 31 ಜಿಲ್ಲೆಯಲ್ಲಿ 16 ತಂಡ ಕೆಲಸ ಮಾಡುತ್ತಿದೆ. ಪ್ರಚಾರಕ್ಕಾಗಿ ಅಧ್ಯಯನ ನಡೆಸುತ್ತಿಲ್ಲ. ಅಧ್ಯಯನದ ವೇಳೆ ಸಂಗ್ರಹಿಸಲಾದ ಎಲ್ಲಾ ವರದಿಯನ್ನು ನಮ್ಮ ಕೇಂದ್ರ ಸರ್ಕಾರಕ್ಕೂ ಸಲ್ಲಿಸುವ ಮೂಲಕ ಸೂಕ್ತ ಪರಿಹಾರ ದೊರಕಿಸಿ ಕೊಡುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಪ್ರೀತಂಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವಥ್ ನಾರಾಯಣಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಈ.ಸಿ. ನಿಂಗರಾಜೇಗೌಡ, ರೂಪಾ, ಎಚ್.ಎನ್. ಮಂಜುನಾಥ್, ಅಶೋಕ್ ಜಯರಾಂ, ಎ.ಎಲ್.ಚೇತನ್‌ಗೌಡ, ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

ರಾಜಕೀಯ ನಿವೃತ್ತಿ ಹಿಂದೆ ಯಾರ ಒತ್ತಡವೂ ಇಲ್ಲ

ಮಂಡ್ಯ, ನ.9– ಯಾವುದೇ ಕ್ಷೇತ್ರವಾದರೂ ಮನುಷ್ಯನಿಗೆ ಕೆಲವು ಇತಿಮಿತಿ ಇರಬೇಕು. 30 ವರ್ಷಗಳಿಂದ ಬಿಜೆಪಿ ಪಕ್ಷ ನನಗೆ ಎಲ್ಲಾ ರೀತಿಯ ಸ್ಥಾನಮಾನ ಕೊಟ್ಟಿದೆ. ನಾನು ಬೇರೆಯವರಿಗೆ ಅವಕಾಶ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದ್ದು, ನನ್ನ ನಿರ್ಧಾರದ ಹಿಂದೆ ಯಾರ ಒತ್ತಡವೂ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಸ್ಪಷ್ಟಪಡಿಸಿದರು.

ಜಿಲ್ಲೆಯ ವಿವಿಧೆಡೆ ಬರ ಅಧ್ಯಯನ ನಡೆಸಿ ಮದ್ದೂರು ತಾಲೂಕಿನ ಸಿದ್ದೇಗೌಡನದೊಡ್ಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಬಿಜೆಪಿ ಪಕ್ಷದಲ್ಲಿ ಹಲವು ಹುದ್ದೆಗಳನ್ನು ಅಲಂಕರಿಸಿದ್ದೇನೆ. ರಾಷ್ಟ್ರೀಯ ಕಾರ್ಯದರ್ಶಿ ಕೂಡ ಆಗಿದ್ದೆ. ಕೇಂದ್ರದಲ್ಲಿ ಏಳು ವರ್ಷ ಪ್ರಧಾನಿ ಮೋದಿ ಜೊತೆ ಇದ್ದೆ, ಸಿಎಂ ಆಗಿದ್ದೆ, ರಾಜ್ಯಾಧ್ಯಕ್ಷ ಕೂಡ ಆಗಿದ್ದೆ. ಬಿಜೆಪಿ ದೊಡ್ಡ ಮಟ್ಟಕ್ಕೆ ಸಂಘಟನೆ ಆಗುತ್ತಿದೆ. 40 ವರ್ಷಕ್ಕಿಂತ ಕೆಳಗಿನವರು ದೇಶದಲ್ಲಿ 60% ಇದ್ದಾರೆ. ನಾನು ಸಾಯುವಾಗ ನನ್ನ ಶವಕ್ಕೆ ಬಿಜೆಪಿ ಬಟ್ಟೆ ಹಾಕಬೇಕು ಎನ್ನುವ ರಾಜನೀತಿ ಒಪ್ಪಲ್ಲ ಎಂದರು.

ಈ ಹಿಂದೆ ರಾಜಕೀಯದಿಂದ ದೂರ ಆಗಬೇಕು ಎಂದುಕೊಂಡಿದ್ದೆ. ಪಕ್ಷದ ಒತ್ತಡದ ಹಿನ್ನೆಲೆಯಲ್ಲಿ ನಾನು ಕಳೆದ ಬಾರಿ ಸ್ಪರ್ಧಿಸಿದೆ. ಈ ಬಾರಿ 6 ತಿಂಗಳ ಮುಂಚೆ ತಿಳಿಸಿದರೆ ಹೊಸಬರನ್ನು ಹುಡುಕಲು ಅನುಕೂಲವಾಗುತ್ತದೆ ಎಂದು ನಿವೃತ್ತನಾಗಿದ್ದು, ನನ್ನ ಪಾರ್ಟಿ ಚಿರತೆ ಓಡಿಸಲು ಹೇಳಿದರೂ ನಾನು ಮಾಡುತ್ತೇನೆ ಎಂದು ತಿಳಿಸಿದರು.

ಬೆಂಗಳೂರು ಉತ್ತರದಿಂದ ಸಂಸದೆ ಸುಮಲತಾ ಅಂಬರೀಷ್ ಸ್ಪರ್ಧೆ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ. ನಾನು ಯಾರ ಹಿಂದೆ ಬಿಲ ಹಿಡುಕೊಂಡು ಹೋಗಿಲ್ಲ. ಯಾರಿಗೂ ಬೆಣ್ಣೆ ಹಚ್ಚಿಲ್ಲ, ಗುಂಪುಗಾರಿಕೆ ಮಾಡಿಲ್ಲ, ನಮ್ಮಲ್ಲಿ ಬಿಜೆಪಿ ಗುಂಪು ಮಾತ್ರ ಇದೆ ಎಂದು ಸ್ಪಷ್ಟಪಡಿಸಿದರು.

ಶಾಸಕ ಎಸ್.ಟಿ.ಸೋಮಶೇಖರ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಒಂದು ಕೈಯಲ್ಲಿ ಐದೂ ಬೆರಳು ಸಮವಿಲ್ಲ. ಅದೇ ರೀತಿ ಪಕ್ಷದಲ್ಲಿ ಕೆಲವರು ಆಚೆ ಈಚೆ ಇರುತ್ತಾರೆ ಅದು ಕಾಮನ್. ಹೀಗಾಗಿ ನಾನು ಆರ್ಗ್ಯೂಮೆಂಟ್ ಮಾಡಲು ಹೋಗಲ್ಲ ಎಂದರು.

ನನ್ನ ನಿವೃತ್ತಿ ಪಕ್ಷದ ಮೇಲೆ ಪರಿಣಾಮ ಬೀರಲ್ಲ: ಪಾಂಡವಪುರ ತಾಲೂಕಿನ ದೊಡ್ಡಬ್ಯಾಡರಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿವಿಎಸ್, ಹಿರಿಯ ನಾಯಕರು ಚುನಾವಣಾ ರಾಜಕೀಯದಿಂದ ದೂರವಾದರೆ ಪಕ್ಷದ ಮೇಲೆ ಪರಿಣಾಮ ಬೀರುತ್ತದೆ ಎಂಬ ಕೆಲ ನಾಯಕರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಹಿರಿಯ ನಾಯಕರಿಗೆ ಅನುಭವ ಇರುತ್ತದೆ. ದೊಡ್ಡ ಹಿಂಬಾಲಕರ ಪಡೆ ಇರುತ್ತದೆ. ಅವರನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ನಾಯಕರು ಆಲೋಚಿಸಬೇಕು. ನಾನು ನನ್ನ ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ ಎಂದರು.

ಇಂದು ವಿದ್ಯುತ್ ವ್ಯತ್ಯಯ

ಶ್ರೀರಂಗಪಟ್ಟಣ, ನ.9– ತಾಲೂಕಿನ ಅರಕೆರೆ, ಗಾಮನಹಳ್ಳಿ ಹಾಗೂ ತರಿಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.10 ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ಅರಕೆರೆ ವ್ಯಾಪ್ತಿಯ ಗ್ರಾಮಗಳು, ಬೊಂತಗಳ್ಳಿ, ಹೆಬ್ಬಾಡಿ, ಹೆಬ್ಬಾಡಿ ಹುಂಡಿ, ಹಂಪಾಪುರ, ಹೊಸೂರು, ಚನ್ನಹಳ್ಳಿ, ಬಿದರಹಳ್ಳಿ, ಚಿಕ್ಕಂಕನಹಳ್ಳಿ, ಮಹದೇವಪುರ, ತರೀಪುರ, ಮೇಳಾಪುರ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನರಸಿಂಹಯ್ಯ ನಿಧನ

ಕೆ.ಆರ್.ಪೇಟೆ, ನ.9– ನಿವೃತ್ತ ಉಪನೋಂದಣಾಧಿಕಾರಿ ನರಸಿಂಹಯ್ಯ (65) ಗುರುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ.10 ರಂದು ಬೆಳಗ್ಗೆ 10 ಗಂಟೆಗೆ ಕೆ.ಆರ್.ಪೇಟೆಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕಾವೇರಿ ಹೋರಾಟ: ವಿವಿಧ ಗ್ರಾಮಸ್ಥರಿಂದ ರಸ್ತೆ ತಡೆ

ಮಂಡ್ಯ, ನ.9– ತಮಿಳುನಾಡಿಗೆ ನೀರು ಹರಿಸುವಂತೆ ಮತ್ತೆ ಆದೇಶಿಸಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರ ಹಾಗೂ ರಾಜ್ಯದ ಹಿತ ಕಾಪಾಡದ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟಕ್ಕೆ ಬೆಂಬಲ ಸೂಚಿಸಿ ಗುರುವಾರ ಬೈಕ್ ಜಾಥಾ, ರಸ್ತೆ ತಡೆ, ಧರಣಿ ನಡೆದವು.

ಕರ್ನಾಟಕ ವೈಜ್ಞಾನಿಕ ಸಂಶೋಧನಾ ಪರಿಷತ್, ಹಿಟ್ಟನಹಳ್ಳಿ ಕೊಪ್ಪಲು, ಮಿಕ್ಕೆರೆ, ಚಿಕ್ಕಮುಲಗೂಡು ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರು ಹಾಗೂ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಕಾವೇರಿ ಹೋರಾಟದಲ್ಲಿ ಭಾಗಿಯಾಗಿ ಬೆಂಬಲ ಸೂಚಿಸಿದರು. ನಗರದ ಸರ್‌ಎಂವಿ ಪ್ರತಿಮೆ ಎದುರಿನ ಧರಣಿಯಲ್ಲಿ ಪವಾಡ ರಹಸ್ಯ ಬಯಲು ಖ್ಯಾತಿಯ ಹುಲಿಕಲ್ ನಟರಾಜ್ ನೇತೃತ್ವದಲ್ಲಿ ಕರ್ನಾಟಕ ವೈಜ್ಞಾನಿಕ ಸಂಶೋಧನಾ ಪರಿಷತ್ ಸದಸ್ಯರು ಭಾಗಿಯಾದರು. ಪರಿಷತ್ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ, ದುಂಡ ಲಿಂಗರಾಜ್, ವಸಂತಮ್ಮ, ಸುನಂದಮ್ಮ ನೇತೃತ್ವ ವಹಿಸಿದ್ದರು.

ಹಿಟ್ಟನಹಳ್ಳಿ ಕೊಪ್ಪಲು, ಮಿಕ್ಕೆರೆ, ಚಿಕ್ಕ ಮುಲಗೂಡು ಗ್ರಾಪಂ ವ್ಯಾಪ್ತಿಯ ಗ್ರಾಪಂಗಳ ಗ್ರಾಮಸ್ಥರು ಕನ್ನಡ ಸೇನೆ ನೇತೃತ್ವದಲ್ಲಿ ಬೈಕ್ ಜಾಥಾ ಮೂಲಕ ನಗರ ಪ್ರವೇಶಿಸಿ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರಸ್ತೆ ತಡೆ ನಡೆಸಿದರು. ಜಾಥಾ ಮೂಲಕ ಹೋರಾಟದ ಸ್ಥಳಕ್ಕೆ ತೆರಳಿ ನಿರಂತರ ಧರಣಿಯಲ್ಲಿ ಭಾಗಿಯಾಗಿ ಆಳುವ ಸರ್ಕಾರಗಳ ವಿರುದ್ಧ ಕಿಡಿಕಾರಿದರು. ಹಿಟ್ಟನಹಳ್ಳಿ ಕೊಪ್ಪಲು ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಚಿಕ್ಕಮುಲಗೂಡು ಗ್ರಾಪಂ ಅಧ್ಯಕ್ಷ ಮಾದೇಶ್, ಜಿಪಂ ಮಾಜಿ ಸದಸ್ಯ ಬಿ.ಟಿ ರಾಮಚಂದ್ರಯ್ಯ, ಸದಸ್ಯರಾದ ಪುಟ್ಟಸ್ವಾಮಿ, ಮಂಜುನಾಥ್, ಮುಖಂಡರಾದ ಕೆ.ಬಿ.ಮಹೇಶ್, ಪ್ರದೀಪ್, ಸುರೇಶ್, ನಾಗರಾಜು, ಬಾಲಕೃಷ್ಣ, ಬಂದಿಗೌಡ, ವೀರಣ್ಣ, ಸೋಮಣ್ಣ, ಸ್ವಾಮಿ, ದೇವರಾಜು, ಮಹದೇವ್, ರುದ್ರಣ್ಣ ಭಾಗವಹಿಸಿದ್ದರು. ರೈತ ಹಿತ ರಕ್ಷಣಾ ಸಮಿತಿ ಸುನಂದಾ ಜಯರಾಮ್, ಕೆ. ಬೋರಯ್ಯ, ರೈತ ಸಂಘದ ಚಂದ್ರಶೇಖರ್, ಮುದ್ದೇಗೌಡ, ಕನ್ನಡಸೇನೆ ಮಂಜುನಾಥ್, ದಸಂಸ ಎಂ.ವಿ.ಕೃಷ್ಣ, ನಾರಾಯಣ, ಅಂಬುಜಮ್ಮ ಭಾಗವಹಿಸಿದ್ದರು.



ಪ್ರಧಾನಿ ಮಾತುಕತೆ ನಡೆಸಲಿ: ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸಂಕಷ್ಟ ಸನ್ನಿವೇಶ ಸೃಷ್ಟಿಯಾಗಿರುವುದರಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರ್ನಾಟಕ ಮತ್ತು ತಮಿಳುನಾಡು ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಸಿ ನ್ಯಾಯ ದೊರಕಿಸಿಕೊಡಲು ಮುಂದಾಗಬೇಕು ಎಂದು ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಆಗ್ರಹಿಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರಿನ ಧರಣಿಯಲ್ಲಿ ಮಾತನಾಡಿದ ಅವರು, ಮಳೆ ಕೊರತೆಯಿಂದ ನೀರಿಲ್ಲದೆ ಸಂಕಷ್ಟ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಮಾತುಕತೆ ಮೂಲಕ ಪರಿಹಾರ ಸೂಚಿಸಬೇಕು ಎಂದರು.


ಟಿಪ್ಪು ಜಯಂತಿ: ಇಂದು ನಿಷೇಧಾಜ್ಞೆ

ಶ್ರೀರಂಗಪಟ್ಟಣ, ನ.9– ಪಟ್ಟಣದಲ್ಲಿ ಟಿಪ್ಪು ಜಯಂತಿ ಆಚರಣೆ ಹಿನ್ನೆಲೆಯಲ್ಲಿ ನ.10ರಂದು ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಗ್ಗೆ 6 ರಿಂದ ರಾತ್ರಿ 11 ರವರೆಗೆ ನಿಷೇಧಾಜ್ಞೆ ಹೊರಡಿಸಿ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಆದೇಶ ಹೊರಡಿಸಿದ್ದಾರೆ. ಪಟ್ಟಣದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಯಾವುದೇ ರೀತಿಯ ಪ್ರತಿಭಟನೆ, ಮೆರವಣಿಗೆ, ರ‍್ಯಾಲಿ, ಬ್ಯಾನರ್, ಬಂಟಿಂಗ್ಸ್, ಬಾವುಟಗಳು, ಧ್ವನಿ ವರ್ಧಕಗಳು, ಪಟಾಕಿ ಸಿಡಿಸುವುದು, ಡಿಜೆ, ಟ್ಯಾಬ್ಲೋ, ಪ್ರಚೋದನಾತ್ಮಕ ಚಿತ್ರವಿರುವ ಟೀ ಶರ್ಟ್ ಧರಿಸದಂತೆ ಆದೇಶ ಹೊರಡಿಸಿದ್ದಾರೆ.

ಬೈಕ್‌ಗಳ ನಡುವೆ ಡಿಕ್ಕಿ: ಓರ್ವ ಸಾವು

ಶ್ರೀರಂಗಪಟ್ಟಣ, ನ.9– ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸಾವನ್ನಪ್ಪಿ, ಮತ್ತಿಬ್ಬರು ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಕೆ.ಶೆಟ್ಟಿಹಳ್ಳಿ ಬಳಿ ಬುಧವಾರ ರಾತ್ರಿ ನಡೆದಿದೆ. ತಾಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ಹರೀಶ್ (52) ಸಾವನ್ನಪ್ಪಿದವರು. ಕೆ.ಶೆಟ್ಟಿಹಳ್ಳಿ ಗ್ರಾಮದ ಯುವಕರಿಬ್ಬರು ತೀವ್ರ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಲಲಿತ ಮಹಲ್ ಪ್ಯಾಲೆಸ್‌ಗೆ ಸದ್ಯದಲ್ಲೇ ನವೀಕರಣ ಭಾಗ್ಯ



ಒಂದನೇ ಪುಟದಿಂದ

ಮಾಡಿದ ಇತಿಹಾಸ ಕುತೂಹಲಕಾರಿಯಾಗಿದೆ. ಮೈಸೂರು ರಾಜ್ಯ ಆಳುತ್ತಿದ್ದ ಯದುವಂಶಜರು ಎಂದಿಗೂ ಯುದ್ಧ ಅಥವಾ ಸಂಘರ್ಷದ ದಿಕ್ಕಿನಲ್ಲಿ ನಡೆಯಲಿಲ್ಲ. ಬ್ರಿಟಿಷರೊಡನೆ ಸ್ನೇಹ ಸಂಬಂಧ ಹೊಂದಿದ್ದ ರಾಜರು ಮೈಸೂರನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ದು ಹಲವು ಪ್ರಥಮಗಳಿಗೆ ಸಾಕ್ಷಿಯಾದರು. ಅದರಲ್ಲೂ ಆಧುನಿಕ ಮೈಸೂರಿನ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಭಿವೃದ್ಧಿ ಪರ್ವವನ್ನೆ ಆರಂಭಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರೂಪಿಸುವ ಎಲ್ಲಾ ಯೋಜನೆಗಳಿಗೆ ಬ್ರಿಟಿಷ್ ಅಧಿಕಾರಿಗಳು ಒತ್ತಾಸೆಯಾಗಿ ನಿಲ್ಲುತ್ತಿದ್ದರು. ಈ ಕಾರಣದಿಂದಲೇ ಬ್ರಿಟಿಷ್ ವೈಸ್‌ರಾಯ್‌ಗಳು ಮೈಸೂರಿಗೆ ಬಂದಾಗ ಅವರು ವಾಸ್ತವ್ಯ ಹೂಡಲು ಲಲಿತ ಮಹಲ್ ಪ್ಯಾಲೆಸ್ ನಿರ್ಮಾಣ ಮಾಡಲು ನಾಲ್ವಡಿ ಅವರು ತೀರ್ಮಾನಿಸಿ 1921, ನವೆಂಬರ್ 18ರಂದು ಶಂಕುಸ್ಥಾಪನೆ ನೆರವೇರಿಸಿದರು.

ಮುಂಬೈನ ವಾಸ್ತುಶಿಲ್ಪಿ ಇ.ಡಬ್ಲ್ಯೂ ಫ್ರಿಚ್ಲೆ ಅವರು ಇದಕ್ಕೆ ಲಂಡನ್‌ನ ಸಂತ ಪಾಲ್ಸ್ ಆರಾಧನ ಮಂದಿರ (St.Paul's Cathedral) ರಚನೆಯ ಸಾಲುಗಳ ವಿನ್ಯಾಸದ ರೂಪ ನೀಡಿದರು. ಇಟಾಲಿಯನ್ **ಪಲಾಜೋ** ವಾಸ್ತುಶಿಲ್ಪದ ಲಲಿತ ಮಹಲ್ ಪ್ಯಾಲೆಸ್‌ನಲ್ಲಿ ಗೋಳಾಕಾರದ ಗೊಮ್ಮಟ ಅತ್ಯಾಕರ್ಷಕವಾಗಿದೆ.

ಇಂತಹ ಸೌಂದರ್ಯದ ಸಂಗಮವಾಗಿರುವ ಲಲಿತ ಮಹಲ್ ಪ್ಯಾಲೆಸ್ ಅನ್ನು 1973ರಲ್ಲಿ ಪಾರಂಪರಿಕ ಹೋಟೆಲ್ ಆಗಿ ಪರಿವರ್ತಿಸಲಾಯಿತು. ಕೇಂದ್ರ ಸರ್ಕಾರದ ಅಧೀನದಲ್ಲಿದ್ದ ಲಲಿತ ಮಹಲ್ ಪ್ಯಾಲೆಸ್ ಈಗ ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಬಂದಿದೆ. ಶತಮಾನೋತ್ಸವದ ಹೊಸ್ತಿಲಲ್ಲಿರುವ ಲಲಿತ ಮಹಲ್ ಪ್ಯಾಲೆಸ್‌ನಲ್ಲಿ ವಿದೇಶಿ ಪ್ರವಾಸಿಗರೇ ಹೆಚ್ಚು ವಾಸ್ತವ್ಯ ಹೂಡುತ್ತಾರೆ. ಸುಮಾರು 50 ವರ್ಷಗಳಿಂದ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನಿಂದ ಸರ್ಕಾರಕ್ಕೆ ನೂರಾರು ಕೋಟಿ ಆದಾಯ ಬಂದಿದೆ. ಆದರೆ ಕೇಂದ್ರ ಸರ್ಕಾರವೇ ಆಗಲಿ, ರಾಜ್ಯ ಸರ್ಕಾರವೇ ಆಗಲಿ ಇಲ್ಲಿ ತನಕ ಇದರ ಸೂಕ್ತ ನಿರ್ವಹಣೆ ಬಗ್ಗೆ ಗಮನ ಹರಿಸಿಲ್ಲ. ಆದ ಕಾರಣ ಈಗ ಲಲಿತ ಮಹಲ್ ಪ್ಯಾಲೆಸ್‌ಗೆ ಈ ಗತಿ ಬಂದೊದಗಿದೆ. ಕಟ್ಟಡದ ಬಹಳಷ್ಟು ಕಡೆ ಭಾವಣಿಯ ಗಾರೆ ಕುಸಿದು ಬೀಳುತ್ತಿದೆ. ಅಂದಿನ ನೈಪುಣ್ಯ ಕೆಲಸಗಾರರು ಮಾಡಿರುವ ಗಾರೆ ಕುಸುರಿ ಕೂಡ ಉದುರಿ ಬೀಳುತ್ತಿದೆ. ಕಟ್ಟಡದ ಕೆಲವು ಭಾಗಗಳಂತೂ ತುಂಬಾ ಶಿಥಿಲವಾಗಿದೆ.

ಈ ಹಿನ್ನೆಲೆ ಲಲಿತ ಮಹಲ್ ಪ್ಯಾಲೆಸ್ ಅನ್ನು ನವೀಕರಣ ಮಾಡಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಇಂತಹ ಪ್ರಯತ್ನ ಈ ಹಿಂದೆ ಹಲವು ಬಾರಿ ನಡೆದಿದ್ದರೂ ಈಗ ಗಂಭೀರ ಪ್ರಯತ್ನ ನಡೆಯುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಸದ್ಯ ಲಲಿತ ಮಹಲ್ ಪ್ಯಾಲೆಸ್ ಅನ್ನು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ನಿರ್ವಹಣೆ ಮಾಡುತ್ತಿದ್ದು, ಇದರ ವ್ಯವಸ್ಥಾಪಕ ನಿರ್ದೇಶಕರಾದ ಐಎಫ್‌ಎಸ್ ಅಧಿಕಾರಿ ಮನೋಜ್ ಕುಮಾರ್, ಮುತುವರ್ಜಿ ವಹಿಸಿ ನವೀಕರಣ ಮಾಡಲು ನಿರ್ಧರಿಸಿದ್ದಾರೆ. ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಹಲವು ಕಾನೂನು ಪ್ರಕ್ರಿಯೆಗಳನ್ನು ಆರಂಭಿಸಿದ್ದಾರೆ.

ಕೆಬಿಜಿ, ವಿಕ್ರಂ ಮುತ್ತಣ್ಣ, ಬಲ್ಲಾಳ್ ಇತರರ ಒತ್ತಾಸೆ...

ದುಸ್ಥಿತಿಯಲ್ಲಿರುವ ಲಲತ ಮಹಲ್ ಪ್ಯಾಲೆಸ್ ಸಂರಕ್ಷಣೆಯ ನಿಟ್ಟಿನಲ್ಲಿ ಜರೂರಾಗಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವ ಅನಿವಾರ್ಯತೆಯನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಂ ಮುತ್ತಣ್ಣ, ಸದರಿ ಹೋಟೆಲ್‌ನ ಮಾಜಿ ಪ್ರಧಾನ ವ್ಯವಸ್ಥಾಪಕ ಎನ್.ಕೆ.ಬಲ್ಲಾಳ್ ಸೇರಿದಂತೆ ಹಲವು ಮಹನೀಯರು ವಿಶೇಷ ಲೇಖನಗಳು, ಅಭಿಪ್ರಾಯಗಳ ಮೂಲಕ ಸರ್ಕಾರದ ಗಮನ ಸೆಳೆದಿದ್ದರು. ಇವರೆಲ್ಲರ ಒತ್ತಾಸೆಯಂತೆ ಈ ಪಾರಂಪರಿಕ ಸೌಧಕ್ಕೆ ಕಾಯಕಲ್ಪದ ಕಾಲ ಒದಗಿ ಬಂದಂತಿದೆ.

ತಜ್ಞರ ವರದಿ ಆಧರಿಸಿ ನವೀಕರಣ ಆರಂಭಿಸ್ತೇವೆ...

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮನೋಜ್ ಕುಮಾರ್, ಲಲಿತ ಮಹಲ್ ಪ್ಯಾಲೆಸ್ ಅನ್ನು ನವೀಕರಣ ಮಾಡಲು ತೀರ್ಮಾನ ಮಾಡಲಾಗಿದೆ. ಈ ಸಂಬಂಧ ಪಾರಂಪರಿಕ ತಜ್ಞರು ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಅಧಿಕಾರಿಗಳ ತಂಡವನ್ನು ಜಂಟಿಯಾಗಿ ಲಲಿತ ಮಹಲ್ ಪ್ಯಾಲೆಸ್‌ಗೆ ಕಳುಹಿಸಲಾಗಿತ್ತು. ಅವರು ನಾಲ್ಕು ದಿನ ಅಲ್ಲೇ ಇದ್ದು ಯಾವ ರೀತಿ ನವೀಕರಣ ಮಾಡಬೇಕು ಎಂಬ ಬಗ್ಗೆ ಸಮಗ್ರ ವರದಿ ನೀಡಿದ್ದಾರೆ.

ಭಾರತದಲ್ಲಿ ಪಾರಂಪರಿಕ ಶೈಲಿಯ ಹಲವು ಅರಮನೆಗಳಿವೆ. ಶಿಥಿಲಾವಸ್ಥೆಯಲ್ಲಿದ್ದ ಅವುಗಳನ್ನು ಕೂಡ ನವೀಕರಣ ಮಾಡಲಾಗಿದೆ. ಈ ಹಿನ್ನೆಲೆ ಹೈದರಾಬಾದ್‌ನ ಚಾಮೂಲಾಲ್ ಅರಮನೆ ಸೇರಿದಂತೆ ಹಲವು ನವೀಕರಣಗೊಂಡ ಪ್ಯಾಲೆಸ್‌ಗಳಿಗೆ ಸ್ವತಃ ನಾನೇ ಭೇಟಿ ನೀಡಿ ಯಾವ ರೀತಿ ನವೀಕರಣ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಕಲೆ ಹಾಕಿದ್ದೇನೆ ಎಂದರು. ಅಂತಿಮವಾಗಿ ಪಾರಂಪರಿಕ ತಜ್ಞರು ಹಾಗೂ ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳ ವರದಿ ಪಡೆದು ನವೀಕರಣಕ್ಕಾಗಿ 38 ಕೋಟಿ ರೂಪಾಯಿ ವೆಚ್ಚವಾಗುತ್ತದೆ ಎಂದು ಅಂದಾಜಿಸಲಾಗಿದೆ. ಇದರ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ಕೂಡ ಆಗಿದೆ ಎಂದು ತಿಳಿಸಿದರು. ಲಲತ ಮಹಲ್ ಪ್ಯಾಲೆಸ್ ಅನ್ನು ಕೂಡಲೇ ನವೀಕರಣ ಮಾಡಬೇಕು. ಇಲ್ಲದಿದ್ದರೆ ಕಟ್ಟಡಕ್ಕೆ ತೊಂದರೆ ಆಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹೆಚ್.ಕೆ.ಪಾಟೀಲ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಕೂಡಲೇ ಹಣ ಬಿಡುಗಡೆ ಮಾಡಿದರೆ ನವೀಕರಣ ಪ್ರಕ್ರಿಯೆ ಆರಂಭಿಸುತ್ತೇವೆ ಎಂದು ಮನೋಜ್ ಕುಮಾರ್ ಹೇಳಿದರು.

ಕಟ್ಟಡದ ಕೆಲವು ಭಾಗದ ಗಾರೆಯನ್ನು ಪೂರ್ಣವಾಗಿ ತೆಗೆದು ಹೊಸದಾಗಿ ಪ್ಲಾಸ್ಟರಿಂಗ್ ಮಾಡಬೇಕು. ಇಂತಹ ಸ್ಥಳಗಳಲ್ಲಿ ರಿಪೇರಿ ಮಾಡಿ ಸುಣ್ಣ ಬಣ್ಣ ಹೊಡೆಯಲು ಸಾಧ್ಯವಾಗುವುದಿಲ್ಲ. ಅಂತಹ ಸ್ಥಳಗಳು ಯಾವುದು ಎಂದು ಈಗಾಗಲೇ ಗುರುತಿಸಲಾಗಿದೆ ಎಂದು ತಿಳಿಸಿದರು.

ಕುಸಿದು ಬೀಳುತ್ತಿರುವ ಛಾವಣಿಯ ಪುನರ್ ನಿರ್ಮಾಣ ಸೇರಿದಂತೆ ಇತರೆ ಕಾಮಗಾರಿಗೆ 38 ಕೋಟಿ ರೂಪಾಯಿ, ಉಳಿದ ನವೀಕರಣ ಕಾರ್ಯಕ್ಕೆ ಸುಮಾರು 20 ಕೋಟಿ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಸದ್ಯಕ್ಕೆ ತುರ್ತಾಗಿ ಆಗಬೇಕಿರುವ ನವೀಕರಣ ಮಾಡಿ ಮುಗಿಸಿದರೆ ಉಳಿದ ಕಾರ್ಯವನ್ನು ತರುವಾಯ ಹಂತ ಹಂತವಾಗಿ ಕೈಗೊಳ್ಳಬಹುದು.

ನವೀಕರಣಕ್ಕೆ ಸುಮಾರು ಐದಾರು ಕೋಟಿ ರೂಪಾಯಿ ಆಗಿದ್ದರೆ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಹಣದಲ್ಲೇ ಮಾಡಿ ಮುಗಿಸುತ್ತಿದ್ದೆವು. ಆದರೆ 38 ಕೋಟಿ ರೂಪಾಯಿ ಬೇಕಿರುವ ಕಾರಣ ಸರ್ಕಾರದ ಹಣಕ್ಕಾಗಿ ಕಾಯಬೇಕಿದೆ.

ಇದು ಪಾರಂಪರಿಕ ಶೈಲಿಯ ಕಟ್ಟಡವಾಗಿದ್ದು, ಅದರ ಮೂಲ ಸ್ವರೂಪಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ನವೀಕರಣ ಮಾಡಬೇಕು. ಈ ಹಿನ್ನೆಲೆ ತಯಾರಿ ಮಾಡಿಕೊಳ್ಳಲಾಗಿದೆ. ಸರ್ಕಾರದಿಂದ ಹಸಿರು ನಿಶಾನೆ ಬಂದರೆ ಪ್ರಕ್ರಿಯೆ ಆರಂಭವಾಗುತ್ತದೆ ಎಂದರು. ಲಲಿತ ಮಹಲ್ ಪ್ಯಾಲೆಸ್ ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿದೆ. ಈಗ ನಿರ್ವಹಣೆ ಮಾಡುತ್ತಿರುವ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನವರೇ ನವೀಕರಣ ಮಾಡಬಹುದು ಎಂದು ಸರ್ಕಾರ ಆದೇಶ ಹೊರಡಿಸಿದರೆ ಸಾಕು ನಾವು ಕಾರ್ಯೋನ್ಮುಖರಾಗುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನವಾಗಲಿದೆ. ತರುವಾಯ ಸರ್ಕಾರದಿಂದ ನವೀಕರಣಕ್ಕೆ ಆದೇಶ ದೊರೆತು ಹಣ ಕೂಡ ಬಿಡುಗಡೆ ಮಾಡಲಿದೆ. ಒಟ್ಟಾರೆ ಶೀಘ್ರದಲ್ಲೇ ಲಲಿತ ಮಹಲ್ ಪ್ಯಾಲೆಸ್ ನವೀಕರಣ ಮಾಡಲಾಗುವುದು. ಈ ಮೂಲಕ ಪಾರಂಪರಿಕ ಶೈಲಿಯ ಕಟ್ಟಡವನ್ನು ಸಂರಕ್ಷಿಸಲಾಗುವುದು ಎಂದು ಮನೋಜ್ ಕುಮಾರ್ ತಿಳಿಸಿದರು. ಒಟ್ಟಾರೆ ಲಲಿತ ಮಹಲ್ ಪ್ಯಾಲೆಸ್‌ನ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ಆಗದಂತೆ ನವೀಕರಣಗೊಳ್ಳಲಿ ಎಂಬುದು ಮೈಸೂರು ಜನರು ಅಭಿಲಾಷೆ.

ಕೃಷಿ ಪಂಪ್‌ಸೆಟ್ ಸಬ್ಸಿಡಿ ರದ್ದು

ಸಂಪರ್ಕ ಪಡೆದು ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮ ಮಾಡಿಕೊಳ್ಳಬಹುದಾಗಿದೆ.

ವಿದ್ಯುತ್ ಸರಬರಾಜು ಕಂಪನಿಗಳು ಅಕ್ರಮ ಪಂಪ್‌ಸೆಟ್‌ಗಳಿಗೆ ಸಕ್ರಮಗೊಳಿಸಲು ಹೂಡುತ್ತಿದ್ದ ಬಂಡವಾಳವನ್ನು ಸೌರಶಕ್ತಿ ಅಳವಡಿಕೆಗೆ ಬಳಸಲು ಹೆಚ್ಚು ಒತ್ತು ನೀಡುವಂತೆ ನಿರ್ದೇಶಿಸಿದೆ.

ಕಳೆದ ವಿಧಾನಸಭೆ ಚುನಾವಣೆಗೂ ಮುನ್ನ 200 ಯುನಿಟ್‌ವರೆಗೆ ಎಲ್ಲರ ಮನೆಗೂ ಉಚಿತ ವಿದ್ಯುತ್ ನೀಡುವುದಾಗಿ ಕಾಂಗ್ರೆಸ್ ಐದು ಗ್ಯಾರಂಟಿಗಳಲ್ಲಿ ಘೋಷಣೆ ಮಾಡಿತ್ತು. ಅಧಿಕಾರಕ್ಕೆ ಬಂದ ಎರಡು–ಮೂರು ತಿಂಗಳಲ್ಲೇ, ಪಕ್ಷ ಘೋಷಣೆ ಮಾಡಿದ್ದ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಷ್ಠಾನಗೊಳಿಸಿದರು. ಆದರೆ, ಇದೇ ಕಾಲದಲ್ಲಿ ಹೆಚ್ಚು ವಿದ್ಯುತ್ ಬಳಕೆ ಮಾಡಿಕೊಳ್ಳುವವರಿಗೆ ದರವನ್ನು (ದುಬಾರಿ) ಹೆಚ್ಚಳ ಮಾಡಲಾಯಿತು. ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾದ್ದರಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿನಿತ್ಯ 3 ಫೇಸ್‌ನಲ್ಲಿ ನೀಡುತ್ತಿದ್ದ ವಿದ್ಯುತ್ ಅನ್ನು 5 ಗಂಟೆಗೆ ಇಳಿಸಲಾಗಿತ್ತು. ಮತ್ತೆ 7 ಗಂಟೆ ಕೊಡುವುದಾಗಿ ಘೋಷಿಸಿದ್ದಾರೆ.

7 ಗಂಟೆ ವಿದ್ಯುತ್ ಪೂರೈಕೆ ಮಾಡುವುದಾಗಿ ಹೇಳಿದ ಬೆನ್ನಲ್ಲೇ ಕೃಷಿ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನು ಸಂಪೂರ್ಣ ರದ್ದು ಮಾಡಿರುವುದಲ್ಲದೆ, ಬೆಂಗಳೂರು ನಗರ ಸೇರಿದಂತೆ ಪ್ರಮುಖ ನಗರಗಳಲ್ಲಿ ಅನಧಿಕೃತವಾಗಿ ಕೊಳವೆ ಬಾವಿ ಕೊರೆಯದಂತೆ ಮತ್ತೊಂದು ಆದೇಶವನ್ನು ಸರ್ಕಾರ ಹೊರಡಿಸಿದೆ.

ಅಷ್ಟೇ ಅಲ್ಲ, ಇದರ ಹೊಣೆಗಾರಿಕೆಯನ್ನು ಕೆಲವು ಅಧಿಕಾರಿಗಳಿಗೆ ವಹಿಸಿ ಉಸ್ತುವಾರಿ ನೋಡಿಕೊಳ್ಳುವಂತೆ ಸೂಚಿಸಿದೆ. ಸದ್ಯಕ್ಕೆ ವಿದ್ಯುತ್ ಬೇಡಿಕೆ ಪ್ರಮಾಣ ಕಳೆದ ವರ್ಷಕ್ಕಿಂತ ದುಪ್ಪಟ್ಟಾಗಿದೆ. ಜೊತೆಗೆ ವಿದ್ಯುತ್ ಉತ್ಪಾದನೆಯೂ ಕುಸಿತ ಕಂಡಿದೆ. ಕೊರತೆ ನೀಗಿಸಿ ಮುಂಬರುವ ಲೋಕಸಭಾ ಚುನಾವಣೆ ಎದುರಿಸಲು ಉತ್ತರ ಪ್ರದೇಶ, ಪಂಜಾಬ್ ಸರ್ಕಾರ ಹಾಗೂ ಖಾಸಗಿ ಕಂಪನಿಗಳಿಂದ 6000 ಮೆ.ವ್ಯಾ.ವಿದ್ಯುತ್ ಖರೀದಿಗೆ ಮುಂದಾಗಿದೆ.

ನಾಲೆಡ್ಜ್ ಹೆಲ್ತ್ ಸಿಟಿ

ಆಸ್ಪತ್ರೆಗಳ ಸಮೂಹದ ಡಾ.ದೀಪಕ್ ವೇಣುಗೋಪಾಲನ್, ಡಾ.ಶರಣ್ ಪಾಟೀಲ್, ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸಸ್ ಸಂಸ್ಥೆಯ ನಿರ್ದೇಶಕ ಡಾ.ಎಲ್ ಎಸ್.ಶಶಿಧರ, ಏಕಸ್ ಉದ್ಯಮ ಸಂಸ್ಥೆಯ ಸಿಇಒ ಅರವಿಂದ ಮೆಳ್ಳಿಗೇರಿ, ಜೆರೋದಾ ಸಂಸ್ಥೆಯ ಸಹಸಂಸ್ಥಾಪಕ ನಿಖಿಲ್ ಕಾಮತ್, ಕಾಸರಗೋಡು ಉಲ್ಲಾಸ್ ಕಾರಂತ್, ಐಐಎಂಬಿ ನಿರ್ದೇಶಕ ಡಾ.ಹೃಷಿಕೇಶ್ ಕೃಷ್ಣನ್ ಭಾಗವಹಿಸಲಿದ್ದಾರೆ.

ಉದ್ದೇಶಿತ ಕೆ.ಎಚ್.ಆರ್.ಐ ಸಿಟಿಯಲ್ಲಿ ನಾಲ್ಕೂ ವಲಯಗಳಿಗೆ ಸೇರಿದ ಜಾಗತಿಕ ಮಟ್ಟದ ಪ್ರತಿಷ್ಠಿತ ಕಂಪನಿಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು ಬರಲಿದ್ದು, ತಮ್ಮ ಕಾರ್ಯ ಚಟುವಟಿಕೆ ಆರಂಭಿಸಲಿವೆ. ಇದರಿಂದ ಸಾವಿರಾರು ಸಂಖ್ಯೆಯಲ್ಲಿ ನೇರವಾಗಿ ಮತ್ತು ಇದಕ್ಕಿಂತ ಹಲವು ಪಟ್ಟುಗಳಲ್ಲಿ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಇದಕ್ಕಾಗಿ ಸ್ಪಷ್ಟವಾದ ನೀಲನಕ್ಷೆಯನ್ನು ರೂಪಿಸಲು ಮತ್ತು ನಿರ್ದಿಷ್ಟ ಕಾರ್ಯತಂತ್ರವನ್ನು ರೂಪಿಸಬೇಕಾದ್ದು ಅತ್ಯಗತ್ಯವಾಗಿದೆ. ಈ ಉದ್ದೇಶದಿಂದಲೇ ದುಂಡು ಮೇಜಿನ ಸಭೆ ಕರೆಯಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ನಾವು ಹಾಕಿಕೊಳ್ಳುವ ನಿರ್ದಿಷ್ಟ ಗುರಿಗಳನ್ನು ಸಾಧಿಸಲು ತಂಡಗಳನ್ನು ರಚಿಸಲಾಗುವುದು. ಒಟ್ಟಾರೆಯಾಗಿ ಯೋಜನೆಯು ರಾಜ್ಯಕ್ಕೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿ ಪರಿಣಮಿಸಬೇಕು ಎನ್ನುವುದು ಸರಕಾರದ ಉದ್ದೇಶವಾಗಿದೆ.

'ಸಪ್ತಪದಿ' ಇನ್ನು 'ಮಾಂಗಲ್ಯ ಭಾಗ್ಯ'!

ಸಪ್ತಪದಿ ಯೋಜನೆಯನ್ನು ಜಾರಿಗೆ ತಂದಾಗ ಕೋಟಾ ಶ್ರೀನಿವಾಸ ಪೂಜಾರಿ ಮುಜರಾಯಿ ಇಲಾಖೆಯ ಸಚಿವರಾಗಿದ್ದರು. ಇಲ್ಲಿಯವರೆಗೂ 'ಸಪ್ತಪದಿ' ಯೋಜನೆಯಡಿ ಸರಿ ಸುಮಾರು 200ಕ್ಕೂ ಹೆಚ್ಚು ವಿವಾಹಗಳು ನಡೆದಿವೆ.

ಹಾಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅನ್ನಭಾಗ್ಯ ಯೋಜನೆಯಂತೆ 'ಮಾಂಗಲ್ಯ ಭಾಗ್ಯ' ಯೋಜನೆಯು ಸಾಮೂಹಿಕ ವಿವಾಹಗಳನ್ನು ಮಾಡಲು ಮುಂದಾಗಿದೆ. ಯೋಜನೆಯ ಉದ್ದೇಶವು ಮದುವೆಗೆ ದುಂದು ವೆಚ್ಚ ಮಾಡುವ ಮೂಲಕ ಬಡ ವರ್ಗದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ತಪ್ಪಿಸುವುದಾಗಿದೆ. ಇತ್ತೀಚೆಗೆ ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ಈ ಸಪ್ತಪದಿ ವಿವಾಹ ಯೋಜನೆಗೆ 'ಮಾಂಗಲ್ಯ ಭಾಗ್ಯ' ಎಂದು ಮರು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ. ಈ ಯೋಜನೆಯನ್ನು ರಾಜ್ಯದ ಎಲ್ಲಾ ದೇವಸ್ಥಾನಗಳಿಗೂ ವಿಸ್ತರಿಸಲಾಗಿದ್ದು, ಮಾಂಗಲ್ಯ ಭಾಗ್ಯ ಎಂಬ ಹೆಸರು ಸೂಕ್ತವಾಗಿದೆ ಎಂದು ಇದನ್ನೇ ಇಡಲು ಇಚ್ಛಿಸಲಾಗಿದೆ. ಇದನ್ನು ಹೊರತುಪಡಿಸಿ ಯೋಜನೆಯಲ್ಲಿ ಇನ್ನಾವುದೇ ಬದಲಾವಣೆಗಳಿಲ್ಲ ಎಂದು ತಿಳಿಸಿದ್ದಾರೆ.

ಸರಳ ಸಾಮೂಹಿಕ ವಿವಾಹ ಯೋಜನೆಗೆ ಮಾಂಗಲ್ಯ ಭಾಗ್ಯ ಎಂಬ ಹೆಸರು ಸೂಕ್ತ ಎನಿಸಿದ್ದರಿಂದ ಇದನ್ನೇ ಮುಂದುವರಿಸುತ್ತಿದ್ದೇವೆ.ಯೋಜನೆಯಲ್ಲಿ ಯಾವುದೇ ರೀತಿಯ ಹೊಸ ಬದಲಾವಣೆಗಳಿಲ್ಲ. ಪ್ರತಿ ಜೋಡಿಗೆ 55 ಸಾವಿರ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ. ಎಲ್ಲಾ ಎ ಮತ್ತು ಬಿ ಗ್ರೇಡ್ ದೇವಾಲಯಗಳಲ್ಲೂ ನಡೆಸಲು ಸೂಚಿಸಿರುವುದರಿಂದ ಬಡವರಿಗೆ ಸಹಾಯವಾಗುತ್ತದೆ ಎಂದಿದ್ದಾರೆ.

ವಿನಾಶಕಾಲೇ ವಿಪರೀತ ಬುದ್ಧಿ! ವಿನಾಶಕಾಲೇ ವಿಪರೀತ ಆಸೆ!!

ಕೋಳಿಯು ಮೊಟ್ಟೆ ಬದಲು ಮರಿಯನ್ನೇ ಹಾಕಿತು ಎನ್ನುವ ಹಾಗೆ ಕಾಂಗ್ರೆಸ್ ಸರಕಾರ ಎರಡು ಕೈಗಳಿಂದಲೂ ರೈತರ ಮೇಲೆ ಮಣ್ಣು ಹಾಕುತ್ತಿದೆ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುತ್ತಿದ್ದ ಅನ್ನದಾತರಿಗೆ ಇದುವರೆಗೆ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ, ಅಲ್ಯುಮಿನಿಯಂ ತಂತಿ ಇತ್ಯಾದಿಗಳಿಗೆ ಸರಕಾರವೇ ಸಬ್ಸಿಡಿ ಕೊಡುತ್ತಿತ್ತು. ಚುನಾವಣೆಯಲ್ಲಿ ಮತಕ್ಕಾಗಿ ಯಾವ ಹಸ್ತ ರೈತರ ಪಾದ ಮುಟ್ಟಿ ಮತಯಾಚನೆ ಮಾಡಿತೋ, ಈಗ ಅದೇ ಹಸ್ತ ಅಧಿಕಾರ ಸಿಕ್ಕ ಮೇಲೆ ಅನ್ನದಾತನ ಕೊರಳಿಗೆ ಹಗ್ಗ ಬಿಗಿಯತೊಡಗಿದೆ! ಇದಕ್ಕಿಂತ ಪೈಶಾಚಿಕ ಮನಃಸ್ಥಿತಿ ಮತ್ತೊಂದು ಇರಲು ಸಾಧ್ಯವೇ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ತಮ್ಮ ಪಾಲಿನ 24,000 ರೂ. ಭರಿಸುವುದಕ್ಕೇ ಇನ್ನಿಲ್ಲದ ಕಡುಕಷ್ಟ ಅನುಭವಿಸುತ್ತಿರುವ ರೈತರು, ಇನ್ನು ಮುಂದೆ ಪೂರ್ಣ ವೆಚ್ಚ ಭರಿಸಬೇಕು ಎಂದು ಸರಕಾರ ಆದೇಶ ಹೊರಡಿಸಿದೆ. ಕಟುಕರ ಕೈಗೆ ಕರ್ನಾಟಕ ಸಿಕ್ಕಿ ನರಳುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಪುರಾವೆ ಬೇಕೆ? ಅಧಿಕಾರಕ್ಕೆ ಬಂದಾಗಿನಿಂದ ಸಮಾಧಿ ಸ್ಥಿತಿಯಲ್ಲಿರುವ ಈ ಸರ್ಕಾರವು ಇಂಥಹ ಜನದ್ರೋಹಿ ಕೃತ್ಯಗಳಲ್ಲಿ ಬಹಳ ಕ್ರಿಯಾಶೀಲವಾಗಿದೆ! ಎಂದು ಅವರು ಕೆಂಡಕಾರಿದ್ದಾರೆ.

ಸರ್ಕಾರ ಕೂಡಲೇ ಈ ಆದೇಶವನ್ನು ವಾಪಸ್ ಪಡೆಯಲೇಬೇಕು. ಮೊದಲಿನಂತೆ ರೈತರಿಗೆ ಸಬ್ಸಿಡಿ ಕೊಡಬೇಕು. ಒಂದು ವೇಳೆ ಆದೇಶ ವಾಪಸ್ ಪಡೆಯದಿದ್ದರೆ ಜೆಡಿಎಸ್ ಪಕ್ಷ ಸದನದ ಒಳಗೆ, ಹೊರಗೆ ಹೋರಾಟಕ್ಕೆ ಇಳಿಯುತ್ತದೆ ಎಂದು ಕುಮಾರಸ್ವಾಮಿ ಅವರು ಎಚ್ಚರಿಕೆ ನೀಡಿದ್ದಾರೆ. ಕಾಂಗ್ರೆಸ್ ಬಂಡವಾಳಶಾಹಿ ಮನಃಸ್ಥಿತಿಯ ಲಾಭಕೋರ ಪಕ್ಷ, ಕಸಾಯಿ ಸಂಸ್ಕೃತಿಯ ಕಟುಕ ಪಕ್ಷ, ಅದಕ್ಕೆ ಕರುಣೆ, ದಯೆ, ದಾಕ್ಷಿಣ್ಯ ಎನ್ನುವುದು ಇರುವುದಿಲ್ಲ. ಇಡೀ ಕರ್ನಾಟಕವನ್ನೇ ಎಟಿಎಂ ಮಾಡಿಕೊಂಡು ಲೂಟಿ ಮಾಡುತ್ತಿರುವ ಕಾಂಗ್ರೆಸ್ ಸರಕಾರ, ಈಗ ರೈತರನ್ನೂ ಕೊಳ್ಳೆ ಹೊಡೆಯುತ್ತಿದೆ. ಒಂದು ಕೈಲಿ ಕೊಟ್ಟು ಹತ್ತು ಕೈಗಳಲ್ಲಿ ಕಿತ್ತುಕೊಳ್ಳುವ ರಾವಣರೂಪಿ ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬಿದೆ ಎಂದಿರುವ ಅವರು, ವಿನಾಶಕಾಲೇ ವಿಪರೀತ ಬುದ್ಧಿ! ವಿನಾಶಕಾಲೇ ವಿಪರೀತ ಆಸೆ!! ಎಂದು ಸರಕಾರಕ್ಕೆ ಕುಟುಕಿದ್ದಾರೆ.

ಶ್ರೀಲಂಕಾ ವಿರುದ್ಧ ಕಿವೀಸ್‌ಗೆ ಭರ್ಜರಿ ಜಯ

● ನ್ಯೂಜಿಲೆಂಡ್ ಸೆಮಿಫೈನಲ್ ಸ್ಥಾನ ಬಹುತೇಕ ಖಚಿತ ● ಸೋಲಿನೊಂದಿಗೆ ಟೂರ್ನಿಗೆ ವಿದಾಯ ಹೇಳಿದ ಲಂಕಾ



ಬೆಂಗಳೂರು, ನ.9– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ನ್ಯೂಜಿಲೆಂಡ್, ಶ್ರೀಲಂಕಾ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ನ್ಯೂಜಿಲೆಂಡ್ ಸೆಮಿಫೈನಲ್ ಸ್ಥಾನ ಬಹುತೇಕ ಖಚಿತಗೊಂಡಿದೆ. ಅತ್ತ ಏಕದಿನ ವಿಶ್ವಕಪ್‌ನ ಕೊನೆ ಲೀಗ್ ಪಂದ್ಯವನ್ನಾಡಿದ ಶ್ರೀಲಂಕಾ ಸೋಲಿನೊಂದಿಗೆ ವಿದಾಯ ಹೇಳಿತು.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ, ಕಿವೀಸ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ 46.4 ಓವರ್‌ಗಳಲ್ಲಿ 171 ರನ್‌ಗಳಿಗೆ ಆಲೌಟಾಯಿತು. ಪಂದ್ಯದಲ್ಲಿ ಮತ್ತೊಮ್ಮೆ ಕಳಪೆ ಆಟ ಪ್ರದರ್ಶಿಸಿದ ಶ್ರೀಲಂಕಾ ಪರ ಪಾಥುಮ್ ನಿಸ್ಸಾಂಕ 2, ಕುಸಲ್ ಮೆಂಡಿಸ್ 6, ಸದೀರ ಸಮರವಿಕ್ರಮ 1, ಚರಿತ್ ಅಸಲಂಕ 8, ಏಂಜೆಲೊ ಮ್ಯಾಥ್ಯೂಸ್ 16, ಧನಂಜಯ ಡಿ ಸಿಲ್ವಾ 19, ಚಮಿಕ ಕರುಣಾರತ್ನೆ 6, ದುಷ್ಮಂತ ಚಮೀರ 1, ದಿಲ್ಶನ್ ಮಧುಶಂಕ 19 ರನ್ ಗಳಿಸಿ ಔಟಾದರು. ಆದರೆ ಕುಸಾಲ್ ಪೆರೇರಾ ಕೇವಲ 28 ಎಸೆತಗಳಲ್ಲಿ 2 ಸಿಕ್ಸರ್, 9 ಬೌಂಡರಿ ಒಳಗೊಂಡ 51ರನ್ ಗಳಿಸಿ ನಿರ್ಗಮಿಸಿದರು. ಇನ್ನಿಂಗ್ಸ್‌ನ ಕೊನೆಯಲ್ಲಿ ಮಹೀಶ್ ತೀಕ್ಷಣ 38 ರನ್ ಗಳಿಸಿದರು. ಉಳಿದವರು ದೊಡ್ಡ ಮೊತ್ತ ಪೇರಿಸಲಾಗದೇ ಪೆವಿಲಿಯನ್ ಪರೇಡ್ ನಡೆಸಿದರು.


ನ್ಯೂಜಿಲೆಂಡ್ ಪರ ಟ್ರೆಂಟ್ ಬೌಲ್ಟ್ 3, ಲಾಕಿ ಫರ್ಗುಸನ್, ಮಿಚೆಲ್ ಸ್ಯಾಂಟ್ನರ್ ಮತ್ತು ರಚಿನ್ ರವೀಂದ್ರ ತಲಾ 2, ಟಿಮ್ ಸೌಥಿ 1 ವಿಕೆಟ್ ಪಡೆದು ಮಿಂಚಿದರು.

ಶ್ರೀಲಂಕಾ ನೀಡಿದ 172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 23.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ನ್ಯೂಜಿಲೆಂಡ್ ಪರ ಇನ್ನಿಂಗ್ಸ್ ಆರಂಭಿಸಿದ ರಚಿನ್ ರವೀಂದ್ರ ಹಾಗೂ ಡಿವೋನ್ ಕಾನ್ವೆ ತಂಡಕ್ಕೆ ಸ್ಫೋಟಕ ಆರಂಭ ಒದಗಿಸಿದರು. ಇವರಿಬ್ಬರೂ ಮೊದಲ ವಿಕೆಟ್‌ಗೆ 86 ರನ್ ಜೊತೆಯಾಟವಾಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಡೆವೋನ್ ಕಾನ್ವೆ 9 ಬೌಂಡರಿ ಒಳಗೊಂಡ 45 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಬಿರುಸಿನ ಆಟವಾಡಿದ ರಚಿನ್ ರವೀಂದ್ರ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 42 ರನ್ ಗಳಿಸಿ ಔಟಾದರು. ನಂತರ ಕ್ರೀಸ್‌ಗೆ ಆಗಮಿಸಿದ ನಾಯಕ ಕೇನ್ ವಿಲಿಯಮ್ಸನ್ 14 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಲಂಕಾ ಬೌಲರ್‌ಗಳ ಬೆವರಿಳಿಸಿದ ಡ್ಯಾರಿಲ್ ಮಿಚೆಲ್ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 43 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಮಾರ್ಕ್ ಚಾಪ್ಮನ್ 7, ಗ್ಲೆನ್ ಫಿಲಿಪ್ಸ್ 17ರನ್ ಗಳಿಸಿದರು. ಶ್ರೀಲಂಕಾ ಪರ ಏಂಜಲೋ ಮ್ಯಾಥ್ಯೂಸ್ 2, ಮಹೀಶ್ ತೀಕ್ಷಣ ಮತ್ತು ದುಶ್ಮಂತ ಸಮೀರ ತಲಾ ಒಂದೊಂದು ವಿಕೆಟ್ ಪಡೆದರು. ಟ್ರೆಂಟ್ ಬೌಲ್ಟ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ರಾಜ್ಯದಲ್ಲಿ ಬರದ ಹಿನ್ನೆಲೆ

ಮೇವಿನ ಕೊರತೆ ನೀಗಿಸಲು ರೈತರಿಗೆ ಉಚಿತ ಮೇವಿನ ಬೀಜ ವಿತರಣೆ

● ಮೈಸೂರು ಜಿಲ್ಲೆಗೆ 58,228 ಮೇವಿನ ಬೀಜದ ಕಿರು ಪೊಟ್ಟಣ ಪೂರೈಕೆ ● ಫ್ರೂಟ್ಸ್ ಐಡಿ, ಪಹಣಿ ಹಾಜರುಪಡಿಸಿದ ಅರ್ಹ ರೈತರಿಗೆ ಹಂಚಿಕೆ



ಮೈಸೂರು,ನ.9(ಪಿಎಂ)– ರಾಜ್ಯದಲ್ಲಿ ಬರದ ಛಾಯೆ ಆವರಿಸಿರುವ ಹಿನ್ನೆಲೆಯಲ್ಲಿ ಜಾನುವಾರುಗಳ ಮೇವಿನ ಪೂರೈಕೆಯಲ್ಲಿನ ಕೊರತೆ ನೀಗಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಮೇವಿನ ಬೀಜದ ಕಿರು ಪೊಟ್ಟಣಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಜಾರಿಗೊಳಿಸಿದೆ. ಆ ಮೂಲಕ ರಾಜ್ಯದ ರೈತರು ತಮ್ಮ ಜಾನುವಾರುಗಳನ್ನು ಸಂರಕ್ಷಿಸಿ, ಪೋಷಿಸಲು ಉತ್ತೇಜನ ನೀಡಿದೆ.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮೂಲಕ ಬೀಜದ ಪೊಟ್ಟಣಗಳನ್ನು ರೈತರಿಗೆ ಹಂಚಲು ಈಗಾಗಲೇ ಚಾಲನೆ ಸಿಕ್ಕಿದೆ. ಈ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಗೆ ಮೊದಲ ಹಂತದಲ್ಲಿ 58,228 ಮೇವಿನ ಬೀಜದ ಕಿರು ಪೊಟ್ಟಣಗಳನ್ನು ಪೂರೈಸಲಾಗಿದೆ.

ಜಿಲ್ಲೆಯಲ್ಲಿ 5,14,280 ಜಾನುವಾರುಗಳು (ದನ ಮತ್ತು ಎಮ್ಮೆ ಎರಡೂ ಸೇರಿದಂತೆ) ಹಾಗೂ 4,11,669 ಕುರಿ ಮತ್ತು ಮೇಕೆಗಳು ಇವೆ. ಮುಂದಿನ 27 ವಾರಗಳಿಗೆ ಮೇವು ಸಂಗ್ರಹಣೆ ಜಿಲ್ಲೆಯಲ್ಲಿದೆ ಎಂದು ಅಂದಾಜಿಸಲಾಗಿದೆ. ರೈತರಿಗೆ ಮೇವಿನ ಬೀಜಗಳ ಕಿರು ಪೊಟ್ಟಣಗಳನ್ನು ವಿತರಿಸಿ ಮೇವಿನ ಉತ್ಪಾದನೆಯನ್ನು ಸ್ಥಳೀಯವಾಗಿ ಹೆಚ್ಚಿಸುವ ಉದ್ದೇಶದಡಿ ಈ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಕಡಿಮೆ ಪ್ರಮಾಣದ ನೀರು ಅಗತ್ಯವಿರುವ ಬೆಳೆಗಳ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿರುವ ಒಟ್ಟು 181 ಪಶು ವೈದ್ಯಕೀಯ ಸಂಸ್ಥೆಗಳಿಗೆ (ಇಲಾಖೆಯ ಪಶು ಆಸ್ಪತ್ರೆಗಳು) ಬೀಜದ ಕಿರು ಪೊಟ್ಟಣಗಳನ್ನು ಹಂಚಿಕೆ ಮಾಡಲಾಗಿದ್ದು, ರೈತರು ಇಲ್ಲಿಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿ ಪೊಟ್ಟಣಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು. ಫ್ರೂಟ್ಸ್ ಐಡಿ (ಫಾರ್ಮರ್ ರಿಜಿಸ್ಟ್ರೇಷನ್ ಅಂಡ್ ಯುನಿಫೈಡ್ ಬೆನೆಫಿಸಿಯರ್ಸ್ ಸಿಸ್ಟಮ್), ಪಹಣಿ ಸೇರಿದಂತೆ ಮೊದಲಾದ ಸೂಕ್ತ ದಾಖಲೆಗಳನ್ನು ಒದಗಿಸಿ ಪೊಟ್ಟಣಗಳನ್ನು ಪಡೆಯಬಹುದು.



ಜೋಳ ಮತ್ತು ಬಜ್ರಾ ಬೀಜದ ಪೊಟ್ಟಣಗಳ ಚಿತ್ರ

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ (ಆಡಳಿತ) ಡಾ.ನಾಗರಾಜು, ಮೈಸೂರು ಜಿಲ್ಲೆಯ ಎಲ್ಲಾ 9 ತಾಲೂಕುಗಳನ್ನೂ ಬರಪೀಡಿತ ಎಂದು ಘೋಷಿಸಲಾಗಿದ್ದು, ಬರದ ಹಿನ್ನೆಲೆಯಲ್ಲಿ ಮುಂದಿನ ಏಪ್ರಿಲ್ ಮತ್ತು ಮೇನಲ್ಲಿ ಮೇವಿನ ಕೊರತೆ ಉಂಟಾಗಬಹುದೆಂದು ಅಂದಾಜಿಸಿ, ಸದ್ಯ ಈಗ ದಾಸ್ತಾನು ಇರುವ ಒಣಮೇವು ಸಂಗ್ರಹಿಸಿಟ್ಟುಕೊಳ್ಳಲು ರೈತರಿಗೆ ತಿಳಿವಳಿಕೆ ಮೂಡಿಸಲಾಗಿದೆ ಎಂದು ತಿಳಿಸಿದರು.

> 
>
> "ಸೋರ್ಗಮ್ ಮಲ್ಟಿಕಟ್ ಜೋಳದ ಬೀಜವು ಮೂರು ಕಟಾವಿಗೆ ಬರಲಿದೆ ಬಿತ್ತನೆ ಮಾಡಿದ 80 ದಿನಗಳಿಗೆ ಬೆಳೆ ಕೈಗೆ ಬರಲಿದ್ದು, ಬಳಿಕ ಕಟಾವು ಮಾಡಿಕೊಳ್ಳಬಹುದು. ಮತ್ತೆ ಎರಡರಿಂದ ಮೂರು ಬೆಳೆ ಇದರಿಂದಲೇ ದೊರೆಯಲಿದೆ. ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು ತುರ್ತು ಕ್ರಮ ಕೈಗೊಂಡು ಬೀಜದ ಪೊಟ್ಟಣಗಳನ್ನು ಸರಬರಾಜು ಮಾಡಿಸಿದ್ದಾರೆ.
>
> -ಡಾ.ನಾಗರಾಜು, ಉಪನಿರ್ದೇಶಕರು, ಪಶುಸಂಗೋಪನೆ ಇಲಾಖೆ, ಮೈಸೂರು.

ನೀರಾವರಿ, ಬೋರ್‌ವೆಲ್ ಹೊಂದಿರುವ ಪರಿಶಿಷ್ಟ ಜಾತಿ, ಪಂಗಡದ ರೈತರು, ಹಿಂದುಳಿದ ವರ್ಗ, ಅಂಗವಿಕಲರು ಮತ್ತು ಮಹಿಳಾ ರೈತರು ಸೇರಿದಂತೆ ಎಲ್ಲಾ ಅರ್ಹ ರೈತರಿಗೆ ರೋಸ್ಟರ್ ಪದ್ಧತಿಯಡಿ ಬೀಜದ ಪೊಟ್ಟಣಗಳನ್ನು ವಿತರಿಸಲು ಕ್ರಮ ವಹಿಸಲಾಗಿದೆ. ಹಸಿರು ಮೇವನ್ನು ಬಳಸಿ, ಒಣಮೇವನ್ನು ಸಂಸ್ಕರಣೆ ಮಾಡಿ, ಬಣವೆ ರೂಪದಲ್ಲಿ ಸಂರಕ್ಷಿಸಿ ಮುಂದಿನ ದಿನಗಳಲ್ಲಿ ಉಪಯೋಗಿಸಲು ರೈತರಿಗೆ ತಿಳಿವಳಿಕೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ 1.85 ರೈತರು ಜಾನುವಾರು ಸಾಕಿದ್ದಾರೆ ಎಂದು ಹೇಳಿದರು.

2 ವಿಧದ ಬೀಜ: 5 ಕೆಜಿ ತೂಕದ ಜೋಳ (ಸೋರ್ಗಮ್ ಮಲ್ಟಿಕಟ್ ತಳಿ) ಮತ್ತು ಅರ್ಧ ಕೆಜಿ ತೂಕದ ಬಜ್ರಾ ಪೊಟ್ಟಣಗಳನ್ನು ಈ ಕಾರ್ಯಕ್ರಮದಡಿ ರೈತರಿಗೆ ನೀಡಲಾಗುತ್ತಿದೆ. ಅಂತೆಯೇ ಟಿ.ನರಸೀಪುರ, ನಂಜನಗೂಡು, ಮೈಸೂರು, ಹೆಚ್‌ಡಿ ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕುಗಳಿಗೆ ತಲಾ 6 ಸಾವಿರ, ಕೆಆರ್ ನಗರ ತಾಲೂಕಿಗೆ 5,992, ಸಾಲಿಗ್ರಾಮ ಮತ್ತು ಸರಗೂರು ತಾಲೂಕಿಗೆ ತಲಾ 7,718 ಜೋಳದ ಬೀಜ ಹೊಂದಿರುವ ಪೊಟ್ಟಣಗಳನ್ನು ಪೂರೈಕೆ ಮಾಡಲಾಗಿದೆ. ಇನ್ನು ಬಜ್ರಾ ಬೀಜದ ಪೊಟ್ಟಣಗಳನ್ನು ಎಲ್ಲಾ ತಾಲೂಕುಗಳಿಗೂ ತಲಾ 100ರಂತೆ ಹಂಚಿಕೆ ಮಾಡಲಾಗಿದೆ (ಕೆಆರ್ ನಗರ ಮತ್ತು ಸಾಲಿಗ್ರಾಮ ಸೇರಿ 100 ಪೊಟ್ಟಣ ವಿತರಣೆ) ಎಂದು ವಿವರಿಸಿದರು.

ಮೀನು ಮಾರಾಟಕ್ಕೆ ರಿಕ್ಷಾಗಾಡಿ ವ್ಯವಸ್ಥೆ

● ಮೊದಲು ಬೆಂಗಳೂರಿನಲ್ಲಿ 150 ರಿಕ್ಷಾಗಾಡಿ ವಿತರಣೆ ● ಸಾಮಾನ್ಯರಿಗೂ 2 ಲಕ್ಷ; ಎಸ್ಸಿ, ಎಸ್ಟಿಗೆ 1.50 ಲಕ್ಷ ರೂ. ಭದ್ರತಾ ಠೇವಣಿ ● ಮೀನುಗಾರಿಕಾ ಸಚಿವ ಮಂಕಾಳ್ ವೈದ್ಯ ಹೊಸ ಯೋಜನೆ

ಬೆಂಗಳೂರು, ನ.9(ಕೆಎಂಶಿ)– ಬೆಂಗಳೂರಿನಲ್ಲಿ ಮೀನು ಮಾರಾಟ ಮಾಡಲು ಅನುಕೂಲವಾಗುವಂತೆ ಕೆಎಫ್‌ಡಿಸಿಯಿಂದ ತಲಾ 8 ಲಕ್ಷ ರೂ.ಗಳ ಮೌಲ್ಯದ 150 ಎಲೆಕ್ಟ್ರಿಕ್ ರಿಕ್ಷಾಗಾಡಿಗಳನ್ನು ಫಲಾನುಭವಿಗಳಿಗೆ ನೀಡಲಾಗುವುದು ಎಂದು ಬಂದರು ಹಾಗೂ ಮೀನುಗಾರಿಕೆ ಸಚಿವ ಮಂಕಾಳ್ ವೈದ್ಯ ತಿಳಿಸಿದರು.

ಕರಾವಳಿ ಜಿಲ್ಲೆಗಳ ಭಾಗದ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು. ಬೆಂಗಳೂರಿಗೆ 150 ಗಾಡಿ ಸೇರಿ ಒಟ್ಟು 300 ರಿಕ್ಷಾ ನೀಡಲಾಗುವುದು. ಮೊದಲ ಹಂತದಲ್ಲಿ ಬೆಂಗಳೂರಿನಲ್ಲಿ ಕೆಎಫ್‌ಡಿಸಿಯು ಮೂಲಕ ರಿಕ್ಷಾ ಗಾಡಿ ಹಾಗೂ ಮೀನು ಸಹ ಕೊಡುತ್ತೇವೆ. ಎರಡನೇ ಹಂತದಲ್ಲಿ ರಾಜ್ಯದ ಇತರೆ ಭಾಗಗಳಿಗೆ 150 ಗಾಡಿ ಕೊಡುತ್ತೇವೆ ಎಂದರು.



ಫಲಾನುಭವಿಗಳು ನಮ್ಮಿಂದ ಮೀನು ಲಭ್ಯವಿಲ್ಲದಿದ್ದರೆ, ಬೇರೆಡೆಯಿಂದಲೂ ಮೀನು ಖರೀದಿಸಿ ಮಾರಬಹುದು. ಸಾಮಾನ್ಯ ಜನರು 2 ಲಕ್ಷ ರೂ., ಎಸ್ಸಿ, ಎಸ್ಟಿ ಸಮುದಾಯದ ಫಲಾನುಭವಿಗಳು 1.50 ಲಕ್ಷ ರೂ. ಭದ್ರತಾ ಠೇವಣಿ ಕೆಎಫ್‌ಡಿಸಿಯಲ್ಲಿ ಇಡಬೇಕು. 2 ವರ್ಷದವರೆಗೆ ನಿರ್ವಹಣೆ ಉಚಿತ ಇರುತ್ತದೆ. ಅದು ಇವಿ ವಾಹನವಾಗಿದ್ದು, ಗಾಡಿ ಬೇಡ ಎಂದ ಬಳಿಕ ಠೇವಣಿ ಹಣ ವಾಪಸ್ ಪಡೆಯಬಹುದು ಎಂದರು.

ನ.21ರಂದು ವಿಶ್ವ ಮೀನುಗಾರಿಕೆ ದಿನಾಚರಣೆಯನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸಲಾಗುವುದು ಎಂದ ಅವರು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಮೀನುಗಾರಿಕೆ, ಒಳನಾಡು ಜಲಸಾರಿಗೆ, ಬಂದರಿಗೆ ಸಂಬಂಧಿಸಿದ ಸಭೆ ನಡೆಸಲಾಯಿತು. ಮೂರೂ ಜಿಲ್ಲೆಯ ಮೀನುಗಾರಿಕೆ, ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದು ಹೇಳಿದರು.

1.50ಲಕ್ಷ ಕಿಲೋ ಲೀಟರ್ ಡೀಸೆಲ್ ಸಾಲುವುದಿಲ್ಲ. ಅದನ್ನು 2 ಲಕ್ಷ ಕೆ.ಎಲ್.ಗೆ ಹೆಚ್ಚಿಸಲು ಬಜೆಟ್‌ನಲ್ಲಿ ಹೇಳಿದ್ದೇವೆ. ಸೀಮೆಎಣ್ಣೆಗೆ ಸರ್ಕಾರದಿಂದ 35 ರೂ. ಸಬ್ಸಿಡಿ ಕೊಡಲಾಗುತ್ತಿದೆ. ಕೇಂದ್ರದಿಂದ ಹಂಚಿಕೆ ಆಗಿಲ್ಲ. ಸದ್ಯಕ್ಕೆ 10 ತಿಂಗಳು ನಮ್ಮ ರಾಜ್ಯ ಸರ್ಕಾರದಿಂದಲೇ ಖರೀದಿಗೆ ಸಬ್ಸಿಡಿ ಕೊಡುತ್ತಿದ್ದೇವೆ. ಜೂನ್, ಜುಲೈ ಬಿಟ್ಟು ಮಾಸಿಕ 300 ಲೀಟರ್‌ವರೆಗೆ ಕೊಡಲು ಸಿದ್ಧ. ಸದ್ಯಕ್ಕೆ 200 ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದೇವೆ ಎಂದರು.

ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಕ್ರೂಜ್‌ಗೆ ಬಂದರು ಅಗತ್ಯವಿದೆ. ಕಾರವಾರ, ಮಂಗಳೂರಿನಲ್ಲಿ ಇಂತಹ ಬಂದರು ಮಾಡುತ್ತೇವೆ. ಕನಿಷ್ಠ 1 ಕೋಟಿ ರೂ. ಚಿಕ್ಕ ಬಂದರಿಗೆ ಬೇಕು. ಮೂರು ಜಿಲ್ಲೆಗಳಲ್ಲಿ 13 ದ್ವೀಪಗಳಿವೆ.

ಎಂ.ಬಿ.ಅವಿನಾಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ನ.9– ಡಾ.ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಂ.ಬಿ.ಅವಿನಾಶ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ 'ಬರಗೂರು ರಾಮಚಂದ್ರಪ್ಪ ಹಾಗೂ ಕುಂ.ವೀರಭದ್ರಪ್ಪ ಅವರ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ' ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಅರ್ಥಪೂರ್ಣವಾಗಿ ಉದ್ಯಮಿ ಮಂಜುಗೌಡರ ಹುಟ್ಟುಹಬ್ಬ ಆಚರಣೆ







ಮೈಸೂರು, ನ.9–ಉದ್ಯಮಿ ಹಾಗೂ ಕರಾವಳಿ ಸೀಫುಡ್ ರೆಸ್ಟೋರೆಂಟ್ ಮಾಲೀಕರಾದ ಜಿ.ಮಂಜುಗೌಡರು ತಮ್ಮ 51ನೇ ಹುಟ್ಟುಹಬ್ಬವನ್ನು ಬುಧವಾರ ಅರ್ಥಪೂರ್ಣವಾಗಿ ಆಚರಣೆ ಮಾಡಿಕೊಂಡರು.

ಬೆಳಗ್ಗೆ ಅಶ್ವಿನಿ ಗೋಲ್ಡ್ ಕಂಪನಿ ಕಚೇರಿ ಮುಂಭಾಗ 52ನೇ ವಾರ್ಡ್‌ನ ಪೌರಕಾರ್ಮಿಕರಿಗೆ ಸೀರೆ, ಬಟ್ಟೆ ಮತ್ತು ಸಿಹಿ ವಿತರಿಸಲಾಯಿತು. ಅಲ್ಲದೆ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಕರ್ತವ್ಯ ನಿರ್ವಹಿಸುವ ಭದ್ರತಾ ಸಿಬ್ಬಂದಿ, ತೋಟಗಾರಿಕೆ ಸಿಬ್ಬಂದಿ, ಪೌರಕಾರ್ಮಿಕರಿಗೆ ಬಟ್ಟೆ, ಸೀರೆ ಮತ್ತು ಸಿಹಿ ವಿತರಿಸಲಾಯಿತು. ಇದೇ ವೇಳೆ ಪುಟ್ಟೀರಮ್ಮ ವಿಶೇಷ ಹೆಣ್ಣು ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ಅಗತ್ಯವಿರುವ ಆಟಿಕೆಗಳು, ಇನ್ನಿತರ ವಸ್ತುಗಳು ಮತ್ತು ಸಿಹಿ ವಿತರಿಸಲಾಯಿತು. ಸಾಯಿರಂಗ ವಿಶೇಷ ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟ ವ್ಯವಸ್ಥೆಯೊಂದಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಸಂಜೆ ಮೈಸೂರಿನ ಕಾರಾಗೃಹದಲ್ಲಿ ಮಹಿಳೆಯರಿಗೆ ಹಣ್ಣು ಹಾಗೂ ಸೀರೆ ವಿತರಿಸಲಾಯಿತು. ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್‌ಗೌಡ, ಮಲ್ಲಿಕಾರ್ಜುನ್, ಅಜಾಮ್, ಸಜೀದ್, ಸಂಪತ್, ಶಂಕರ್, ಸಾಗರ್ ಇನ್ನಿತರರಿದ್ದರು.

ಮಹಾರಾಣಿ ವಾಣಿಜ್ಯ ಮಹಿಳಾ ಕಾಲೇಜಲ್ಲಿ ಹೆಚ್ಚುವರಿ ಶೌಚಾಲಯಕ್ಕೆ ಆಗ್ರಹ



ಮೈಸೂರು, ನ.9(ಎಸ್‌ಪಿಎನ್)– ಮಹಾರಾಣಿ ವಾಣಿಜ್ಯ ಮಹಿಳಾ ಕಾಲೇಜಿನಲ್ಲಿ ಹೆಚ್ಚುವರಿ ಶೌಚಾಲಯಗಳನ್ನು ತುರ್ತಾಗಿ ನಿರ್ಮಿಸಬೇಕು ಎಂದು ವಿದ್ಯಾರ್ಥಿನಿಯರ ಸಂಘದ ಪದಾಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳಲ್ಲಿ ಬುಧವಾರ ಮನವಿ ಮಾಡಿದರು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಮಹಿಳಾ ಕಾಲೇಜಿನ ಕಟ್ಟಡ ಕಳೆದ 6 ವರ್ಷಗಳ ಹಿಂದೆ ಲೋಕಾರ್ಪಣೆಗೊಂಡಿದ್ದು, ನಿರ್ಮಾಣ ಸಂದರ್ಭದಲ್ಲೇ 11 ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ಈ ಶೌಚಾಲಯಗಳು ಈಗಿನ ವಿದ್ಯಾರ್ಥಿನಿಯರ ಸಂಖ್ಯೆಗೆ ಸಾಕಾಗುತ್ತಿಲ್ಲ. ಹಾಗಾಗಿ ಹೆಚ್ಚುವರಿ ಶೌಚಾಲಯಗಳ ಅಗತ್ಯವಿದೆ ಎಂದು ವಿದ್ಯಾರ್ಥಿನಿಯರ ಸಂಘದ ಪದಾಧಿಕಾರಿಗಳು 'ಮೈಸೂರು ಮಿತ್ರ'ನ ಬಳಿ ಅಲವತ್ತುಕೊಂಡರು.

ಈ ಕಾಲೇಜು ಆವರಣದಲ್ಲಿ ವಾಣಿಜ್ಯ ವಿಭಾಗದ ಪದವಿ ಮತ್ತು ಸ್ನಾತಕೋತ್ತರ ವಿಭಾಗದ ಕೋರ್ಸ್‌ಗಳಿದ್ದು, ಇಲ್ಲಿ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿನಿಯರು ಅಧ್ಯಯನ ನಡೆಸುತ್ತಿದ್ದಾರೆ. ಇದರಲ್ಲಿ ಶೇ.60 ವಿದ್ಯಾರ್ಥಿನಿಯರು ಗ್ರಾಮೀಣ ಪ್ರದೇಶಗಳಿಂದ ಆಗಮಿಸಿ, ಅಧ್ಯಯನ ನಡೆಸುತ್ತಿರುವುದು ವಿಶೇಷ ಎಂದರು.

ಈ ವಿದ್ಯಾರ್ಥಿನಿಯರು ಬೆಳಗ್ಗೆ 7 ಗಂಟೆಗೆ ಹಳ್ಳಿಗಳಿಂದ ಹೊರಟು, ಮೈಸೂರು ನಗರದ ಮಹಾರಾಣಿ ವಾಣಿಜ್ಯಶಾಸ್ತ್ರ ಕಾಲೇಜಿಗೆ ಆಗಮಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶೌಚಾಲಯಕ್ಕೆ ಹೋಗುವ ಸನ್ನಿವೇಶ ಎದುರಾದರೆ ಏನು ಮಾಡಬೇಕು? ಹಾಗೂ ಇತ್ತೀಚೆಗೆ ಕಾಲೇಜಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಬಳಿ ಶೌಚಾಲಯ ತುರ್ತು ನಿರ್ಮಾಣ ಕುರಿತು ಮನವಿ ಮಾಡಿದ್ದೇವೆ ಎಂದು 'ಮೈಸೂರು ಮಿತ್ರ'ನಿಗೆ ಎಂದು ತಿಳಿಸಿದರು. ಇಲ್ಲಿನ ಶೌಚಾಲಯ ಸ್ವಚ್ಛತೆಗೆ ವಿದ್ಯಾರ್ಥಿನಿಯರಿಂದ ಕಾಲೇಜು ಅಭಿವೃದ್ಧಿ ನಿಧಿಯಿಂದ ಭರಿಸುತ್ತಿದ್ದು, ಈ ಹಣದಲ್ಲಿ ಸ್ವಚ್ಛತಾ ಸಿಬ್ಬಂದಿ ವೇತನ, ಕಟ್ಟಡದ ವಿದ್ಯುತ್ ಬಿಲ್ (ಮಾಸಿಕ 70 ಸಾವಿರ ರೂ.ನಂತೆ) ಪಾವತಿಸಲಾಗುತ್ತಿದ್ದು, ಹೀಗಾಗಿ ಈ ಅನುದಾನ ಸ್ವಚ್ಛತೆ ನಿರ್ವಹಣೆಗೆ ಸಾಕಾಗುತ್ತಿಲ್ಲ ಎಂದು ಕಾಲೇಜು ವಿದ್ಯಾರ್ಥಿನಿಯರ ಸಂಘದ ಪದಾಧಿಕಾರಿಗಳು ಅಂಕಿ–ಸಂಖ್ಯೆಗಳ ಸಮೇತ ಮಾಹಿತಿ ನೀಡಿದರು.

ಇಲ್ಲಿಗೆ ಮುಖ್ಯಮಂತ್ರಿಗಳು ಆಗಮಿಸಿದ್ದ ವೇಳೆ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಿ, ಈ ಕಟ್ಟಡದ ಮೇಲೆ 2 ಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ಹಾಗೂ ಇದೇ ವೇಳೆ ಹೆಚ್ಚುವರಿ ಶೌಚಾಲಯ ನಿರ್ಮಾಣಕ್ಕೂ ಕ್ರಮವಹಿಸುವ ಕುರಿತು ಭರವಸೆ ನೀಡಿದ್ದ ಪ್ರಸಂಗವನ್ನು ವಿವರಿಸಿದರಲ್ಲದೆ, ದೂರದ ಊರುಗಳಿಂದ ಬರುವ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಗೆ ಕ್ಯಾಂಟೀನ್ ಅವಶ್ಯವಿದ್ದು, ಇದಕ್ಕೂ ಕ್ರಮವಹಿಸುವಂತೆ ಮನವಿ ಮಾಡಿದರು.

ಅನುಭವಿ ಪ್ರಾಧ್ಯಾಪಕರ ಕೊರತೆ: ಈ ಕಾಲೇಜಿನಲ್ಲಿ ಹಿರಿಯ ಪ್ರಾಧ್ಯಾಪಕರು ನಿವೃತ್ತಿ ಹೊಂದುತ್ತಿರುವುದರಿಂದ ಆ ಜಾಗಕ್ಕೆ ಅನುಭವಿ ಪ್ರಾಧ್ಯಾಪಕರ ನಿಯೋಜನೆ ಆಗುತ್ತಿಲ್ಲ. ಗುಣಮಟ್ಟದ ಶಿಕ್ಷಣದಲ್ಲೂ ಹಿನ್ನಡೆಯಾಗುತ್ತಿದೆ ಹಾಗೂ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕ ಮಾಡಿ ಗುಣಮಟ್ಟ ಶಿಕ್ಷಣಕ್ಕೂ ಮನವಿ ಮಾಡಿದರು.

ಈ ವೇಳೆ ಕಾಲೇಜು ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷೆ ಗಗನಶ್ರೀ, ಪ್ರಧಾನ ಕಾರ್ಯದರ್ಶಿ ಜಿ.ಪ್ರವಲಿಕಾ, ಪದಾಧಿಕಾರಿಗಳಾದ ಪೂಜಾ, ಸೌಂದರ್ಯ, ದೀಪಿಕಾ, ದೀಪ್ತಿ ಕೃಷ್ಣ ಸೇರಿದಂತೆ ಇತರೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಸಂಚಾರಿ ನಿಯಂತ್ರಕರ ನಿಯೋಜನೆ



ಮೈಸೂರು, ನ.9– ಮೈಸೂರು–ಬಿಳಿಕೆರೆ ಮಾರ್ಗವಾಗಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳು ಕಡ್ಡಾಯವಾಗಿ ವಾಲ್ಮೀಕಿ ರಸ್ತೆ ಮಹಾರಾಣಿ ವಾಣಿಜ್ಯ ಪದವಿ ಕಾಲೇಜು ಮುಂಭಾಗದಲ್ಲಿ ನಿಲ್ಲಿಸಿ, ನಂತರ ಆಕಾಶವಾಣಿ ಕೇಂದ್ರ ರೈಲ್ವೆ ನಿಲ್ದಾಣದಿಂದ ಬಸ್ ನಿಲ್ದಾಣ ತಲುಪುವಂತೆ ಹಿರಿಯ ಅಧಿಕಾರಿಗಳು ಆದೇಶ ನೀಡಿದ್ದಾರೆ. ಆದಾಗ್ಯೂ ಕೆಲ ಚಾಲಕರು ಈ ಮಾರ್ಗವಾಗಿ ಬಂದರೂ ವಾಣಿಜ್ಯ ಕಾಲೇಜು ಬಳಿ ನಿಲ್ಲಿಸುತ್ತಿರಲಿಲ್ಲ. ಈ ಕುರಿತು ವಿದ್ಯಾರ್ಥಿನಿಯರಿಂದ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಕಳೆದ 15 ದಿನಗಳಿಂದ ಈ ಮಾರ್ಗದಲ್ಲಿ ಬಸ್ ಸಂಚಾರಕ್ಕೆ ನೀಡಿದ ಆದೇಶ ಪಾಲನೆಯಾಗುತ್ತಿದೆಯೇ ಇಲ್ಲವೆ ಎಂಬುದನ್ನು ಪರಿಶೀಲಿಸಲು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಕರ್ತವ್ಯ ನಿರ್ವಹಿಸಲು ಸಂಚಾರಿ ನಿಯಂತ್ರಕರನ್ನು ನಿಯೋಜಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಸಂಚಾರಿ ನಿಯಂತ್ರಕ ಶಿವಲಿಂಗು ಪತ್ರಿಕೆಗೆ ಮಾಹಿತಿ ನೀಡಿದರಲ್ಲದೆ, ಅಲ್ಲೇ ಬಸ್ ನಿಲ್ದಾಣದ ಬಳಿ ಇದ್ದ ವಿದ್ಯಾರ್ಥಿನಿಯರು ಮತ್ತಷ್ಟು ಬಸ್‌ಗಳು ರೂಟ್‌ನಲ್ಲಿ ಸಂಚರಿಸಲು ಹಿರಿಯ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ವಿರುದ್ಧ ಕ್ರಮಕ್ಕೆ ಒಡನಾಡಿ ದೂರು

ಮೈಸೂರು, ನ.9–ವೇಶ್ಯಾವಾಟಿಕೆ ನಡೆಸಲು ತನ್ನ ಮನೆಯನ್ನು ನೀಡಿರುವ ಹಾಗೂ ಒಡನಾಡಿ ಸಂಸ್ಥೆಯಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎಂದು ಸಾರ್ವಜನಿಕ ಹೇಳಿಕೆ ನೀಡಿರುವ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮೈಸೂರಿನ ಒಡನಾಡಿ ಸೇವಾ ಸಂಸ್ಥೆಯಿಂದ ನಗರ ಪೊಲೀಸ್ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ನ್ಯಾಯಾಧೀಶರಿಗೆ ದೂರು ಸಲ್ಲಿಸಲಾಗಿದೆ.

ಜೆ.ಬಿ.ರಂಗಸ್ವಾಮಿಯವರ ಮನೆ ಮಹಡಿ ಮೇಲೆ ವೇಶ್ಯಾವಾಟಿಕೆ ದಂಧೆ ನಡೆಯುತ್ತಿದ್ದುದನ್ನು ಪತ್ತೆ ಮಾಡಿ ಅ.31ರಂದು ದಾಳಿ ನಡೆಸಿರುವುದನ್ನು ದೂರಿನಲ್ಲಿ ಉಲ್ಲೇಖಿಸಿದ್ದು, ಈ ಪ್ರಕರಣದಲ್ಲಿ ರಂಗಸ್ವಾಮಿ ಅವರನ್ನು ಕೂಡ ಆರೋಪಿಯಾಗಿ ಸೇರಿಸಬೇಕಾಗಿತ್ತು. ಈ ಪ್ರಕರಣವನ್ನು ಸ್ಥಳೀಯ ಅಧಿಕಾರಿಗಳು ತನಿಖೆ ಮಾಡುವುದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸುವುದು ಅಸಾಧ್ಯವಾದ ಕಾರಣ ತನಿಖೆಯನ್ನು ದಕ್ಷ ಅಧಿಕಾರಿಯಿಂದ ನಡೆಸಬೇಕು ಅಥವಾ ಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲೇ ನಡೆಸಬೇಕೆಂದು ದೂರಿನಲ್ಲಿ ಕೋರಲಾಗಿದೆ.

ತಮ್ಮ ಮನೆ ಮೇಲಿನ ದಾಳಿ ನಂತರ ಸುದ್ದಿಗೋಷ್ಠಿ ನಡೆಸಿದ ಜೆ.ಬಿ.ರಂಗಸ್ವಾಮಿ, ಒಡನಾಡಿಯಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡುವ ಮೂಲಕ ರಕ್ಷಿತ ಮಹಿಳೆಯರ ಮತ್ತು ಮಕ್ಕಳ ಚಾರಿತ್ರ್ಯ ಹಾಗೂ ಘನತೆ ಮೇಲೆ ಪ್ರಹಾರ ನಡೆಸಿದ್ದು, ಜಸ್ಟೀಸ್ ವರ್ಮ ಸಮಿತಿಯ ಆಶಯದಂತೆ ರಂಗಸ್ವಾಮಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದೂ ದೂರಿನಲ್ಲಿ ಕೋರಲಾಗಿದೆ.

ಬೆಲೆ ಏರಿಕೆ ವಿರುದ್ಧ ಎಸ್‌ಡಿಟಿಯು ಪ್ರತಿಭಟನೆ



ಮೈಸೂರು, ನ.9(ಎಂಟಿವೈ)– ಆಟೋ ಎಲ್‌ಪಿಜಿ, ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್(ಎಸ್‌ಡಿಟಿಯು) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಎಸ್‌ಡಿಟಿಯು ಕಾರ್ಯಕರ್ತರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರದ ದುರಾಡಳಿತದಿಂದಾಗಿ ಬಡ, ಮಧ್ಯಮ ವರ್ಗ ಸಂಕಷ್ಟಕ್ಕೀಡಾಗಿದೆ. ಆಟೋ ಎಲ್‌ಪಿಜಿ ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ದಿನನಿತ್ಯ ಗರಿಷ್ಠ ಶ್ರಮವಹಿಸಿ ಆಟೋ, ವಾಣಿಜ್ಯ ಚಾಲಕರು ದುಡಿಮೆ ನಡೆಸುತ್ತಿರುವಾಗ ಕೇಂದ್ರ ಮತ್ತು ರಾಜ್ಯ ಸರ್ಕಾರ ಬೆಲೆ ಏರಿಕೆ ಮಾಡಿ ಶೋಷಣೆ ಮಾಡುತ್ತಿವೆ. ಇಂಧನ, ವಿಮೆ, ವಾಹನದ ಬಿಡಿ ಭಾಗಗಳು, ಫಿಟ್ನೆಸ್ ಪ್ರಮಾಣ ಪತ್ರಕ್ಕಾಗಿ ತನ್ನ ದುಡಿಮೆಯ ದುಪ್ಪಟ್ಟು ಹಣವನ್ನು ವ್ಯಯ ಮಾಡುತ್ತಿದ್ದು, ಜೀವನ ನಿರ್ವಹಣೆಯ ಆರ್ಥಿಕ ಹೊರೆಯ ಸವಾಲನ್ನೂ ಎದುರಿಸುತ್ತಿದ್ದಾನೆ. ಇದೀಗ ಎಲ್‌ಪಿಜಿ ದರ ಏರಿಕೆ ಮಾಡಿರುವುದರಿಂದ ಶ್ರಮಿಕ ವರ್ಗದ ಆದಾಯಕ್ಕೆ ದೊಡ್ಡ ಹೊಡೆತ ಬಿದ್ದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಲೆ ಏರಿಕೆಯಿಂದ ಚಾಲಕರ ಆದಾಯ ಕ್ಷೀಣಿಸುತ್ತಿದೆ. ಆಟೋ ಎಲ್‌ಪಿಜಿ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಜನರ ಬದುಕನ್ನು ದುಸ್ತರಗೊಳಿಸಿದೆ. ಈ ನಿಟ್ಟಿನಲ್ಲಿ ಶ್ರಮಿಕ ವರ್ಗದ ಜೀವನೋಪಾಯಕ್ಕೆ ಬೆಲೆ ಏರಿಕೆಯ ಕೊಡಲಿ ಪೆಟ್ಟು ನೀಡಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸಬೇಕು. ಬಡ, ಮಧ್ಯಮ ವರ್ಗದ ಬದುಕಿಗೆ ಆಸರೆಯಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತನ್ವೀರ್ ಪಾಷ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ವಿವಿಧ ಕಾರ್ಯಕ್ರಮಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ. 9– ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಪ.ಜಾತಿ ಮತ್ತು ಪ.ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಶೇ.5ರ ಯೋಜನೆ ಅನುದಾನದಲ್ಲಿ ಹಮ್ಮಿಕೊಂಡಿರುವ ವೈಯಕ್ತಿಕ ಕಾರ್ಯಕ್ರಮಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಲಘುವಾಹನ ಚಾಲನ ತರಬೇತಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಿ ವಿಜೇತ ವಿಕಲಚೇತನರಿಗೆ ಪ್ರೋತ್ಸಾಹ ಧನ ಹಾಗೂ ವಿಕಲಚೇತನರನ್ನು ಜವಾಬ್ದಾರಿಯಿಂದ ಪೋಷಿಸುವವರಿಗೆ ಪೋಷಣಾ ಭತ್ಯೆ ನೀಡಲಾಗುವುದು. ಅರ್ಹ ಫಲಾನುಭವಿಗಳು ಕಚೇರಿಯಿಂದ ಅರ್ಜಿ ಪಡೆದು ಸೂಕ್ತ ದಾಖಲೆಗಳೊಡನೆ ನ.18 ಸಂಜೆ 5 ಗಂಟೆಯ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಗಲ್ಲಿ 10 ಗ್ರಾಮ ನ್ಯಾಯಾಲಯ ಸ್ಥಾಪನೆ

ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಹೆಚ್.ಸಿ. ಶಾಮ್ ಪ್ರಸಾದ್ ಘೋಷಣೆ



ಮಡಿಕೇರಿ, ನ.9– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಡಗದಾಳು ಸರ್ಕಾರಿ ಪ್ರೌಢಶಾಲೆ ವತಿಯಿಂದ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಪ್ರಯುಕ್ತ ಕಡಗದಾಳು ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ನಡೆದ ಕಾನೂನು ಅರಿವು ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಚ್.ಸಿ. ಶಾಮ್ ಪ್ರಸಾದ್ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ನಂತರ ಸಂವಿಧಾನದ ಪೀಠಿಕೆಯನ್ನು ಓದಿ ಬೋಧಿಸಿದರು. ಬಳಿಕ ಮಾತನಾಡಿದ ಅವರು, ರಾಜ್ಯದಾದ್ಯಂತ 100 ಗ್ರಾಮ ನ್ಯಾಯಾಲಗಳನ್ನು ಸ್ಥಾಪಿಸುತ್ತಿದ್ದು, ಕೊಡಗು ಜಿಲ್ಲೆಯಲ್ಲಿ 10 ಗ್ರಾಮಗಳನ್ನು ಗುರುತಿಸಲಾಗುವುದು ಎಂದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನ ನ್ಯಾಯ ಸಿಗಬೇಕೆಂಬುದು ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಅದರಂತೆ ಎಲ್ಲಾ ವರ್ಗದ ಜನರಿಗೆ ಸಮಾನ ಅವಕಾಶವನ್ನು ನೀಡಲು ಕಾನೂನು ಸೇವಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತವೆ. ಅದರಂತೆ ಯಾರೇ ಆದರೂ ಆರ್ಥಿಕ ಅಥವಾ ಇನ್ನಾವುದೇ ದುರ್ಬಲತೆಗಳಿಂದ ಸಿಗಬೇಕಾದ ಅವಕಾಶಗಳಿಂದ ವಂಚಿತರಾಗಬೇಕಾಗಿಲ್ಲ. ಪ್ರಾಧಿಕಾರದ ಮೂಲಕ ಎಲ್ಲರಿಗೂ ನ್ಯಾಯ ದೊರಕಿಸಿಕೊಡಲಾಗುವುದು ಎಂದರು.

ಗ್ರಾಮದಲ್ಲಿರುವ ಹಳ್ಳಿಗರು ಸಹ ನಗರಕ್ಕೆ ಬಂದು ನ್ಯಾಯ ಪಡೆಯಲು ಅಸಾಧ್ಯವಾದರೆ ಅವರಲ್ಲಿಗೆ ಹೋಗಿ ನ್ಯಾಯ ನೀಡಬೇಕೆಂಬುವುದು ಇದರ ಉದ್ದೇಶವಾಗಿದೆ. ಅಂದರೆ ನ್ಯಾಯದಿಂದ ಯಾರೂ ವಂಚಿತರಾಗಬಾರದು ಎಂಬುದಾಗಿದೆ ಎಂದು ಅವರು ಹೇಳಿದರು.

'ಸಂವಿಧಾನದಲ್ಲಿ ತಿಳಿಸಿರುವಂತೆ ದೇಶದಲ್ಲಿ ನಾವೆಲ್ಲರೂ ಸಮಾನರು. ಸಮಾನತೆ ಎಂಬುದು ನಮ್ಮ ವ್ಯವಸ್ಥೆಯ ಪ್ರಮುಖ ಅಂಗ. ಆದರೆ ಕೆಲವೊಂದು ಕಾರಣಗಳಿಂದ ಈಗಲೂ ಅಸಮಾನತೆ ಜೀವಂತವಾಗಿರುವುದು ದುರಂತವೆಂದು ಅಭಿಪ್ರಾಯಪಟ್ಟರು.'

ವಕೀಲರ ಸಂಘದ ಅಧ್ಯಕ್ಷ ಎಂ.ಎ. ನಿರಂಜನ್ ಮಾತನಾಡಿ, ಪ್ರತಿಯೊಬ್ಬರೂ ಕನಿಷ್ಠ ಕಾನೂನಿನ ಜ್ಞಾನವನ್ನು ಪಡೆದುಕೊಳ್ಳಬೇಕು ಎಂದರು. ಪ್ರಸಕ್ತ ಆಧುನಿಕತೆಯ ಸೋಗಿನಲ್ಲಿ ಮೊಬೈಲ್‌ಗೆ ಅತಿ ಹೆಚ್ಚು ದಾಸರಾಗಿರುವುದು ಕಳವಳಕಾರಿ, ಸಂವಿಧಾನದಲ್ಲಿ ನೀಡಿರುವ ಹಕ್ಕುಗಳ ಬಗ್ಗೆ ಮಾತ್ರ ನಾವು ಪ್ರತಿಪಾದಿಸುತ್ತೇವೆ ಹೊರತು ನಮ್ಮ ಕರ್ತವ್ಯಗಳನ್ನು ಮರೆತಿದ್ದೇವೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಪ್ರಧಾನ ಕಾನೂನು ನೆರವು ಅಭಿರಕ್ಷಕ ಕೆ.ಆರ್.ವಿದ್ಯಾಧರ ಗೌಡ ಮಾತನಾಡಿ, ಇಂದಿನ ಸಾಮಾಜಿಕ ಪಿಡುಗಾಗಿರುವ ಬಾಲ್ಯವಿವಾಹ, ಪೋಕ್ಸೋ ವಿಷಯದ ಬಗ್ಗೆ ಮಾಹಿತಿ ನೀಡಿದರು. ಅದರಂತೆ ಕಾನೂನು ಸೇವಾ ದಿನಾಚರಣೆಯ ಪ್ರಯುಕ್ತ ಪ್ರಾಧಿಕಾರದಿಂದ ದೊರೆಯುವ ಸೌಲಭ್ಯಗಳು, ಸೇವೆಗಳ ಬಗ್ಗೆ ಮಾಹಿತಿ ನೀಡಿದರು. ಹಾಗೆಯೇ ಗ್ರಾಹಕರ ಹಕ್ಕುಗಳ ಬಗ್ಗೆ ವಿಷಯ ಮಂಡಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಕೆ.ಬಿ.ಪ್ರಸಾದ್ ಅವರು ಸೈಬರ್ ಕ್ರೈಂ., ಗ್ರಾಹಕರ ಹಕ್ಕುಗಳು ನ್ಯಾಯಾಲಯದ ಕಲಾಪಗಳ ಬಗ್ಗೆ ಶಿಕ್ಷಕರು, ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಸುದೀರ್ಘವಾಗಿ ಉತ್ತರಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಶಾಲಾ ಮುಖ್ಯೋಪಾಧ್ಯಾಯರಾದ ಭಾರತಿ, ಅಧ್ಯಕ್ಷ ನಾಸರ್ ಇದ್ದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಬಿ.ಎನ್. ವಿಮಲ ಸ್ವಾಗತಿಸಿದರು. ಭಾರತಿ ವಂದಿಸಿದರು. ಆರತಿ ನಿರೂಪಿಸಿದರು. ಬಿ.ಎಸ್.ಜಯಪ್ಪ ಪ್ರಾಸ್ತಾವಿಕ ನುಡಿಯನ್ನಾಡಿದರು.

ಕರ್ನಲ್ ಆಗಿ ಮುಂಬಡ್ತಿ ಹೊಂದಿದ ಡಾ.ಕಿರಣ್ ಕಾಳಪ್ಪ



ಕುಶಾಲನಗರ, ನ.9– ಕುಶಾಲನಗರದ ಬಿಎಂ ರಸ್ತೆಯ ನಿವಾಸಿ ಹೃದಯ ರೋಗ ತಜ್ಞರಾದ ಡಾ.ಕಿರಣ್ ಕಾಳಪ್ಪ ಅವರು ಲೆಫ್ಟಿನೆಂಟ್ ಕರ್ನಲ್ ಹುದ್ದೆಯಿಂದ ಕರ್ನಲ್ ಆಗಿ ಮುಂಬಡ್ತಿ ಹೊಂದಿದ್ದಾರೆ. ಮಹಾರಾಷ್ಟ್ರದ ಪುಣೆಯಲ್ಲಿರುವ ಕಮಾಂಡೋ ಆಸ್ಪತ್ರೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ ಡಾ.ಕಿರಣ್ ಇದೀಗ ಮುಂಬಡ್ತಿ ಹೊಂದಿ ಕೊಲ್ಕತ್ತಾದ ಕಮಾಂಡೋ ಆಸ್ಪತ್ರೆಯಲ್ಲಿ ಹೃದಯ ರೋಗ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಪತ್ನಿ ಡಾ.ಕಾವ್ಯಶ್ರೀ ದಂತರೋಗ ತಜ್ಞರಾಗಿದ್ದಾರೆ. ಡಾ.ಕಿರಣ್ ಕಾಳಪ್ಪ ಕುಶಾಲನಗರದ ಹಿರಿಯ ನಾಗರಿಕರಾದ ಚೌಡ್ಲು ಕಾಳಪ್ಪ ಹಾಗೂ ಕಾವೇರಿ ದಂಪತಿ ಪುತ್ರ.

ಮಾಜಿ ಯೋಧ ಆತ್ಮಹತ್ಯೆ ಪ್ರಕರಣ: ಎಫ್‌ಐಆರ್ ದಾಖಲು

ಮಹಿಳಾ ಆರೋಪಿ, ಆಕೆಯ ಕುಟುಂಬ ಸೇರಿದಂತೆ ಎಲ್ಲರೂ ನಾಪತ್ತೆ



ಮಡಿಕೇರಿ, ನ.9– ಮಾಜಿ ಯೋಧ ಸಂದೇಶ್(36) ಅವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಮೃತ ಸಂದೇಶ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಡೆತ್‌ನೋಟ್‌ನಲ್ಲಿ ನಮೂದಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಜೀವಿತ ಹಾಗೂ ಆಕೆಯ ತಂಗಿ, ತಾಯಿ, ರೆಸಾರ್ಟ್ ಮಾಲೀಕ ಸತ್ಯ, ಪೊಲೀಸ್ ಸಿಬ್ಬಂದಿ ಸತೀಶ್ ಹಾಗೂ ಇತರ ಇಬ್ಬರನ್ನು ಸೇರ್ಪಡೆಗೊಳಿಸಿ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ವಿರುದ್ಧ ಸೆಕ್ಷನ್ 306, 384, ರೆಡ್ ವಿತ್ 34 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಪ್ರಕರಣದ ತನಿಖೆಗೆ ಪೊಲೀಸರ ವಿಶೇಷ ತಂಡ ರಚಿಸಲಾಗಿದೆ.

ರಾಜ್ಯಮಟ್ಟಕ್ಕೆ ಆಯ್ಕೆ



ಕುಶಾಲನಗರ, ನ9– ಸಮೀಪದ ಮರಿಡಿಯೂರು ಆಕ್ಸಿಲಿಯಂ ಶಾಲೆಯ ವಿದ್ಯಾರ್ಥಿ ಎಂ.ಬಿ. ಕಿರಣ್ ಇನ್ನೂರು ಮೀಟರ್ ಓಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಕ್ಲಸ್ಟರ್ ಮತ್ತು ತಾಲೂಕು ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿ ನಂತರ ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡದ ಜಿಲ್ಲಾಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಎರಡು ನೂರು ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನಗಳಿಸಿದ್ದಾನೆ. ದೈಹಿಕ ಶಿಕ್ಷಣ ಶಿಕ್ಷಕ ರಾಜು ಅವರು ತರಬೇತಿ ನೀಡಿದ್ದಾರೆ. ಉಡುಪಿಯಲ್ಲಿ ನಡೆಯುವ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾನೆ. ವಿದ್ಯಾರ್ಥಿ ಕಿರಣ್ ಗೆ ಶಾಲಾ ಪ್ರಾಂಶುಪಾಲರು ಹಾಗೂ ಶಿಕ್ಷಕ ವರ್ಗ ಅಭಿನಂದಿಸಿ ಶುಭ ಹಾರೈಸಿದ್ದಾರೆ.

ನೆಲಜಿಯಲ್ಲಿ ಕಾಡಾನೆಗಳ ದಾಂಧಲೆ; ಲಕ್ಷಾಂತರ ರೂ. ಫಸಲು ನಷ್ಟ



ನಾಪೋಕ್ಲು, ನ.9– ಕಾಡಾನೆಗಳ ಹಿಂಡು ತೋಟಗಳಿಗೆ ನುಗ್ಗಿ ದಾಳಿ ನಡೆಸಿದ ಪರಿಣಾಮ ಅಪಾರ ಪ್ರಮಾಣದ ಕೃಷಿ ಫಸಲು ನಷ್ಟವಾಗಿರುವ ಘಟನೆ ಇಲ್ಲಿಗೆ ಸಮೀಪದ ನೆಲಜಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಕಾಫಿ ಬೆಳೆಗಾರ ಅಪ್ಪುಮಣಿಯಂಡ ರಘು ಸುಬ್ಬಯ್ಯ ಅವರ ತೋಟಕ್ಕೆ ಒಂದು ಮರಿಯಾನೆ ಸೇರಿದಂತೆ 5 ಕಾಡಾನೆಗಳು ನುಗ್ಗಿ ಹಲವು ಕಾಫಿ ಗಿಡಗಳನ್ನು ಮುರಿದು ಹಾಕಿ ಅಡಿಕೆ ಮರಗಳನ್ನು ನಾಶಪಡಿಸಿವೆ. ಈ ದಾಳಿಯಿಂದಾಗಿ ಅಧಿಕ ಪ್ರಮಾಣದಲ್ಲಿ ಕಾಫಿ, ಅಡಿಕೆ ಫಸಲು ಹಾನಿಗೀಡಾಗಿದೆ. ಕಾಡಾನೆಗಳ ದಾಂದಲೆಯಿಂದಾಗಿ ಲಕ್ಷಾಂತರ ರೂ. ನಷ್ಟವಾಗಿದೆ ಎಂದು ರಘು ಸುಬ್ಬಯ್ಯ ಅಲವತ್ತುಕೊಂಡಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿ ಸುರೇಶ್ ಹಾಗೂ ಕಾಳೇಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ. ಮತ್ತು ದಾಖಲೆ ಪತ್ರಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟು ಸೂಕ್ತ ಪರಿಹಾರಕ್ಕೆ ಸ್ಪಂದಿಸುವ ಭರವಸೆಯನ್ನು ನೀಡಿದ್ದಾರೆ.

ಈಚೆಗೆ ಮರಂದೋಡ, ಚೇಲಾವರ ಗ್ರಾಮ ವ್ಯಾಪ್ತಿಗಳಲ್ಲಿ ಕಾಡಾನೆಗಳು ಅಡ್ಡಾಡಿ ಬತ್ತದ ಗದ್ದೆಗಳನ್ನು ನಾಶಪಡಿಸಿದ್ದವು. ಹಲವು ರೈತರು ತಾವು ಕಷ್ಟಪಟ್ಟು ಬೆಳೆದ ಭತ್ತದ ಫಸಲು ನಷ್ಟಗೊಂಡ ಬಗ್ಗೆ ನಷ್ಟ ಪರಿಹಾರಕ್ಕಾಗಿ ಒತ್ತಾಯಿಸಿದ್ದರು. ಈಚೆಗೆ ಕಾಡಾನೆಗಳ ಹಿಂಡು ನೆಲಜಿ ಗ್ರಾಮದಲ್ಲಿ ಸಂಚರಿಸುತ್ತಿದ್ದು, ಗ್ರಾಮದ ರೈತರು ಭಯಭೀತರಾಗಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಕೃಷಿಗೆ ಧಕ್ಕೆಯಾಗುತ್ತಿದೆ. ಇದೀಗ ಮಳೆ ಸುರಿಯುತ್ತಿರುವುದರಿಂದ ತೋಟದ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಫಸಲು ಕೈಗೆ ಬರುವ ವೇಳೆಗೆ ಕಾಡು ಪ್ರಾಣಿಗಳು, ಕಾಡಾನೆಗಳು ಫಸಲನ್ನು ನಾಶ ಪಡಿಸುತ್ತಿವೆ. ಕೃಷಿಕರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರುತ್ತಿಲ್ಲ ಎಂಬ ಅಳಲು ಮಾರ್ಧನಿಸುತ್ತಿದೆ. ರೈತರು ನಿರಂತರ ಸಂಕಷ್ಟದ ಸುಳಿಗೆ ಸಿಲುಕಿ ದಯನೀಯ ಸ್ಥಿತಿಯಲ್ಲಿದ್ದು, ಈ ನಿಟ್ಟಿನಲ್ಲಿ ರೈತರ ಸಹಾಯಕ್ಕೆ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಹಾಗೂ ಸರ್ಕಾರ ಸೂಕ್ತವಾಗಿ ಸ್ಪಂದಿಸಿ, ರೈತರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಅತಿ ಶೀಘ್ರವಾಗಿ ಬೇಕಾಗಿದೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ನ.9– ಸುಂಟಿಕೊಪ್ಪ 66/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರ ಹೋಗುವ ಎಫ್ 6 ಹೊಸಕೋಟೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿದ್ದು, ನ.10 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುತ್ತದೆ. ಆದ್ದರಿಂದ ಕೊಡಗರಹಳ್ಳಿ, ಕಂಬಿಬಾಣೆ, ಹೊಸಕೋಟೆ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿರಾಜಪೇಟೆ ಬಳಿ ವಿದ್ಯುತ್ ಸ್ಪರ್ಶದಿಂದ ಲೈನ್‌ಮೆನ್ ಸಾವು

ಸಿಬ್ಬಂದಿ ಕೊರತೆಯಿಂದ ದುರಂತ

ವಿರಾಜಪೇಟೆ, ನ.9– ವಿದ್ಯುತ್ ಸ್ಪರ್ಶದಿಂದ ಸೆಸ್ಕಾಂ ಲೈನ್‌ಮೆನ್ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಆರ್ಜಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಬಳಿ ಸಂಭವಿಸಿದೆ.



ಆರ್ಜಿ ಗ್ರಾಮದ ನಿವಾಸಿ ಅನಿಲ್ ಮೆನೇಜಸ್ (46) ಎಂಬುವರೇ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದವರು. ಕಳೆದ 20 ವರ್ಷಗಳಿಂದಲೂ ಸೆಸ್ಕಾಂನಲ್ಲಿ ಲೈನ್‌ಮೆನ್ ಆಗಿ ಸೇವೆ ಸಲ್ಲಿಸುತ್ತಿದ್ದ ಅನಿಲ್ ಮೆನೇಜಸ್ ರಾತ್ರಿ ಪಾಳಿಯ ಕರ್ತವ್ಯ ಮುಗಿಸಿ ಮನೆಗೆ ಹೋಗಿದ್ದರು. ಆಗ ಆರ್ಜಿ ಶಾಲೆಯ ಪಕ್ಕದ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬದಲ್ಲಿ ದೋಷ ಕಂಡು ಬಂದಿದ್ದು, ವಿದ್ಯುತ್ ಕಡಿತಗೊಂಡಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಹೋಗಿ ಸರಿಪಡಿಸುತ್ತಿದ್ದ ಸಂದರ್ಭ ವಿದ್ಯುತ್ ತಗುಲಿ ಅನಿಲ್ ಮೆನೇಜಸ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ವಿರಾಜಪೇಟೆ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ಸೆಸ್ಕಾಂ ಅಧಿಕಾರಿ ಮೈಸೂರಿನ ಸೋಮಶೇಖರ್, ಮಡಿಕೇರಿಯ ಅನೀತಾಬಾಯಿ, ಶಿವಣ್ಣಗೌಡ ಪಾಟೀಲ್, ಸಹಾಯಕ ಅಭಿಯಂತರ ಸುರೇಶ್, ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ, ಸಂತ ಅನ್ನಮ್ಮ ದೇವಾಲಯದ ಗುರುಗಳಾದ ಮದುಲೈ ಮುತ್ತು, ಐಸಕ್ ರತ್ನಾಕರ ಮತ್ತಿತರರು ಭೇಟಿ ನೀಡಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಪೋಷಕರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ತಂದೆಯ ಸಾವನ್ನು ಕಣ್ಣಾರೆ ಕಂಡ ಮಗು

ವಿದ್ಯುತ್ ಸ್ಪರ್ಶದಿಂದ ತನ್ನ ತಂದೆ ಒದ್ದಾಡಿ ಸಾವನ್ನಪ್ಪಿದ್ದನ್ನು ಎರಡು ವರ್ಷದ ಮಗು ಕಣ್ಣಾರೆ ಕಂಡು ಆಘಾತಗೊಂಡಿದೆ. ರಾತ್ರಿ ಪಾಳಿಯ ಕರ್ತವ್ಯ ಮುಗಿಸಿ ಮನೆಗೆ ಹಿಂತಿರುಗಿದ್ದ ಅನಿಲ್ ಮೆನೇಜಸ್‌ಗೆ ಆರ್ಜಿ ಶಾಲೆಯ ಪಕ್ಕದ ವಿದ್ಯುತ್ ಕಂಬದಲ್ಲಿ ಸಮಸ್ಯೆಯುಂಟಾಗಿದ್ದು, ತಕ್ಷಣ ಹೋಗಿ ಸರಿಪಡಿಸುವಂತೆ ಇಲಾಖೆಯಿಂದ ಸೂಚನೆ ಬಂದಿದೆ. ಈ ವೇಳೆ ಎರಡು ವರ್ಷದ ಮಗು ತಾನೂ ಜೊತೆಗೆ ಬರುವುದಾಗಿ ಹಠ ಹಿಡಿದಿದೆ. ಮಗುವನ್ನು ಕರೆದುಕೊಂಡು ಸ್ಥಳಕ್ಕೆ ತೆರಳಿ ಮಗುವನ್ನು ಬೈಕ್ ಮೇಲೆ ಕೂರಿಸಿ ಸಮಸ್ಯೆ ಸರಿಪಡಿಸಲು ವಿದ್ಯುತ್ ಕಂಬವನ್ನು ಏರಿದ್ದಾರೆ. ಆಗ ವಿದ್ಯುತ್ ಸ್ಪರ್ಶಗೊಂಡು ಕೆಳಗೆ ಬಿದ್ದು, ತನ್ನ ತಂದೆ ಒದ್ದಾಡಿ ಸಾವನ್ನಪ್ಪಿದ್ದನ್ನು ಬಾಲಕ ನೋಡಿ ಕಿರುಚಿಕೊಂಡು ಆಘಾತಗೊಂಡಿದ್ದ. ಈ ಹೃದಯವಿದ್ರಾವಕ ದೃಶ್ಯವನ್ನು ನೋಡಿ ಆಘಾತಗೊಂಡಿರುವ ಮಗುವನ್ನು ಕಂಡು ಜನರು ಮರುಕ ವ್ಯಕ್ತಪಡಿಸುತ್ತಿದ್ದುದು ಕಂಡು ಬಂದಿತು.

ಸಿಬ್ಬಂದಿ ಕೊರತೆಯಿಂದ ದುರಂತ: ಸೆಸ್ಕಾಂ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಇಂತಹ ಘಟನೆಗಳು ಸಂಭವಿಸುತ್ತಿವೆ. ಎರಡು ತಿಂಗಳ ಹಿಂದೆ ಇಂತಹದೇ ಘಟನೆಯಿಂದ ಲೈನ್‌ಮೆನ್ ಸಾವನ್ನಪ್ಪಿದ್ದರು. ಸಿಬ್ಬಂದಿ ಇಲ್ಲದ ಕಾರಣ ರಾತ್ರಿ ಪಾಳಿ ಕರ್ತವ್ಯ ಮುಗಿಸಿ ಮನೆಗೆ ಹೋಗಿದ್ದ ಅನಿಲ್ ಮೆನೇಜಸ್ ಅವರನ್ನು ಮತ್ತೆ ಕರ್ತವ್ಯಕ್ಕೆ ಕರೆದಿದ್ದೇ ಈ ದುರಂತಕ್ಕೆ ಕಾರಣವೆಂದು ಹೇಳಲಾಗುತ್ತಿದೆ.

ನ. 29ರವರೆಗೆ ಸೂರ್ಯಕಾಂತಿ ಖರೀದಿ ನೋಂದಣಿಗೆ ಅವಕಾಶ

ಚಾಮರಾಜನಗರ, ನ.9– 2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಗೆ ನಿಗದಿಪಡಿಸಲಾದ ರೈತರ ನೋಂದಣಿ ಕಾಲಾವಧಿಯನ್ನು ನವೆಂಬರ್ 29 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಈ ಹಿಂದೆ ಸೂರ್ಯಕಾಂತಿ ಖರೀದಿಗೆ ರೈತರ ನೋಂದಣಿ ಅವಧಿಯನ್ನು ಅ.20ರವರೆಗೆ ನಿಗದಿ ಮಾಡಲಾಗಿತ್ತು. ಸರ್ಕಾರದ ಆದೇಶದ ಅನುಸಾರ ಖರೀದಿಗೆ ನೋಂದಣಿ ಅವಧಿಯನ್ನು ನವೆಂಬರ್ 29ರವರೆಗೆ ವಿಸ್ತರಿಸಲಾಗಿದೆ. ಜಿಲ್ಲೆಯ ರೈತ ಬಾಂಧವರು ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರೆ

ದ್ವಿಚಕ್ರ ವಾಹನ, ಆಟೋ ಪ್ರವೇಶಕ್ಕೆ ನಿರ್ಬಂಧ

ಚಾಮರಾಜನಗರ, ನ.9– ದೀಪಾವಳಿ ಜಾತ್ರೆ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ನ.11ರ ಸಂಜೆ 6 ಗಂಟೆಯಿಂದ ನ.14ರ ಸಂಜೆ 7 ಗಂಟೆಯವರೆಗೆ ಜಾತ್ರೆಗೆ ದ್ವಿಚಕ್ರ ವಾಹನಗಳು ಹಾಗೂ ಆಟೋರಿಕ್ಷಾ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ಹೊರಡಿಸಿದ್ದಾರೆ.



ಮಲೆ ಮಹದೇಶ್ವರ ಬೆಟ್ಟದಲ್ಲಿ ನ.11 ರಿಂದ 14ರವರೆಗೆ ಜರುಗಲಿರುವ ದೀಪಾವಳಿ ಜಾತ್ರಾ ಸಂಬಂಧ ಜಿಲ್ಲೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಸುಮಾರು ಲಕ್ಷಾಂತರ ಭಕ್ತಾದಿಗಳು ಸೇರುವ ಸಂಭವವಿದ್ದು, ವಾಹನ ದಟ್ಟಣೆ ಹೆಚ್ಚಾಗುವುದರಿಂದ ಸದರಿ ರಸ್ತೆಯು ಅರಣ್ಯ ಪ್ರದೇಶ ಹಾಗೂ ತುಂಬಾ ಕಡಿದಾದ ತಿರುವುಗಳಿಂದ ಕೂಡಿದ್ದು, ಸದರಿ ರಸ್ತೆಯ ಸಂಚಾರದಲ್ಲಿ ವಾಹನಗಳ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ಕರ್ನಾಟಕ ಮೋಟಾರು ವಾಹನಗಳ ಕಾಯ್ದೆ, ನಿಯಮಾವಳಿ ಹಾಗೂ ಸಂಚಾರಿ ನಿಯಂತ್ರಣ ಕಾಯ್ದೆ ಅನ್ವಯ ಮಲೆ ಮಹದೇಶ್ವರ ಬೆಟ್ಟಕ್ಕೆ ದ್ವಿಚಕ್ರ ಹಾಗೂ ಆಟೋರಿಕ್ಷಾ ವಾಹನಗಳಲ್ಲಿ ತೆರಳುವುದನ್ನು ನವೆಂಬರ್ 11ರ ಸಂಜೆ 6 ಗಂಟೆಯಿಂದ ನವೆಂಬರ್ 14 ರ ಸಂಜೆ 7 ಗಂಟೆಯವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಪಟಾಕಿ ತ್ಯಜಿಸಿ ದೀಪಾವಳಿ ಆಚರಿಸಿ, ಪರಿಸರ ಉಳಿಸಿ

ರೋಟರಿ, ರೋಟರಿ ಸಿಲ್ಕ್‌ಸಿಟಿಯಿಂದ ಜಾಗೃತಿ ಅಭಿಯಾನ



ಚಾಮರಾಜನಗರ, ನ. 9– ದೀಪಾವಳಿ ಹಬ್ಬವನ್ನು ದೀಪಗಳನ್ನು ಹಚ್ಚಿ ಕತ್ತಲಿನಿಂದ ಬೆಳಕಿನ ಜ್ಞಾನದ ಕಡೆಗೆ ಎಲ್ಲರೂ ಹೋಗೋಣ. ಪರಿಸರ ಮತ್ತು ಮನುಷ್ಯನ ಮೇಲೆ ದುಷ್ಪರಿಣಾಮ ಬೀರುವ ಪಟಾಕಿಗಳನ್ನು ತ್ಯಜಿಸೋಣ ಎಂದು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನ ಮುಂಭಾಗದಿಂದ ರೋಟರಿ ಸಂಸ್ಥೆ ಹಾಗೂ ರೋಟರಿ ಸಿಲ್ಕ್ ಸಿಟಿ ಮತ್ತು ರೋಟರಿ ಜಿಲ್ಲೆ – 3181ರ ವಲಯ –9ರ ಎಲ್ಲಾ ರೋಟರಿ ಸಂಸ್ಥೆಗಳು, ಮೈಸೂರು ಸೈನ್ಸ್ ಫೌಂಡೇಶನ್ ಇವರ ಸಹಯೋಗದಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸುವುದರಿಂದ ಆಗುವ ದುಷ್ಪರಿಣಾಮಗಳು ಹಾಗೂ ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸುವ ಪ್ರಚಾರ ವಾಹನಕ್ಕೆ ಚಾಲನೆ ನೀಡಿ, ಸಾರ್ವಜನಿಕರಿಗೆ ಕರಪತ್ರಗಳನ್ನು ಹಂಚಿ ಅವರು ಮಾತನಾಡಿದರು.

ದೀಪಾವಳಿ ಹಾಗೂ ಇನ್ನಾವುದೇ ಹಬ್ಬಗಳ ಆಚರಣೆ ನೆಪದಲ್ಲಿ ಪರಿಸರವನ್ನು ಹಾಳುವುದು ಮಾಡುವುದು ಸರಿಯಲ್ಲ. ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಗಾಳಿ, ಬೆಳಕು ಹಾಗೂ ಹಸಿರು ಪರಿಸರವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ದೀಪಾವಳಿ ಹಬ್ಬದಲ್ಲಿ ಸಿಡಿಸುವ ಪಟಾಕಿಯಿಂದ ಬಹಳಷ್ಟು ದುಷ್ಪರಿಣಾಮಗಳಾಗುತ್ತಿದೆ. ಪರಿಸರದ, ಕಾಡುಪ್ರಾಣಿಗಳು, ಸಾಕುಪ್ರಾಣಿಗಳು ಹಾಗೂ ಪಟಾಕಿ ಹೊಡೆಯುವಾಗ ನಡೆಯುವ ದುರಂತಗಳು, ಮತ್ತು ಹಿರಿಯ ನಾಗರಿಕರಿಗೆ ಹೆಚ್ಚಿನ ಶಬ್ದದಿಂದ ತೊಂದರೆಯಾಗುತ್ತದೆ. ಅಲ್ಲದೇ ಪಟಾಕಿ ಸಿಡಿತದಿಂದ ಬರುವ ಹೊಗೆ ವಾಯು ಮಾಲಿನ್ಯವಾಗುತ್ತದೆ. ಉಸಿರಾಟಕ್ಕೆ ತೊಂದರೆ ಇನ್ನಿತರ ಆರೋಗ್ಯ ಸಮಸ್ಯೆಗಳು ಉಲ್ಬಣವಾಗುತ್ತದೆ. ಇದನ್ನು ತಪ್ಪಿಸಲು ಎಲ್ಲರೂ ಸಹ ಪಟಾಕಿ ಸಿಡಿಸುವುದು ಬಿಟ್ಟು, ದೀಪಗಳನ್ನು ಹಚ್ಚಿ ಸಂಭ್ರಮದಿಂದ ದೀಪಾವಳಿ ಆಚರಣೆ ಮಾಡೋಣ ಎಂದರು.

ನಂತರ ನಗರದ ಜೆಎಸ್‌ಎಸ್ ಬಾಲಕರು, ಬಾಲಕಿಯರು , ಪಬ್ಲಿಕ್ ಹಾಗೂ ಪದವಿ ಪೂರ್ವ ಕಾಲೇಜು, ಕೇಂದ್ರೀಯ ವಿದ್ಯಾಲಯ, ಯೂನಿವರ್ಸ್ ಶಾಲೆ, ವೆಂಕಟಯ್ಯನಛತ್ರ ಸರ್ಕಾರಿ ಪ್ರೌಢಶಾಲೆ, ಸೆಂಟ್ ಫ್ರಾನ್ಸಿಸ್ ಶಾಲೆಗಳು ಸೇರಿದಂತೆ ಪ್ರಚಾರ ವಾಹನ ತೆರಳಿ ಜಾಗೃತಿ ಮೂಡಿಸುವ ಜೊತೆಗೆ ಸಿಲ್ಕ್‌ಸಿಟಿ ಮಾಜಿ ಅಧ್ಯಕ್ಷ ದೊಡ್ಡರಾಯಪೇಟೆ ಗಿರೀಶ್ ವಿದ್ಯಾರ್ಥಿಗಳಿಗೆ ಪಟಾಕಿ ಸಿಡಿತದಿಂದ ಅಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಪರಿಸರ ಅಧಿಕಾರಿ ಉಮಾಶಂಕರ್ ಮಾತನಾಡಿ, ನಮ್ಮ ಜಿಲ್ಲೆಯು ಉತ್ತಮ ಪರಿಸರ ಸಂರಕ್ಷಣೆಯಲ್ಲಿ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ನಮ್ಮ ಜಿಲ್ಲೆ ಅರಣ್ಯ ಪ್ರದೇಶವನ್ನು ಹೆಚ್ಚು ಹೊಂದಿರುವುದು. ಈ ಪ್ರದೇಶವನ್ನು ಇದೇ ರೀತಿ ಮುಂದುವರಿಸಿಕೊಂಡು ಹೋಗಲು ನಿಮ್ಮೆಲ್ಲರ ಸಹಕಾರ ಅತಿ ಮುಖ್ಯವಾಗಿದೆ. ದೆಹಲಿಯಲ್ಲಿ ವಾಯುಮಾಲಿನ್ಯದಿಂದ ಅಲ್ಲಿನ ಜನರ ಜೀವನವೇ ಅಸ್ತವ್ಯಸ್ತವಾಗಿದೆ. ಹೀಗಾಗಿ ಚಾಮರಾಜನಗರ ಜಿಲ್ಲೆಯ ಪರಿಸರವನ್ನು ಕಾಪಾಡುವ ನಿಟ್ಟಿನಲ್ಲಿ ದೀಪಾವಳಿ ದಿನಂದು ಹಸಿರು ಪಟಾಕಿಗಳನ್ನು ಮಾತ್ರ ಹೊಡೆಯುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರೋಟರಿ ವಲಯ –9ರ ಸಹಾಯಕ ಗೌರ್ನರ್ ಪ್ರಕಾಶ್, ವಲಯ ಪ್ರತಿನಿಧಿ ಚೈತನ್ಯ ಜಿ. ಹೆಗಡೆ, ರೋಟರಿ ಅಧ್ಯಕ್ಷ ಚಂದ್ರಪ್ರಭ ಜೈನ್, ಕಾರ್ಯದರ್ಶಿ ದೀನಾ, ಸಿಲ್ಕ್‌ಸಿಟಿ ಅಧ್ಯಕ್ಷ ಅಕ್ಷಯ್, ಕಾರ್ಯದರ್ಶಿ ಮಾಣಿಕ್ಯ ಚಂದ್ ಜಿ. ರವಿ, ಮಾಜಿ ಅಧ್ಯಕ್ಷರಾದ ಜಿ.ಆರ್. ಅಶ್ವಥ್ ನಾರಾಯಣ್, ಆರ್.ಎಂ. ಸ್ವಾಮಿ, ಸುರೇಶ್‌ಕುಮಾರ್, ದೊಡ್ಡರಾಯಪೇಟೆ ಗಿರೀಶ್, ಡಿ.ಪಿ. ವಿಶ್ವಾಸ್, ಎಚ್.ಎಂ. ಆಜಯ್, ಸುಭಾಸ್, ಶ್ರೀನಿವಾಸನ್, ಎಸ್‌ಆರ್‌ಎಸ್ ಶ್ರೀನಿವಾಸ್, ಸದಸ್ಯರಾದ ಕಾಗಲವಾಡಿ ಚಂದ್ರು, ಎಲ್. ನಾಗರಾಜು, ಶ್ರೀಧರ್,ರಾಜು ವರ್ಗೀಸ್, ಎಚ್.ಎಂ. ಗುರುಸ್ವಾಮಿ, ಬಿ. ನಾಗರಾಜು ಮೊದಲಾದವರು ಇದ್ದರು.

ಚೆಸ್‌ನಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಯಳಂದೂರು, ನ.9– ಪಟ್ಟಣದ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿಗಳಾದ ವರ್ಷಿತ ವೈ ಪಿ, ಸಂಜನಾ ಆರ್, ಸಾನಿಕ ಎಂಬ ವಿದ್ಯಾರ್ಥಿಗಳು ಚಾಮರಾಜನಗರದಲ್ಲಿ ನಡೆದ ಜಿಲ್ಲಾಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಗಳಿಸಿ ರಾಜ್ಯಮಟ್ಟದ ಚೆಸ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಇದೇ ರೀತಿ ವಿದ್ಯಾರ್ಥಿನಿ ಕೀರ್ತಿ ರಾಜ್ಯಮಟ್ಟದ ಕುಡ್ಡಿ ತಂಡಕ್ಕೆ ಆಯ್ಕೆಯಾಗಿದ್ದು, ಇವರನ್ನು ಆಡಳಿತ ಮಂಡಳಿ ಅಭಿನಂದಿಸಿದೆ.

ಅವಧಿ ಮೀರಿದ, ಮಾನವ ಸೇವನೆಗೆ ಯೋಗ್ಯವಲ್ಲದ 153 ಲೀ.ಬಿಯರ್ ನಾಶ

ಚಾಮರಾಜನಗರ, ನ.9– ಅವಧಿ ಮೀರಿದ ಹಾಗೂ ಸೇವನೆಗೆ ಯೋಗ್ಯವಲ್ಲದ ವಿವಿಧ ಮಾದರಿ 153 ಲೀಟರ್ ಬಿಯರ್ ಅನ್ನು ಅಬಕಾರಿಗಳ ಅಧಿಕಾರಿಗಳು ನಾಶಪಡಿಸಿದರು.



ತಾಲೂಕಿನ ಹೊರವಲಯದ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ಪಾನೀಯ ನಿಗಮದ ಗೋದಾಮಿನಲ್ಲಿ ಚಾ.ನಗರ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಎಂ.ಡಿ. ಮೋಹನ್‌ಕುಮಾರ್, ಕಸಬಾ ರಾಜಸ್ವ ನಿರೀಕ್ಷಕ ರಾಜಶೇಖರಮೂರ್ತಿ, ಬದನಗುಪ್ಪೆ ಗ್ರಾಮ ಅಡಳಿತಾಧಿಕಾರಿ ಎಸ್. ರಾಜೇಂದ್ರ ಪ್ರಸಾದ್, ಅಬಕಾರಿ ನಿರೀಕ್ಷಕರಾದ ಎಂ.ಬಿ. ಉಮಾಶಂಕರ್, ಬಿ.ಪಿ. ನಂದಿನಿ, ಟಿ.ಪಿ. ಗುರುನಾಥಶೆಟ್ಟಿ, ಡಿಪೋ ಮ್ಯಾನೇಜರ್ ಆರ್.ಬಿ. ಬಸವರಾಜು ನೇತೃತ್ವದಲ್ಲಿ 32,832 ರೂ.ಗಳ ಮೌಲ್ಯದ ಮದ್ಯವನ್ನು ನಾಶಪಡಿಸಿದರು.

32,832 ರೂ. ಮೌಲ್ಯದ 148 ಲೀಟರ್ ಬಿಯರ್, 2386 ರೂ. ಮೌಲ್ಯದ 5.775 ಲೀಟರ್ ಬ್ರೀಜರ್ ಅನ್ನು ನೆಲಕ್ಕೆ ಸುರಿಯುವ ಮೂಲಕ ನಾಶ ಪಡಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಕೆ.ಎಂ. ಸಿದ್ದರಾಜು, ಎಂ.ಪಿ. ಕುಮಾರ್ ಭಾಗವಹಿಸಿದ್ದರು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಕಾಲೇಜಿನಲ್ಲಿ ಕಾನೂನು ಸೇವೆಗಳ ದಿನ ಆಚರಣೆ



ಚಾಮರಾಜನಗರ, ನ.9– ತಾಲೂಕಿನ ಅಮಚವಾಡಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಇಂದು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯನ್ನು ಆಚರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶಿವನಂಜಪ್ಪನವರು ವಹಿಸಿ ಮಾತನಾಡಿ, ವಿವಿಧ ಕಾನೂನುಗಳ ಅರಿವು ಹಾಗೂ ಪರಿಹಾರಕ್ಕಾಗಿ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ ನೀಡುವ ಮಾರ್ಗದರ್ಶನ ಹಾಗೂ ಸೇವೆಗಳು ಜನರಿಗೆ ತುಂಬಾ ಅನುಕೂಲವಾಗಿದೆ. ಕಾನೂನಿನ ರೀತಿಯಲ್ಲಿ ಅನೇಕ ಸಮಸ್ಯೆಗಳನ್ನು ಹಾಗೂ ವ್ಯಾಜ್ಯಗಳನ್ನು ಪರಿಹಾರ ಮಾಡಿಕೊಂಡು ನೆಮ್ಮದಿಯಾಗಿ ಬದುಕಲು ಅವಕಾಶವಾಗುತ್ತದೆ ಎಂದರು. ಉಪನ್ಯಾಸಕರಾದ ಸುರೇಶ್ ಎನ್ ಋಗ್ವೇದಿ ಪ್ರತಿಜ್ಞಾವಿಧಿ ಬೋಧಿಸಿ, ಕಾನೂನು ಸೇವೆಗಳ ಪ್ರಾಧಿಕಾರದ ಅನೇಕ ಅಂಶಗಳ ಬಗ್ಗೆ ತಿಳುವಳಿಕೆ ನೀಡುತ್ತಿದೆ. 9 ರಾಷ್ಟ್ರೀಯ ಕಾನೂನು ಸೇವೆಗಳ ದಿನ ಪ್ರತಿಯೊಬ್ಬರು ಕಾನೂನಾತ್ಮಕವಾಗಿ ಜಾಗೃತಿಯನ್ನು ಹಾಗೂ ಜ್ಞಾನವನ್ನು ಪಡೆದು ಪರಿಹರಿಸಿಕೊಳ್ಳಬಹುದು.

ಕಾನೂನು ಸೇವೆಗಳ ಪ್ರಾಧಿಕಾರ ಉಚಿತವಾಗಿ ಕಾನೂನು ನೆರವು ನೀಡಿ ಜನಸಾಮಾನ್ಯರಲ್ಲಿ ಆತ್ಮ ವಿಶ್ವಾಸವನ್ನು ಆತ್ಮಸ್ಥೈರ್ಯವನ್ನು ತುಂಬಲು ಅವಕಾಶ ನೀಡಿದೆ ಎಂದರು. ಹಿರಿಯ ಉಪನ್ಯಾಸಕರಾದ ಮೂರ್ತಿ ಆರ್, ಶ್ರೀಕಂಠ ನಾಯಕ, ರಮೇಶ್, ಸುರೇಶ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹೆದ್ದಾರಿಯಲ್ಲಿ ಚಿಂದಿಬಟ್ಟೆ ಸುರಿದು ಪ್ರತಿಭಟನೆ

ಚಾಮರಾಜನಗರ, ನ.9– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಕಳೆದ 60 ದಿನಗಳಿಂದ ನಿರಂತರ ಪ್ರತಿಭಟನೆ ನಡೆಯುತ್ತಿದ್ದು, ಇಂದು ಕೂಡ ಹೆದ್ದಾರಿಯಲ್ಲಿ ಚಿಂದಿಬಟ್ಟೆ ಸುರಿದು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ನೇತೃತ್ವದಲ್ಲಿ ಚಿಂದಿ ಬಟ್ಟೆಗಳನ್ನು ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೇಂದ್ರ ಸರ್ಕಾರ, ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ನೀರನ್ನು ಹರಿಸುತ್ತಿರುವ ಸರ್ಕಾರ ಹಳೇ ಬಟ್ಟೆ ಸರ್ಕಾರವಾಗಿದೆ, ಅನ್ಯಾಯದ ಆದೇಶ ಕೊಡುತ್ತಿರುವ ಕಾವೇರಿ ನೀರು ನಿರ್ವಹಣಾ ಮಂಡಳಿ ಚಿಂದಿ ಸಮಿತಿಯಾಗಿದೆ ಎಂದು ಆಕ್ರೋಶ ಹೊರಹಾಕಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚೆ.ವೆಂ. ರಾಜ್ ಗೋಪಾಲ್, ನಿಜಧ್ವನಿಗೋವಿಂದರಾಜು, ಗು.ಪುರುಷೋತ್ತಮ್, ಮಹೇಶ್ ಗೌಡ, ಲಿಂಗರಾಜು, ರಾಚಪ್ಪ, ವೀರಭದ್ರ, ಪ್ರಕಾಶ್, ತಾಂಡವಮೂರ್ತಿ ಇತರರು ಭಾಗವಹಿಸಿದ್ದರು.

ವೈ.ಆರ್. ಸಂಧ್ಯಾ ನಿಧನ



ಯಳಂದೂರು, ನ.9– ಪಟ್ಟಣದ ನಿವಾಸಿ ವೈ.ಎನ್. ರಂಗನಾಥರಾವ್ ಅವರ ಪತ್ನಿ ವೈ.ಆರ್. ಸಂಧ್ಯಾ (68) ಅವರು ಬುಧವಾರ ರಾತ್ರಿ ನಿಧನರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಇವರು ಮೃತಪಟ್ಟಿದ್ದಾರೆ. ಮೃತರಿಗೆ ಪತಿ ಸೇರಿದಂತೆ ಒಬ್ಬ ಪುತ್ರ ಹಾಗೂ ಓರ್ವ ಪುತ್ರಿ ಇದ್ದಾರೆ. ಇವರ ಅಂತ್ಯಕ್ರಿಯೆಯು ಶುಕ್ರವಾರ ಬೆಳಗ್ಗೆ ಕೊಳ್ಳೇಗಾಲದ ಕಾವೇರಿನದಿ ದಡದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಲನ್, ಬ್ಯಾಂಕ್ ಸೀಲ್ ನಕಲಿ ಮಾಡಿ ಹಣ ಲೂಟಿ ಪ್ರಕರಣ: ಅಧಿಕಾರಿಗಳ ತಂಡದಿಂದ

ಮುಡಾ ಕಚೇರಿ ಲೆಕ್ಕ ಶಾಖೆಯಲ್ಲಿ ಹಣ ಪಾವತಿ ಪರಿಶೀಲನೆ ಆರಂಭ



ಮೈಸೂರು, ನ.9(ಆರ್‌ಕೆ)–ಚಲನ್, ಬ್ಯಾಂಕ್ ಮೊಹರು ನಕಲಿ ಮಾಡಿ ಕೋಟ್ಯಾಂತರ ರೂ. ಹಣ ಲೂಟಿ ಮಾಡುತ್ತಿದ್ದ ಪ್ರಕರಣ ಸಂಬಂಧ ತನಿಖೆಗೆ ರಚನೆಯಾಗಿರುವ ತಂಡದ ನಾಲ್ವರು ಅಧಿಕಾರಿಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಲೆಕ್ಕ ಶಾಖೆಯಲ್ಲಿ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾರಂಭಿಸಿದ್ದಾರೆ.

ನಿವೇಶನಗಳ ಖಾತಾ ನೋಂದಣಿ, ವರ್ಗಾವಣೆ, ಸಿಆರ್, ನಕ್ಷೆ ಅನುಮೋದನೆ, ಹಕ್ಕು ಪತ್ರ ಸೇರಿದಂತೆ ಮುಡಾದ ಎಲ್ಲಾ ಸೇವೆಗಳಿಗೆ ಶುಲ್ಕ ಪಾವತಿಸಿರುವ ಬಗ್ಗೆ ಬ್ಯಾಂಕ್ ಆಫ್ ಬರೋಡಾದ ಪ್ರಾಧಿಕಾರದ ಖಾತೆಗಳಿಗೆ ಹಣ ತುಂಬಿರುವ ರಶೀದಿ, ದಸ್ತಾವೇಜು ಪುಸ್ತಕದಲ್ಲಿ ನಮೂದಿಸಿರುವ ಬಗ್ಗೆ ಅಧಿಕಾರಿಗಳು ದಿನಾಂಕವಾರು ಪರಿಶೀಲಿಸುತ್ತಿದ್ದಾರೆ.

ಹಣ ಪಾವತಿಸದೇ ನಕಲಿ ಚಲನ್ ತಯಾರಿಸಿ ಕ್ಯಾಷ್ ಪೇಯ್ಡ್ ಮೊಹರು ಹಾಕಿ ಸೇವೆ ಪಡೆದಿರುವ ಪ್ರಕರಣಗಳ ಬಗ್ಗೆಯೂ ಪ್ರಾಧಿಕಾರದ ಎಲ್ಲಾ ವಲಯ ಕಚೇರಿಗಳು, ಟಿಪಿಎಂ, ವಸತಿ ಶಾಖೆ, ಭೂ ಸ್ವಾಧೀನ ಶಾಖೆ, ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕುತ್ತಿರುವ ತನಿಖಾ ತಂಡದ ಅಧಿಕಾರಿಗಳು, ಬ್ಯಾಂಕಿನ ಮುಡಾ ಖಾತೆಗೆ ಶುಲ್ಕ ಹಣ ಪಾವತಿಸದೇ ಪಡೆದಿರುವ ಸೇವೆಗಳ ಕುರಿತಂತೆ 2023ರ ಜನವರಿ 1ರಿಂದೀಚೆಗಿನ ಪಟ್ಟಿ ತಯಾರಿಸುತ್ತಿದ್ದಾರೆ.

ನಗರ ಯೋಜಕ ಸದಸ್ಯ ಆರ್.ಶೇಷ, ಮುಖ್ಯ ಲೆಕ್ಕಾಧಿಕಾರಿ ಎನ್.ಮುತ್ತಾ, ಕಾರ್ಯದರ್ಶಿ ಜಿ.ಡಿ.ಶೇಖರ್ ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರ್(ದಕ್ಷಿಣ) ಕೆ.ಆರ್.ಮಹೇಶ್ ಅವರು ಇತರ ಸಿಬ್ಬಂದಿಗಳ ಸಹಾಯದಿಂದ ಲೆಕ್ಕ ಶಾಖೆಯಲ್ಲಿ ದಾಖಲೆ ಪರಿಶೀಲಿಸುತ್ತಿದ್ದು, 15 ದಿನದೊಳಗೆ ಸಂಪೂರ್ಣ ವರದಿಯನ್ನು ಮುಡಾ ಆಯುಕ್ತರಿಗೆ ಸಲ್ಲಿಸಲಿದ್ದಾರೆ.

ನಕಲಿ ಚಲನ್, ಬ್ಯಾಂಕ್ ಮೊಹರು ತಯಾರಿಸಿಕೊಂಡು ಕೋಟ್ಯಾಂತರ ರೂ. ಹಣ ಲೂಟಿ ಮಾಡಿರುವ ಹಗರಣ ಹೊರ ಬರುತ್ತಿದ್ದಂತೆಯೇ ತಲೆಮರೆಸಿಕೊಂಡಿರುವ ಪ್ರಾಧಿಕಾರದ ಮೂವರು ಸಿಬ್ಬಂದಿ ವಿರುದ್ಧ ಅನುಮಾನ ಉಂಟಾಗಿದ್ದು, ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಶಂಕಿತ ಸಿಬ್ಬಂದಿಗೆ ಅನಧಿಕೃತ ಗೈರು ಸಂಬಂಧ ನೋಟೀಸ್ ಅನ್ನು ಅವರ ವಿಳಾಸಕ್ಕೆ ಜಾರಿ ಮಾಡುವಂತೆ ಅಧೀನಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

2020ರ ಸೆ.14ರ ಮುಡಾ ಸಭೆ ವಿಷಯ ಸಂಖ್ಯೆ 18ರ ನಿರ್ಣಯ ರದ್ದು

50:50ರ ಅನುಪಾತದಡಿ ಮಂಜೂರು ಮಾಡಿರುವ 900ಕ್ಕೂ ಹೆಚ್ಚು ನಿವೇಶನಗಳು ಅನೂರ್ಜಿತ

ಮಾಹಿತಿ ತಿಳಿಯದೇ ನಿವೇಶನ ಖರೀದಿಸಿರುವವರು ಸಂಕಷ್ಟದಲ್ಲಿ

ಮೈಸೂರು, ನ.9(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು 2020ರ ಸೆಪ್ಟೆಂಬರ್ 14ರ ಸಭಾ ವಿಷಯ ಸಂಖ್ಯೆ 18 ಸಂಬಂಧ ಮಾಡಿದ್ದ ನಿರ್ಣಯವನ್ನು ರಾಜ್ಯ ಸರ್ಕಾರ ರದ್ದುಪಡಿಸಿದೆ. ಪ್ರಾಧಿಕಾರದ ಬಡಾವಣೆ ಉದ್ದೇಶಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೇ, ಪರಿಹಾರವನ್ನೂ ನೀಡದೇ ಜಮೀನನ್ನು ಉಪಯೋಗಿಸಿದ ಪ್ರಕರಣಗಳಲ್ಲಿ ಶೇ.50:50 ಅನುಪಾತದಲ್ಲಿ ನಿವೇಶನ ನೀಡುವ ಬಗ್ಗೆ ಸಭೆಯಲ್ಲಿ ಕೈಗೊಂಡಿದ್ದ ನಿಯಮ ಬಾಹಿರ ನಿರ್ಣಯವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 67ರಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ಅಕ್ಟೋಬರ್ 10ರಂದು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ. ಅದರಂತೆ ಮುಡಾ ಆಯುಕ್ತರು 2020ರ ಸೆಪ್ಟೆಂಬರ್ 14ರಿಂದೀಚೆಗೆ ಇಂತಹ ಪ್ರಕರಣಗಳಲ್ಲಿ ಹಂಚಿಕೆ ಮಾಡಿರುವ ನೂರಾರು ಕೋಟಿ ರೂ. ಮೌಲ್ಯದ ಸುಮಾರು 900ಕ್ಕೂ ಹೆಚ್ಚು ನಿವೇಶನಗಳ ಮಂಜೂರಾತಿ ರದ್ದುಗೊಳಿಸಿ ಪ್ರಾಧಿಕಾರದ ಸ್ವಾಧೀನಕ್ಕೆ ಪಡೆದುಕೊಳ್ಳಬೇಕಿದೆ. ಆದರೆ, 50:50ರ ಅನುಪಾತದಲ್ಲಿ ಮಂಜೂರಾಗಿರುವ ನಿವೇಶನಗಳನ್ನು ಭೂ ಮಾಲೀಕರು ಬೇರೆಯವರಿಗೆ ಮಾರಾಟ ಮಾಡಿದ್ದು, ಖರೀದಿಸಿದವರಿಗೀಗ ಸಂಕಷ್ಟ ಉಂಟಾಗಿದೆ. ಆದ್ದರಿಂದ ಇನ್ನು ಮುಂದೆಯಾದರೂ ಇಂತಹ ಪ್ರಕರಣಗಳ ನಿವೇಶನಗಳನ್ನು ಸಾರ್ವಜನಿಕರು ಖರೀದಿಸುವಾಗ ಎಚ್ಚರ ವಹಿಸುವುದು ಒಳಿತು.

ಲೆಕ್ಕ ಶಾಖೆಯಲ್ಲಿ ಹಣ ಜಮೆ ಖಾತರಿಪಡಿಸದೇ ಸೇವೆ ಒದಗಿಸಿದ ಅಧಿಕಾರಿಗಳ ವಿರುದ್ಧವೂ ಕ್ರಮವಾಗಿಲ್ಲ!

ಮೈಸೂರು, ನ.9(ಆರ್‌ಕೆ)–ಮುಡಾ ಖಾತೆಗೆ ಶುಲ್ಕ ಮೊತ್ತ ಜಮೆಯಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳದೇ ಅರ್ಜಿದಾರರಿಗೆ ಸೇವೆ ಹಾಗೂ ದಾಖಲೆ ಒದಗಿಸಿರುವ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಹಲವು ಸಂಶಯಗಳಿಗೆ ಕಾರಣವಾಗಿದೆ.

ನಿಯಮದಂತೆ ಸಾರ್ವಜನಿಕರು ಖಾತಾ ನೋಂದಣಿ, ವರ್ಗಾವಣೆ ಸೇರಿದಂತೆ ಯಾವುದೇ ಸೇವೆ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಅವುಗಳನ್ನು ಸಂಬಂಧಪಟ್ಟ ವಲಯ ಕಚೇರಿ ವಲಯಾಧಿಕಾರಿಗಳು, ವಿಶೇಷ ತಹಶೀಲ್ದಾರ್, ಕಚೇರಿ ವ್ಯವಸ್ಥಾಪಕರು ಹಾಗೂ ಕೇಸ್ ವರ್ಕರ್‌ಗಳು ದಾಖಲೆ ಪತ್ರಗಳನ್ನು ಪರಿಶೀಲಿಸಿ, ಸರಿ ಇದ್ದಲ್ಲಿ ಹಾಗೂ ಕೋರಿರುವ ಸೇವೆ ಒದಗಿಸಬಹುದೆಂದು ಅಧಿಕಾರಿಗಳು ಕಡತದಲ್ಲಿ ಅನುಮೋದನೆ ನೀಡಿದ ಬಳಿಕ ಅರ್ಜಿದಾರರಿಗೆ ಶುಲ್ಕದ ಮೊತ್ತ ಪಾವತಿಸುವಂತೆ ಹಿಂಬರಹ ನೀಡಲಾಗುತ್ತದೆ.

ಅದರಂತೆ ಅರ್ಜಿದಾರ ಮುಡಾ ಕಚೇರಿ ಸ್ಪಂದನಾ ಕೌಂಟರ್‌ನಲ್ಲಿ ಆ ಹಿಂಬರಹ ತೋರಿಸಿದಲ್ಲಿ ಸಿಬ್ಬಂದಿ ಚಲನ್ ಬರೆದು ಬ್ಯಾಂಕ್ ಖಾತೆ ಸಂಖ್ಯೆ ಸೀಲ್ ಹಾಕಿ ಶುಲ್ಕದ ಮೊತ್ತ ನಮೂದಿಸಿ ಸಹಿ ಹಾಕಿ 4 ಪ್ರತಿಗಳನ್ನು ನೀಡುತ್ತಾರೆ. ಅವುಗಳಿಗೆ ಪಾವತಿದಾರ ಸಹಿ ಮಾಡಿ ಕಚೇರಿಯಲ್ಲೇ ಇರುವ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ ಹಣ ಪಾವತಿಸಿ ಬ್ಯಾಂಕ್ ಸೀಲ್ ಇರುವ 1 ಚಲನ್ ಅನ್ನು ಬ್ಯಾಂಕ್ ಕ್ಯಾಷಿಯರ್ ಕೊಡುತ್ತಾರೆ.

ಚಲನ್ ಜೆರಾಕ್ಸ್ ಪ್ರತಿಯನ್ನು ಸಂಬಂಧಪಟ್ಟ ಮುಡಾ ಕಚೇರಿ ಕೇಸ್ ವರ್ಕರ್‌ಗೆ ಅರ್ಜಿದಾರ ತಲುಪಿಸಿದ ನಂತರ, ಅದನ್ನು ಲೆಕ್ಕ ಶಾಖೆಗೆ ಕಡತ ಸಮೇತ ಕಳುಹಿಸಿ ಮುಡಾ ಖಾತೆಗೆ ಹಣ ಜಮೆಯಾಗಿರುವ ಬಗ್ಗೆ ದೃಢೀಕರಿಸಲಾಗಿದೆ ಎಂದು ಲೆಕ್ಕಾಧಿಕಾರಿ ನಮೂದಿಸಿ ಕಡತವನ್ನು ಹಿಂದಿರುಗಿಸುತ್ತಾರೆ. ನಂತರ ಆ ಕಡತದಲ್ಲಿ ಸೇವೆ ಒದಗಿಸಿ ದಾಖಲೆ ಪತ್ರ ವಿತರಿಸುವಂತೆ ಕಚೇರಿ ವ್ಯವಸ್ಥಾಪಕ ಹಾಗೂ ವಿಶೇಷ ತಹಶೀಲ್ದಾರ್ ಅಥವಾ ವಲಯಾಧಿಕಾರಿ ಆದೇಶಿಸುತ್ತಾರೆ. ಕೆಲವು ಪ್ರಕರಣಗಳಲ್ಲಿ ಕಡತವು ಕಾರ್ಯದರ್ಶಿಗಳ ಮೂಲಕ ಆಯುಕ್ತರಿಗೂ ಹೋಗಿ ಬರುವುದುಂಟು.

ಹಣ ಪಾವತಿಸಿದ ಮೇಲೂ ಇಷ್ಟೊಂದು ಪ್ರಕ್ರಿಯೆ ನಡೆಯಬೇಕಿದೆ. ಈ ವ್ಯವಸ್ಥೆಯಲ್ಲಿ ಕೇಸ್ ವರ್ಕರ್, ವ್ಯವಸ್ಥಾಪಕ ಹಾಗೂ ವಿಶೇಷ ತಹಶೀಲ್ದಾರರು ಮುಡಾ ಖಾತೆಗೆ ಹಣ ಪಾವತಿಯಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳದೇ ಸೇವೆ ಒದಗಿಸಿದ್ದರೆ, ಅದಕ್ಕೆ ಸಂಬಂಧಪಟ್ಟ ಪ್ರಾಧಿಕಾರದ ಸಿಬ್ಬಂದಿ, ಅಧಿಕಾರಿಗಳು ಹೊಣೆಗಾರರೇ ಹೊರತು, ಅರ್ಜಿದಾರರ ಜವಾಬ್ದಾರಿ ಏನಿದೆ? ಎಂಬ ಪ್ರಶ್ನೆ ಉದ್ಭವಿಸಿದೆ.

ನಕಲಿ ಚಲನ್ ಮತ್ತು ಬ್ಯಾಂಕ್ ಸೀಲ್ ಮಾಡಿಕೊಂಡು ಹಣ ಪಾವತಿ ಚಲನ್ ನೀಡಿದರೆ ಮುಡಾ ಖಾತೆಗೆ ಹಣ ಪಾವತಿಯಾಗಿದೆಯೇ ಎಂಬುದನ್ನು ದೃಢಪಡಿಸದೇ ಸೇವೆ ಒದಗಿಸಿರುವ ಹಲವು ಪ್ರಕರಣಗಳಲ್ಲಿ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧವೇ ಪ್ರಕರಣ ದಾಖಲಿಸಬೇಕು ಹಾಗೂ ಪ್ರಾಧಿಕಾರಕ್ಕೆ ಇದರಿಂದ ಆಗಿರುವ ನಷ್ಟವನ್ನು ಅವರೇ ಭರಿಸಬೇಕಿರುವುದು ನ್ಯಾಯ ಸಮ್ಮತವಾದುದು ಎಂಬುದು ಸಿಬ್ಬಂದಿಯ ವಾದ.

ಒಂದನೇ ಪುಟದಿಂದ

ಮೈಸೂರು ಡಿಸಿಗೆ ಸರ್ಕಾರ ತಾಕೀತು

ಪ್ರಾಧಿಕಾರವು ರಿಯಲ್ ಎಸ್ಟೇಟ್ ಉದ್ಯಮಿ ಎಂ.ಎನ್.ಮಂಜುನಾಥ್ ಅವರಿಗೆ ಕಾನೂನು ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡಿ ಕೋಟ್ಯಾಂತರ ರೂ. ಅಕ್ರಮ ಲಾಭ ಮಾಡಿಕೊಂಡಿರುವ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ವಿಶೇಷ ತಹಶೀಲ್ದಾರ್ ಶಿವಕುಮಾರ್, ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಾವ್ಯ, ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿದ್ದ ಸಂಬಂಧವೂ ಪರಿಶೀಲಿಸಿ ವರದಿ ನೀಡುವಂತೆ ಅವರು ಸೂಚಿಸಿದ್ದಾರೆ.

ಅಲ್ಲದೆ, ಗೋಕುಲಂ 3ನೇ ಹಂತದ ಬಡಾವಣೆಯ 490/ಎಫ್ 50X80 ಅಡಿ ಅಳತೆಯ ನಿವೇಶನಕ್ಕೆ ನಿಯಮ ಬಾಹಿರವಾಗಿ ಬದಲಿ ನಿವೇಶನ ನೀಡಿರುವುದು, ಹಂಚ್ಯಾ–ಸಾತಗಳ್ಳಿಯ ನಿವೇಶನ ಸಂಖ್ಯೆ 241 (20X30)ಎಗೆ ಬದಲಾಗಿ ಬೆಲೆ ಬಾಳುವ ನಿವೇಶನ ನೀಡಿರುವುದು ಹಾಗೂ ವಿಜಯನಗರ 3ನೇ ಹಂತದ ಬಡಾವಣೆ ರಚನೆಗೆ ಹಿನಕಲ್ ಸ.ನಂ.293/3 ಹಾಗೂ 293ರಲ್ಲಿ 2.28 ಎಕರೆ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಲಾಗಿತ್ತಾದರೂ, ಈವರೆವಿಗೂ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲವಾದ್ದರಿಂದ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ ಎಂದು ಅಧೀನ ಕಾರ್ಯದರ್ಶಿಗಳು ಮೈಸೂರು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ.

ಮೈಸೂರಲ್ಲಿ ಮಹಿಳಾ ಕ್ರಿಕೆಟ್ ಲೀಗ್ ಪಂದ್ಯಾವಳಿಗೆ ಚಾಲನೆ

● 5 ತಂಡಗಳಲ್ಲಿ 72 ಮಹಿಳಾ ಆಟಗಾರರು ಭಾಗಿ ● ಮೊದಲ ಪಂದ್ಯದಲ್ಲಿ ಕಾವೇರಿ ವಿರುದ್ಧ ಗೋದಾವರಿಗೆ ಜಯ



ಮೈಸೂರು,ನ.9(ಎಂಟಿವೈ)– ಮಹಿಳಾ ಕ್ರಿಕೆಟ್ ಪಟುಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮೈಸೂರು ವಲಯದ ಕ್ರಿಕೆಟ್ ಇತಿಹಾಸದಲ್ಲಿ ಇಂದಿನಿಂದ ಇದೇ ಮೊದಲ ಬಾರಿಗೆ ಮಹಿಳಾ ಕ್ರಿಕೆಟ್ ಲೀಗ್ ಆರಂಭಿಸಲಾಗಿದ್ದು, 5 ತಂಡಗಳಲ್ಲಿ 72 ಮಹಿಳಾ ಕ್ರಿಕೆಟ್ ಪಟುಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡು ಗಮನ ಸೆಳೆದಿದ್ದಾರೆ.

ಮೈಸೂರಿನ ಎಸ್‌ಜೆಸಿಇ ಕ್ರಿಕೆಟ್ ಮೈದಾನದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಮೈಸೂರು ವಲಯ ಆಯೋಜಿಸಿದ್ದ ಮಹಿಳಾ ಕ್ರಿಕೆಟ್ ಲೀಗ್ ಪಂದ್ಯಾವಳಿಗೆ ಗುರುವಾರ ಬೆಳಗ್ಗೆ ಕೆಎಸ್‌ಸಿಎ ಮೈಸೂರು ವಲಯದ ಸಂಚಾಲಕ ಆರ್.ಕೆ.ಹರಿಕೃಷ್ಣ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೈಸೂರು ವಲಯದ ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವುಮೆನ್ ಕ್ರಿಕೆಟ್ ಲೀಗ್ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಇದುವರೆಗೆ ಬೆಂಗಳೂರಲ್ಲಿ ಮಾತ್ರ ಮಹಿಳಾ ಕ್ರಿಕೆಟ್ ಲೀಗ್ ಪಂದ್ಯಾವಳಿ ನಡೆಯುತ್ತಿತ್ತು. ಇದೀಗ ಮೈಸೂರಲ್ಲೂ ಮಹಿಳಾ ಕ್ರಿಕೆಟ್ ಲೀಗ್ ಆರಂಭಿಸಿರುವುದರಿಂದ ಮೈಸೂರು ಭಾಗದ ಮಹಿಳಾ ಕ್ರಿಕೆಟ್ ಪಟುಗಳಿಗೆ ಸಹಕಾರಿಯಾಗಲಿದೆ ಎಂದರು.

ಇದುವರೆಗೆ ಮೈಸೂರಲ್ಲಿ ವಿವಿಧ ಕ್ರಿಕೆಟ್ ಕ್ಲಬ್‌ಗಳಲ್ಲಿ ಮಹಿಳಾ ಆಟಗಾರರು ತರಬೇತಿ ಪಡೆಯುತ್ತಿದ್ದರು. ಆದರೆ, ಲೀಗ್ ಪಂದ್ಯಾವಳಿ ಆಯೋಜಿಸುತ್ತಿರುವುದರಿಂದ ಮೈಸೂರಲ್ಲೂ ಮಹಿಳಾ ಕ್ರಿಕೆಟ್ ಇದೆ ಎಂಬ ಸಂದೇಶ ರವಾನೆಯಾದರೆ ಇನ್ನಷ್ಟು ಮಹಿಳಾ ಕ್ರಿಕೆಟ್‌ಪಟುಗಳು ಹೊರಹೊಮ್ಮಲು ಸಹಕಾರಿಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಮಹಿಳಾ ಕ್ರಿಕೆಟಿಗರಿಗೆ ಉತ್ತೇಜನ ನೀಡಲಾಗುತ್ತಿದೆ. ಐಪಿಎಲ್ ಮಾದರಿಯಲ್ಲಿಯೇ ಮಹಿಳಾ ಐಪಿಎಲ್ ಪಂದ್ಯಾವಳಿ ಆಯೋಜಿಸಿ, ಪುರುಷ ಕ್ರಿಕೆಟ್‌ಪಟುಗಳಿಗೆ ನೀಡುವಂತೆ ನಗದು ಬಹುಮಾನವನ್ನು ಮಹಿಳಾ ಕ್ರಿಕೆಟ್‌ಪಟುಗಳಿಗೂ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಲಯದಲ್ಲಿ ಮಹಿಳಾ ಕ್ರಿಕೆಟ್ ಲೀಗ್ ಆರಂಭಿಸುವ ಚಿಂತನೆಯನ್ನು ಇದೀಗ ಸಾಕಾರಗೊಳಿಸಲಾಗಿದೆ ಎಂದು ತಿಳಿಸಿದರು.

ಮೈಸೂರಲ್ಲಿ ಮಹಿಳಾ ಕ್ರಿಕೆಟ್ ಲೀಗ್ ಪಂದ್ಯಾವಳಿ ಆರಂಭಿಸಿರುವುದರಿಂದ ಉದಯೋನ್ಮುಖ ಮಹಿಳಾ ಕ್ರಿಕೆಟ್ ಪಟುಗಳಿಗೆ ವರದಾನವಾಗಿ ಪರಿಣಮಿಸಿದೆ. ಮಹಿಳಾ ಕ್ರಿಕೆಟ್ ಪಟುಗಳು ಲೀಗ್ ಮ್ಯಾಚ್‌ಗಳಲ್ಲಿ ಉತ್ತಮ ಪ್ರದರ್ಶನ ತೋರಿದರೆ ಮುಂದಿನ ದಿನಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ತಂಡಗಳಿಗೆ ಆಯ್ಕೆಯಾಗಲು ಸಹಕಾರಿಯಾಗುತ್ತದೆ. ಅಲ್ಲದೆ, ಮಹಿಳಾ ಆಟಗಾರರು ಶಿಕ್ಷಣದೊಂದಿಗೆ ಪ್ಲಾನಿಂಗ್ ಮಾಡಿಕೊಳ್ಳಬೇಕಾಗುತ್ತದೆ. ದಿನದ ದಿನಚರಿಯಲ್ಲಿ ಶಿಕ್ಷಣ, ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳಲು ಹಾಗೂ ತರಬೇತಿ ಪಡೆದುಕೊಳ್ಳುವುದಕ್ಕೂ ಗಮನ ಹರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಕ್ರಿಕೆಟ್ ಪಟುಗಳಿಗಾಗಿ ತರಬೇತುದಾರರನ್ನು ನಿಯೋಜಿಸಿ, ಉತ್ತಮ ತರಬೇತಿ ಕೊಡಿಸುವ ಆಲೋಚನೆಯೂ ಇದೆ ಎಂದರು.

ಇಂದು ಆರಂಭವಾದ ಮಹಿಳಾ ಕ್ರಿಕೆಟ್ ಲೀಗ್‌ನಲ್ಲಿ 5 ತಂಡಗಳಲ್ಲಿ 72 ಮಹಿಳಾ ಆಟಗಾರರು ಪಾಲ್ಗೊಂಡಿದ್ದಾರೆ. ಅವರಲ್ಲಿ ಶುಭ ಸತೀಶ್, ಪಿ.ಸಾಲೋನಿ, ಕೆ.ರಕ್ಷಿತಾ, ವಿ.ವೇದ ವರ್ಷಿಣಿ, ಟಿ.ನಿರೀಕ್ಷಾ, ಜೆ.ಜೋಸ್ನಾ, ಲಿಯಾಂಕ ಶೆಟ್ಟಿ ಅವರು ವಿವಿಧ ವಯೋಮಾನದ ಪಂದ್ಯಾವಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. 6 ಮಂದಿ ಮೈಸೂರು ವಿಶ್ವವಿದ್ಯಾನಿಲಯದ ತಂಡವನ್ನು ಪ್ರತಿನಿಧಿಸಿದ್ದಾರೆ ಎಂದರು.

ಪಂದ್ಯಾವಳಿಯಲ್ಲಿ ಕಾವೇರಿ, ಗೋದಾವರಿ, ನರ್ಮದಾ, ಗಂಗಾ ಹಾಗೂ ಯಮುನ ಹೆಸರಿನ ತಂಡದಲ್ಲಿ ಮಹಿಳಾ ಕ್ರಿಕೆಟ್ ಪಟುಗಳು ಸೆಣೆಸಾಡಲಿದ್ದಾರೆ.

ಈ ಸಂದರ್ಭದಲ್ಲಿ ಕೆಎಸ್‌ಸಿಎ ಮೈಸೂರು ವಲಯದ ಅಧ್ಯಕ್ಷ ಬಾಲಚಂದ್ರ, ಪದಾಧಿಕಾರಿಗಳಾದ ಸುಧಾಕರ್ ರೈ, ಪಂದ್ಯಾವಳಿ ಕಮಿಟಿ ಅಧ್ಯಕ್ಷ ಮಂಜುನಾಥ್, ಎಸ್‌ಜೆಸಿಇ ದೈಹಿಕ ನಿರ್ದೇಶಕ ಡಾ.ರೇವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾವೇರಿ ಮಣಿಸಿದ ಗೋದಾವರಿ: ಮಹಿಳಾ ಕ್ರಿಕೆಟ್ ಲೀಗ್‌ನ ನಿಗದಿತ 30 ಓವರ್‌ನ ಮೊದಲ ಪಂದ್ಯದಲ್ಲಿ ಟಾಸ್‌ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಗೋದಾವರಿ ತಂಡ ಪಿ.ಸಲೋನಿ(105) ಅವರ ಭರ್ಜರಿ ಶತಕ ಹಾಗೂ ಪ್ರಿಯಾಂಕ(25) ಅವರ ಉತ್ತಮ ಆಟದ ನಡುವೆಯೂ 25.3 ಓವರ್‌ಗಳಲ್ಲಿ 173 ರನ್‌ಗೆ ಸರ್ವಪತನ ಕಂಡಿತು. ಕಾವೇರಿ ತಂಡದ ಬೌಲರ್ ವೇದ ವರ್ಷಿಣಿ ಮಾರಕ ದಾಳಿಗೆ ಗೋದಾವರಿ ತಂಡ ತತ್ತರಿಸಿತು. ವೇದ ವರ್ಷಿಣಿ 6 ಓವರ್‌ಗಳಲ್ಲಿ 1 ಮೇಡನ್ ಪಡೆದು 9ರನ್ ನೀಡಿ 4 ವಿಕೆಟ್ ಪಡೆದರು. ಎಂ.ಸಾಧನ 5 ಓವರ್‌ನಲ್ಲಿ 34 ರನ್ ನೀಡಿ 2 ವಿಕೆಟ್ ಪಡೆದರೆ, ಪುಣ್ಯ 3.3 ಓವರ್‌ನಲ್ಲಿ 22ರನ್ ನೀಡಿ 2 ವಿಕೆಟ್ ಪಡದರು. ಇದರಿಂದ ಗೋದಾವರಿ ತಂಡ 173 ರನ್‌ಗೆ ಆಲೌಟ್ ಆಯಿತು.

174 ರನ್ ಗೆಲುವಿನ ಬೆನ್ನತ್ತಿದ್ದ ಕಾವೇರಿ ತಂಡ ನಿಗದಿತ 30 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿ, ಹೋರಾಟವನ್ನು ಅಂತ್ಯಗೊಳಿಸಿತು. ಆ ಮೂಲಕ 15 ರನ್‌ಗಳಿಂದ ಸೋಲಪ್ಪಿಕೊಂಡಿತು. ಸಾಧನ 33, ನೇಸರ ಅಜೇಯ 23, ನಂದಿತ, 23, ಇಂಪನ 20ರನ್ ಗಳಿಸಿ ಗಮನ ಸೆಳೆದರು.

ನ.18, ರಸ್ತೆ ಸುರಕ್ಷತೆ ಜಾಗೃತಿಗಾಗಿ ಬೈಕ್ಥಾನ್



ಮೈಸೂರು, ನ.9(ಜಿಎ)–ನಗರದ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ಹಾಗೂ ರೋಟರಿ ಮೈಸೂರು ವತಿಯಿಂದ ನ.18ರಂದು ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜೀವ ರಕ್ಷ ರಸ್ತೆ ಸುರಕ್ಷತಾ ಬೈಕ್ಥಾನ್ – 2023 ಅನ್ನು ಆಯೋಜಿಸಲಾಗಿದೆ ಎಂದು ಸ್ವಾಮಿ ವಿವೇಕಾನಂದ ಯೂತ್‌ಮೂವೆಂಟ್ ಮೈಸೂರು ವಿಭಾಗದ ಮುಖ್ಯಸ್ಥೆ ರೇಖಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮತ್ತು ಬೆಂಗಳೂರಿನ ಎರಡು ತಂಡಗಳು ಬೈಕ್ಥಾನ್‌ನಲ್ಲಿ ಭಾಗವಹಿಸಲಿವೆ. ಅದರಂತೆ ಮೈಸೂರು ತಂಡವು ನ.18ರಂದು ಬೆಳಗ್ಗೆ 7ಕ್ಕೆ ಸೇಂಟ್ ಜೋಸೆಫ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಂದ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಬೀದಿ ನಾಟಕ ಆರಂಭವಾಗಲಿದೆ. ನಂತರ 7.30ಕ್ಕೆ ಜೀವ ರಕ್ಷ ರಸ್ತೆ ಸುರಕ್ಷತಾ ಬೈಕ್ಥಾನ್ ಚಾಲನೆಗೊಳ್ಳಲಿದೆ. ಬೈಕ್ಥಾನ್ 8.30ಕ್ಕೆ ಮಂಡ್ಯದ ಸಂಜಯ್ ವೃತ್ತ ತಲುಪಲಿದೆ. 8.30 ರಿಂದ 9ರವರೆಗೂ ಜಾಗೃತಿ ಭಾಷಣ ಮತ್ತು ಫಲಕಗಳ ಪ್ರದರ್ಶನ ನಡೆಯಲಿದ್ದು, 9 ಗಂಟೆಗೆ ಚಿತ್ರದುರ್ಗದ ಕಡೆಗೆ ಪ್ರಯಾಣ ಮುಂದುವರೆಯಲಿದೆ ಎಂದರು.

ಬೆಂಗಳೂರಿನಲ್ಲಿ ನ.18ರ ಬೆಳಗ್ಗೆ 6.30ಕ್ಕೆ ಬೈಕ್ಥಾನ್‌ಗೆ ಚಾಲನೆಗೊಳ್ಳಲಿದೆ. ಈ ತಂಡವು 10.15ಕ್ಕೆ ತುಮಕೂರು ತಲುಪಲಿದೆ. ನಂತರ ತಂಡದ ವತಿಯಿಂದ 1.30ಕ್ಕೆ ಬೀದಿ ನಾಟಕ ಮಾಡುವ ಮೂಲಕ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಿದ್ದಾರೆ. ನ.19ರಂದು ಎರಡು ತಂಡವು ಹೊಸಪೇಟೆ ತಲುಪಿ, ಹಂಪೆಯಲ್ಲಿ ಬೀದಿ ನಾಟಕದ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಆರ್.ಯಶ್ವಂತ್ 90367 50300, 7019749163 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಮೈಸೂರು ಅಧ್ಯಕ್ಷ ಅರುಣ್ ಬೆಳವಾಡಿ, ಮಾಜಿ ಅಧ್ಯಕ್ಷ ರಾಜಾರಾಮ್, ರೋಟರಿಯನ್ ಜಸ್ವಂತ್‌ಧರ್, ಡಾ.ದೀಪು ಉಪಸ್ಥಿತರಿದ್ದರು.

ಅಂಗನವಾಡಿ ಅಭಿವೃದ್ಧಿಗಾಗಿ ನಗೆ ಪ್ರಹಸನ ಕಾರ್ಯಕ್ರಮ



ಮೈಸೂರು, ನ.9(ಜಿಎ)– ಅಂಗನವಾಡಿ ಅಭಿವೃದ್ಧಿಗಾಗಿ ರೋಟರಿ ಮೈಸೂರು ಉತ್ತರ ಮತ್ತು ಕದಂಬ ರಂಗವೇದಿಕೆ ಸಹಯೋಗದಲ್ಲಿ ನ.10 ರಂದು ಸಂಜೆ 6 ಗಂಟೆಗೆ ಗಿಚ್ಚಿ ಗಿಲಿಗಿಲಿ ಕಲಾವಿದರಿಂದ ನಗೆ ಪ್ರಹಸನ ಹಾಗೂ ಶ್ರೀನಾಗಲಿಂಗೇ ಗೌಡ ಪಾಂಡವಪುರ ಅವರ ತಂಡದಿಂದ ಕರೋಕೆ ಕಾರ್ಯಕ್ರಮವನ್ನು ನಾದಬ್ರಹ್ಮ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಂ.ಕೆ.ಶ್ರೀಧರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮವನ್ನು ಆರ್.ಐ.ಜಿಲ್ಲೆ 3181 ರ ಜಿಲ್ಲಾ ಗವರ್ನರ್ ಎಚ್.ಆರ್.ಕೇಶವ್ ಉದ್ಘಾಟಿಸುವರು. ಜಿಲ್ಲಾ ಯೋಜನೆಗಳ ಕಾರ್ಯಾಧ್ಯಕ್ಷ ಸತೀಶ್ ಬೊಳಾರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕಾರ್ಯಕ್ರಮಕ್ಕೆ ಪಾಸ್‌ಗಳ ವ್ಯವಸ್ಥೆ ಕಲ್ಪಿಸಿದ್ದು, ಆಸಕ್ತರು ಸ್ಥಳದಲ್ಲಿಯೇ ಪಡೆದುಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಂ.ರಾಜು, ಸಂಚಾಲಕ ರಾಜಶೇಖರ ಕದಂಬ, ರೋಟರಿ ವಲಯ–8 ರ ಸಹಾಯಕ ಗವರ್ನರ್ ಎಂ.ಕೆನಂಜಯ್ಯ, ಖಜಾಂಚಿ ಕೆಂಪೇಗೌಡ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರೌಢಶಾಲೆಗೆ ಮೂಲ ಸೌಕರ್ಯ ಕಲ್ಪಿಸದಿದ್ದರೆ ಹೋರಾಟ: ಎಎಪಿ ಎಚ್ಚರಿಕೆ



ಮೈಸೂರು, ನ.9(ಜಿಎ)– ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದ ತಿ.ನರಸೀಪುರದ ಪಟ್ಟಣದಲ್ಲಿರುವ ಹೆಣ್ಣು ಮಕ್ಕಳ ಸರ್ಕಾರಿ ಪ್ರೌಢಶಾಲೆಯಲ್ಲಿ ಮೂಲ ಸೌಕರ್ಯಗಳಿಲ್ಲದೆ ವಿದ್ಯಾರ್ಥಿನಿಯರಿಗೆ ತೊಂದರೆಯಾಗಿದೆ. ತಿಂಗಳಲ್ಲಿ ಸೌಲಭ್ಯ ಕಲ್ಪಿಸದಿದ್ದರೆ ಹೋರಾಟ ನಡೆಸುವುದಾಗಿ ಆಮ್ ಆದ್ಮಿ ಪಕ್ಷ ಎಚ್ಚರಿಕೆ ನೀಡಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಎಎಪಿ ಜಿಲ್ಲಾಧ್ಯಕ್ಷ ರಂಗಯ್ಯ ಮಾತನಾಡಿ, ಮುಖ್ಯಮಂತ್ರಿಗಳ ಜಿಲ್ಲೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದ ಪಟ್ಟಣದಲ್ಲೇ ಇಂತಹ ಸ್ಥಿತಿ ಶೋಚನೀಯ. ತಿ.ನರಸೀಪುರ ಪಟ್ಟಣದ ಸರ್ಕಾರಿ ಹಿರಿಯ ವಿದ್ಯಾರ್ಥಿನಿಯರ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 350ರಿಂದ 275ಕ್ಕೆ ಕ್ಷೀಣಿಸಿದೆ. ಇದಕ್ಕೆ ಕಾರಣ ಕೇಳಿದಾಗ ಶಾಲೆಯಲ್ಲಿ ಶೌಚಾಲಯದ ವ್ಯವಸ್ಥೆಯಿಲ್ಲ. ಕಾಂಪೌಂಡ್ ವ್ಯವಸ್ಥೆ ಸೇರಿ ಸರ್ಕಾರಿ ಶಾಲೆಗೆ ಅನೇಕ ಮೂಲ ಸೌಕರ್ಯ ಇಲ್ಲದಂತಾಗಿದೆ ಎಂದು ತಿಳಿಯಿತು ಎಂದರು.

ಶಾಲೆಯ ಕಾಂಪೌಂಡ್ ಕುಸಿದ ಸ್ಥಳವನ್ನು ಪಟ್ಟಣ ಪಂಚಾಯಿತಿ ಆಕ್ರಮಿಸಿಕೊಂಡು ಅನಧಿಕೃತವಾಗಿ ಮಳಿಗೆಗಳನ್ನು ಕಟ್ಟಿತ್ತು. ಈಗ ಮತ್ತೆರಡು ಮಳಿಗೆಗಳನ್ನು ಕಟ್ಟುತ್ತಿದ್ದಾರೆ. ಈ ಬಗ್ಗೆ ಬಿಇಓ ಮತ್ತು ಶಾಲೆ ಮುಖ್ಯೋಪಾಧ್ಯಾಯರ ಬಳಿ ಪ್ರಶ್ನಿಸಿದಾಗ ಶಾಲೆಯ ಸ್ಥಿತಿ ಕುರಿತು ಈಗಾಗಲೇ ಪತ್ರ ಬರೆಯಲಾಗಿದೆ ಎಂದು ಉತ್ತರಿಸುತ್ತಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಎಪಿಯ ರಾಜ್ಯ ಕಾರ್ಯದರ್ಶಿ ಸೋಸಲೆ ಸಿದ್ದರಾಜು, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಉಷಾ ಸಂಪತ್, ಕಾರ್ಯದರ್ಶಿ ವಿಶ್ವನಾಥ್ ಕುಲಕರ್ಣಿ, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಣ್ಣ ಉಪಸ್ಥಿತರಿದ್ದರು.

ವಚನಸಾಹಿತ್ಯ ರಸಪ್ರಶ್ನೆ : ವಿಜಯ ಚಂದ್ರಶೇಖರ್‌ಗೆ ಬಹುಮಾನ



ಮೈಸೂರು, ನ 9– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 75ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ದಾವಣಗೆರೆಯ ವಿಜಯ ಚಂದ್ರಶೇಖರ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಿಎಂ ಮೈಸೂರು ನಿವಾಸಕ್ಕೆ ಮುತ್ತಿಗೆ ಯತ್ನ: ರೈತರ ಬಂಧನ, ಬಿಡುಗಡೆ





ಮೈಸೂರು, ನ.9(ಎಂಟಿವೈ)– ಕಬ್ಬಿಗೆ ಹೆಚ್ಚುವರಿ ದರ ನಿಗದಿ, ಬಾಕಿ ಹಣ ಪಾವತಿಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ಮುಖ್ಯಮಂತ್ರಿ ಸಿಎಂ ಸಿದ್ದರಾಮಯ್ಯ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಮುಂದಾದ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಸಂಜೆ ವೇಳೆ ಬಿಡುಗಡೆ ಮಾಡಿದರು.

ಸಿಎಂ ನಿವಾಸಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸಲಿದ್ದಾರೆ ಎಂಬ ಮಾಹಿತಿ ಮೇರೆಗೆ ಬೆಳಗ್ಗಿನಿಂದಲೇ ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ಸಿಎಂ ಸಿದ್ದರಾಮಯ್ಯ ಅವರ ನಿವಾಸದ ಮುಂದೆ ಪೊಲೀಸ್ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಮನೆ ಮುಂದಿನ ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಸ್ಥಳೀಯರನ್ನು ಹೊರತುಪಡಿಸಿ ಬೇರೆ ಯಾರನ್ನೂ ಓಡಾಡಲು ನಿರ್ಬಂಧ ಹೇರಲಾಗಿತ್ತು. ಈ ವೇಳೆ ಸಿಎಂ ನಿವಾಸದ ಬಳಿ ಪ್ರತಿಭಟಿಸಲು ಆಗಮಿಸಿದ ಕಬ್ಬು ಬೆಳೆಗಾರರನ್ನು ಪೊಲೀಸರು ತಡೆದರು. ಇದರಿಂದ ರೈತರು ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಲು ಮುಂದಾದರು. ಈ ವೇಳೆ ಪೊಲೀಸರು ಹಾಗೂ ರೈತರ ನಡುವೆ ವಾಗ್ವಾದ ನಡೆಯಿತು. ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ಬಂದಿದ್ದೇವೆ. ಯಾವ ಕಾರಣಕ್ಕೆ ತಡೆಯುತ್ತೀರಿ? ನಾವು ಜಿಲ್ಲಾಡಳಿತ, ಪೊಲೀಸ್ ಆಯುಕ್ತರಿಗೆ ಒಂದು ವಾರ ಮೊದಲೇ ಧರಣಿ ನಡೆಸುವ ಬಗ್ಗೆ ಮನವಿ ಸಲ್ಲಿಸಿದ್ದೆವು. ಆದರೂ ಯಾವ ಕಾರಣಕ್ಕೆ ಪ್ರತಿಭಟನೆಗೆ ಅವಕಾಶ ನೀಡಿಲ್ಲ ಎಂದು ಲಿಖಿತವಾಗಿ ತಿಳಿಸಬೇಕು. ಇಲ್ಲದಿದ್ದರೆ ನಾವು ಇಲ್ಲೇ ಇರುತ್ತೇವೆ. ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಿ, ಜೈಲಿಗೆ ಕಳುಹಿಸಿ ಎಂದು ರೈತರು ಪಟ್ಟು ಹಿಡಿದರು. ಆದರೆ ಪ್ರತಿಭಟನೆಗೂ ಅವಕಾಶ ಕೊಡದ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದರು. ಬಳಿಕ ಸಿಎಆರ್ ಮೈದಾನದಲ್ಲಿ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಜನಪ್ರತಿನಿಧಿಗಳು ದನ ಕಾಯುವ ಆಡಳಿತ ನಡೆಸುತ್ತಿದ್ದು, ರೈತರ ಮೂಗಿಗೆ ತುಪ್ಪ ಸವರುವ ನಾಟಕ ಮಾಡುತ್ತಿದ್ದಾರೆ. ತಮ್ಮ ಕ್ಷೇತ್ರದ ಬಣ್ಣಾರಿ ಸಕ್ಕರೆ ಕಾರ್ಖಾನೆಯಿಂದ ನ್ಯಾಯ ಕೊಡಿಸಲು ಸಾಧ್ಯವಾಗದ ಮುಖ್ಯಮಂತ್ರಿ ರಾಜ್ಯದ ಕಬ್ಬು ಬೆಳೆಗಾರರಿಗೆ ಹೇಗೆ ನ್ಯಾಯ ಕೊಡಿಸುತ್ತಾರೆ? ನ್ಯಾಯಕ್ಕಾಗಿ ಧರಣಿ ನಡೆಸಲು ಪ್ರಯತ್ನಿಸಿದರೆ ಪೊಲೀಸ್ ಬಲದ ಮೂಲಕ ಹತ್ತಿಕ್ಕುವ ಕಾರ್ಯ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ರಾಜ್ಯ ಸರ್ಕಾರ ಕಳೆದ ಸಾಲಿನಲ್ಲಿ ನಿಗದಿ ಮಾಡಿದ್ದ ಕಬ್ಬಿನ ಹೆಚ್ಚುವರಿ ದರ ಟನ್‌ಗೆ 150 ರೂ ಕೊಡಿಸಬೇಕು. ಪ್ರಸಕ್ತ ಸಾಲಿನಲ್ಲಿ ಕಬ್ಬಿನ ಇಳುವರಿ ಕಡಿಮೆಯಾಗಿ ಉತ್ಪಾದನಾ ವೆಚ್ಚ ಹೆಚ್ಚಾಗಿದ್ದು, ಟನ್‌ಗೆ 3580 ರೂ ಖರ್ಚಾಗುತ್ತಿದೆ. ಹೀಗಾಗಿ ದರ ಪರಿಷ್ಕರಣೆ ಮಾಡಿ ನ್ಯಾಯಯುತ ದರ ನಿಗದಿ ಮಾಡಬೇಕು. ಕಬ್ಬಿನ ಇಳುವರಿ ಕಡಿಮೆಯಾಗಿ ಬೇರೆ ಜಿಲ್ಲೆಗಳಲ್ಲಿ ಸಕ್ಕರೆ ಕಾರ್ಖಾನೆಗಳು ಪೈಪೋಟಿಯಲ್ಲಿ ಕಬ್ಬು ಖರೀದಿಸುತ್ತಿವೆ. ಎಫ್‌ಆರ್‌ಪಿಗಿಂತ 300 ರೂ ಹೆಚ್ಚುವರಿ ದರ ನಿಗದಿ ಮಾಡಿವೆ. ಆದರೆ, ಬಣ್ಣಾರಿ ಸಕ್ಕರೆ ಕಾರ್ಖಾನೆ ಮಾತ್ರ ಹೆಚ್ಚು ದರ ನಿಗದಿ ಮಾಡದೆ ರೈತರ ಶೋಷಣೆ ಮುಂದುವರಿಸಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಆದೇಶ ಧಿಕ್ಕರಿಸಿರುವ ಕಾರ್ಖಾನೆ ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ರೈತರ ಹಣ ಕೊಡಿಸಬೇಕು ಎಂದು ಒತ್ತಾಯಿಸಿದರು.

ಬರಗಾಲದಿಂದ ನರಳುತ್ತಿರುವ ರೈತರಿಗೆ ವಿದ್ಯುತ್ ಕಣ್ಣಾಮುಚ್ಚಾಲೆ ಆಟ ಮತ್ತೊಂದು ಮರ್ಮಾಘಾತ ನೀಡಿದೆ. ಬರಗಾಲ, ವಿದ್ಯುತ್ ಅಭಾವದ ಕಾರಣ ನೀಡಿ ರೈತರಿಗೆ 5 ಗಂಟೆ ವಿದ್ಯುತ್ ನೀಡುತ್ತೇವೆ ಎಂದು ಹೇಳುತ್ತಿರುವ ಸರ್ಕಾರ ಕೈಗಾರಿಕೆಗಳಿಗೆ 24 ಗಂಟೆ ವಿದ್ಯುತ್ ಪೂರೈಕೆ ಮಾಡುವ ಇಬ್ಬಗೆ ನೀತಿ ಸರಿಯಲ್ಲ ಎಂದ ಅವರು, ಸರ್ಕಾರ ಕೂಡಲೇ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲಿ 10 ಗಂಟೆಗಳ ವಿದ್ಯುತ್ ನೀಡಿ ರೈತರ ಆತ್ಮಹತ್ಯೆ ತಪ್ಪಿಸಬೇಕು. ಬರ ಪರಿಹಾರ ನೀಡಿ, ದನಕರುಗಳಿಗೆ ಮೇವು, ಕುಡಿಯುವ ನೀರು ಒದಗಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಳ್ಳಿ ದೇವರಾಜ್, ಜಿಲ್ಲಾ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾ ಕಾರ್ಯದರ್ಶಿ ಕಿರಗಸೂರು ಶಂಕರ್, ಜಿಲ್ಲಾ ಮಹಿಳಾಧ್ಯಕ್ಷೆ ಕಮಲಮ್ಮ, ಜಿಲ್ಲಾ ಉಪಾಧ್ಯಕ್ಷ ರಾಜಣ್ಣ, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಅಧ್ಯಕ್ಷ ಹಾಡ್ಯರವಿ, ಲಕ್ಷ್ಮಿಪುರ ವೆಂಕಟೇಶ, ರಾಜಣ್ಣ ನೆಲಮಂಗಲ ರಾಜೇಶ್, ಜಗದೀಶ್, ನೀಲಕಂಠಯ್ಯ, ಬೈರಪ್ಪ, ಹಾಸನ ಮೀಸೆ ಮಂಜಣ್ಣ ಹಾಸನ ಜಿಲ್ಲೆಆಲೂರು ತೀರ್ಥ ಪ್ರಸಾದ್, ರವಿಕುಮಾರ್, ಮೂಕಳ್ಳಿ ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.


'ಅನಾವರಣ' ಚಿತ್ರದಲ್ಲಿ ಅರ್ಜುನ್ ಯೋಗಿ, ಸಾರಿಕಾ ರಾವ್



ಸದ್ದು ಮಾಡುತ್ತಿದೆ 'ಅನಾವರಣ'ದ ರೀ ದೇವರೇ ಹಾಡು...!

ಫ್ಯಾಮಿಲಿ ಡ್ರಾಮಾ ಜೊತೆಗೆ ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಅನಾವರಣ' ಚಿತ್ರವೀಗ ಹಾಡುಗಳಿಂದಲೇ ಸದ್ದು ಮಾಡುತ್ತಿದೆ. ನಮ್ಮ ಸಿನಿಮಾ ಬ್ಯಾನರ್ ಅಡಿ ಅದ್ವೈತ್ ಪ್ರಭಾಕರ್, ಆರ್. ರಾಮಚಂದ್ರ, ಸತ್ಯರಾಣಿ ಮತ್ತು ರಚನಾ ಬಿ.ಹೆಚ್. ನಿರ್ಮಾಣದ, ಹರೀಶ್‌ಕುಮಾರ್ ಹಾಗೂ ಮಂಜುನಾಥ್ ಪಿಳ್ಳಪ್ಪ ಅವರ ನಿರ್ದೇಶನದ, 'ಅನಾವರಣ' ಚಿತ್ರದ ಎರಡನೇ ಹಾಡು 'ರೀ ದೇವರೇ...' ಬಿಡುಗಡೆಯಾಗಿದೆ. ಗಂಡ-ಹೆಂಡತಿ ನಡುವಿನ ಸಂಭಾಷಣೆಗಳೇ ಈ ಹಾಡಿನ ಸಾಹಿತ್ಯವಾಗಿದೆ, ನಾಯಕ ಅರ್ಜುನ್ ಯೋಗಿ, ನಾಯಕಿ ಸಾರಿಕಾರಾವ್ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ನಟ ಅರ್ಜುನ್ ಯೋಗಿ ಕಿರುತೆರೆಯಲ್ಲಿ ಹೆಸರು ಮಾಡಿದರು. ತಮ್ಮ ನಟನೆಯ ಮೂಲಕ ಕಿರುತೆರೆ ಪ್ರಿಯರನ್ನು ರಂಜಿಸಿದ್ದಲ್ಲದೆ ಬೆಳ್ಳಿತೆರೆಯಲ್ಲೂ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ಈ ಚಿತ್ರದಲ್ಲಿ ಗೌರೀಶ್ ಅಕ್ಕಿ, ನಂದಗೋಪಾಲ್, ಹೊನ್ನವಳ್ಳಿ ಕೃಷ್ಣ, ರಥಸಪ್ತಮಿ ಅರವಿಂದ್ ಕಾಮಿಡಿ ಕಿಲಾಡಿ ಸೂರಜ್, ಸೂರ್ಯ, ಸಂತು, ವಾಣಿ, ರಾಜೇಶ್ವರಿ, ಕಮಲಾ, ಯುಕ್ತಾ, ಧರಣಿಕುಮಾರ್, ಸಿದ್ದಿವಿನಾಯಕ, ಗಿರೀಶ್ ಯು.ಬಿ, ಶಿವರಾಜ್, ರಂಗೋಲಿ ವಿಜಿ. ಬೇಬಿ ದೃತಿ ಮತ್ತು ಅಭಿ ಪ್ರಮುಖ ತಾರಾಬಳಗದಲ್ಲಿದ್ದಾರೆ. ಈ ಚಿತ್ರಕ್ಕೆ ವಿಶಾಲ್ ಸಿ.ಕೃಷ್ಣ ಅವರ ಸಂಗೀತ, ಬಿ.ಆರ್.ಹೇಮಂತ್‌ಕುಮಾರ್ ಅವರ ಹಿನ್ನೆಲೆ ಸಂಗೀತ, ನಂದಕುಮಾರ್ ಅವರ ಛಾಯಾಗ್ರಹಣ, ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ, ಮದನ್ ಹರಿಣಿ ಅವರ ನೃತ್ಯಸಂಯೋಜನೆ ಈ ಸಿನಿಮಾಕ್ಕಿದೆ. ಅನಾವರಣ ಸಿನಿಮಾ ಡಿಸೆಂಬರ್ 1ಕ್ಕೆ ರಾಜ್ಯಾದ್ಯಂತ ರಿಲೀಸ್ ಆಗಲಿದ್ದು, ವಿಜಯ್ ಸಿನಿಮಾಸ್ ಬಿಡುಗಡೆ ಮಾಡಲಿದ್ದಾರೆ.

ಗರಡಿಯಲ್ಲಿ ದರ್ಶನ್ ಕುಸ್ತಿಪಟು



'ಗರಡಿ' ಚಿತ್ರದಲ್ಲಿ ಯಶಸ್‌ಸೂರ್ಯ, ಸೋನಲ್

ಯೋಗರಾಜ್‌ಭಟ್ ನಿರ್ದೇಶನದ, ಮಾಜಿ ಸಚಿವ ಬಿಸಿ ಪಾಟೀಲರ ನಿರ್ಮಾಣದ 'ಗರಡಿ' ಚಿತ್ರ ಈ ವಾರ ತೆರೆ ಕಾಣುತ್ತಿದೆ. ಯಶಸ್‌ಸೂರ್ಯ, ಸೋನಲ್ ನಾಯಕ, ನಾಯಕಿಯಾಗಿ ನಟಿಸಿರುವ ಈ ಚಿತ್ರದಲ್ಲಿ ಗರಡಿಮನೆ ರಂಗಪ್ಪನಾಗಿ ಪಾಟೀಲರು ಕಾಣಿಸಿಕೊಂಡಿದ್ದಾರೆ. ಸೌಮ್ಯ ಫಿಲಂಸ್ ಹಾಗೂ ಕೌರವ ಪ್ರೊಡಕ್ಷನ್ ಹೌಸ್ ಮೂಲಕ ಶ್ರೀಮತಿ ವನಜಾ ಪಾಟೀಲ್ ಅವರು ಈ ಚಿತ್ರವನ್ನು ನಿರ್ಮಿಸಿದ್ದು, ಸೃಷ್ಟಿ ಪಾಟೀಲ್ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ನಾಯಕನ ಸಹೋದರನಾಗಿ ಚಾಲೆಂಜಿಂಗ್‌ಸ್ಟಾರ್ ದರ್ಶನ್ ಅತಿಥಿ ಪಾತ್ರ ನಿರ್ವಹಿಸಿದ್ದಾರೆ.

ಚಿತ್ರದ ಕುರಿತು ಮಾತನಾಡಿದ ಭಟ್ಟರು ಬಾದಾಮಿಯಿಂದ ಬೆಂಗಳೂರು, ದೇವನಹಳ್ಳಿವರೆಗೆ ಸಾಕಷ್ಟು ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಎಂಎಲ್‌ಎ ಬೆಳ್ಳಿಪ್ರಕಾಶ್ ಅವರು ನಾಯಕನ ತಂದೆ ಬಂಡೆ ಸೀನಪ್ಪನಾಗಿ ಬಣ್ಣ ಹಚ್ಚಿದ್ದಾರೆ. ಮೈಸೂರು, ಧಾರವಾಡದಲ್ಲಿ ನಡೆಯುವ ಕಥೆಯಿದಾಗಿದ್ದು, ಪಾಟೀಲರು ತಮ್ಮ ಹಿಂದಿನ ಕೌರವ, ನಿಷ್ಕರ್ಷ ಹೀಗೆ ಎಲ್ಲಾ ಚಿತ್ರಗಳನ್ನು ನೆನಪಿಸುತ್ತಾರೆ ಎಂದರು.

ನಂತರ ಮಾತನಾಡಿದ ಪಾಟೀಲರು, ನಮ್ಮ ಸಂಸ್ಥೆಯ 16ನೇ ಚಿತ್ರ. ವಿಶೇಷವಾಗಿ ನಮ್ಮ ಚಿತ್ರದ ಆಡಿಯೋ ರೈಟ್ಸ್ ಸರಿಗಮ ಕಂಪನಿಗೆ ಒಂದು ಕೋಟಿ ರೂ.ಗೆ ಸೇಲ್ ಆಗಿದೆ. ದರ್ಶನ್ ನಮ್ಮ ಜೊತೆ ಒಂದು ವಾರ ಕೆಲಸ ಮಾಡಿದ್ದಾರೆ. ಚಿತ್ರದಲ್ಲಿ ಅವರ ಎಂಟ್ರಿಯೇ ವಿಭಿನ್ನವಾಗಿದೆ. ಅವರು ಬರುವಾಗ ನೋಡುಗರ ಎದೆ ಝಲ್ಲೆನಿಸುತ್ತದೆ. ಸಿನಿಮಾ ನೋಡಿ ಹೊರಬರುವಾಗ ಯಾವುದೋ ಒಂದು ಹೊಸ ಲೋಕದಿಂದ ಹೊರ ಬಂದಂತೆ ಆಗುತ್ತದೆ ಎಂದು ಹೇಳಿದರು. ಗರಡಿ ಸಿನಿಮಾದಲ್ಲಿ ದರ್ಶನ್ ಅವರದು, ಹೀಗೆ ಬಂದು ಹಾಗೆ ಹೋಗೋ ಪಾತ್ರವಲ್ಲ. ತೆರೆಮೇಲೆ ಸುಮಾರು ಹದಿಮೂರಕ್ಕೂ ಹೆಚ್ಚು ನಿಮಿಷಗಳ ಕಾಲ ಅವರು ಒಬ್ಬ ಕುಸ್ತಿಪಟು ಆಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಉತ್ತರ ಕರ್ನಾಟಕ ಸೊಗಡಿನ ಹಾಡೊಂದಕ್ಕೆ ನಿಶ್ವಿಕಾನಾಯ್ಡು ಅವರು ಹೆಜ್ಜೆಹಾಕಿದ್ದಾರೆ.

ಟ್ರೈಲರ್‌ನಲ್ಲಿ 'ಅಥಿ ಐ ಲವ್ ಯು' ಕಥೆ...



'ಅಥಿ ಐ ಲವ್ ಯು' ಚಿತ್ರದಲ್ಲಿ ಲೋಕೇಂದ್ರ ಸೂರ್ಯ ಸಾತ್ವಿಕ(ಶ್ರಾವ್ಯರಾವ್)

ನಟ, ನಿರ್ದೇಶಕ ಲೋಕೇಂದ್ರ ಸೂರ್ಯ ಅವರ ನಿರ್ದೇಶನದ ವಿಭಿನ್ನ ಕಥಾಹಂದರ ಹೊಂದಿರುವ 'ಅಥಿ ಐ ಲವ್ ಯು' ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ರೆಡ್ ಅಂಡ್ ವೈಟ್ ಸೆವೆನ್‌ರಾಜ್ ಅವರ ನಿರ್ಮಾಣದ ಈ ಚಿತ್ರದಲ್ಲಿ ದಂಪತಿಯ ನಡುವೆ ನಡೆಯುವ ಕಥೆಯೊಂದನ್ನು ವಿಶೇಷವಾಗಿ ಹೇಳಲಾಗಿದೆ. ಚಿತ್ರ ಕುರಿತಂತೆ ಮಾತನಾಡಿದ ಅವರು ಸತಿಪತಿಯರ ಸಂಬಂಧದ ಕುರಿತಾದ ಕಂಟೆಂಟ್ ಈ ಚಿತ್ರದಲ್ಲಿದ್ದು, ಬಿಡುಗಡೆಯ ಸಮಯದಲ್ಲಿ ನೂತನ ಯೋಜನೆ ಹಾಕಿಕೊಂಡಿದ್ದೇನೆ. ಗಂಡ ಟಿಕೆಟ್ ತೆಗೆದುಕೊಂಡರೆ ಹೆಂಡತಿಗೆ ಟಿಕೆಟ್ ಉಚಿತ, ಹೆಂಡತಿ ಟಿಕೆಟ್ ತೆಗೆದುಕೊಂಡರೆ ಗಂಡನಿಗೆ ಉಚಿತ ಪ್ರವೇಶವಿರುತ್ತದೆ ಎಂದು ತಿಳಿಸಿದರು.

ನಿರ್ದೇಶಕ ಲೋಕೇಂದ್ರ ಸೂರ್ಯ ಮಾತನಾಡುತ್ತಾ ಅಥಿ ಹಾಗೂ ವಸಂತ್-ಎರಡು ಪಾತ್ರಗಳ ಸುತ್ತ ಒಂದೇ ದಿನದಲ್ಲಿ, ಒಂದೇ ಮನೆಯಲ್ಲಿ ನಡೆಯುವ ಕಥೆ ಇದರಲ್ಲಿದೆ. ಪ್ರತಿದಿನ ಬೆಳಗ್ಗೆ ಕೆಲಸಕ್ಕೆ ಹೋಗುವ ಗಂಡ ರಾತ್ರಿ ವಾಪಸ್ ಮನೆಗೆ ಬರುತ್ತಾನೆ. ಒಂದು ದಿನ ಆತ ಇದ್ದಕ್ಕಿದಂತೆ ಮಧ್ಯಾಹ್ನವೇ ಮನೆಗೆ ಬಂದಾಗ ಮನೆಯಲ್ಲಿ ಹೆಂಡತಿ ಏನು ಮಾಡುತ್ತಿರುತ್ತಾಳೆ, ಮುಂದೇನಾಯ್ತು ಎಂಬುದನ್ನೇ ಚಿತ್ರದಲ್ಲಿ ಹೇಳಿದ್ದೇವೆ. ದಂಪತಿ ಹಾಗೂ ಪ್ರೀತಿ ಮಾಡುತ್ತಿರುವವರೆಲ್ಲಾ ನೋಡಲೇಬೇಕಾದ ಚಿತ್ರವಿದು. ಈ ಮೂಲಕ ಸಮಾಜಕ್ಕೆ ಒಂದೊಳ್ಳೆ ಸಂದೇಶವನ್ನು ಕೊಡುವ ಪ್ರಯತ್ನ ಮಾಡಿದ್ದೇವೆ. ಚಿತ್ರದಲ್ಲಿ ನಾನೇ ನಾಯಕನಾಗಿ ಅಭಿನಯಿಸಿದ್ದೇನೆ. ಸಾತ್ವಿಕ(ಶ್ರಾವ್ಯರಾವ್) ಅವರು ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಎರಡೇ ಪಾತ್ರಗಳು ಮಾತ್ರ ನಿಮಗೆ ತೆರೆಯ ಮೇಲೆ ಕಾಣುವುದು. ಉಳಿದ ಪಾತ್ರಗಳು ಧ್ವನಿಯ ಮೂಲಕ ಚಿತ್ರಕ್ಕೆ ಜೀವ ತುಂಬಿದೆ. ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಬರೆದು ಸಂಕಲನ ಹಾಗೂ ಛಾಯಾಗ್ರಹಣದ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ. ಸದ್ಯದಲ್ಲೇ ತೆರೆಗೆ ಬರುತ್ತಿರುವ ನಮ್ಮ ಚಿತ್ರವನ್ನು ದಂಪತಿ ಬಂದು ನೋಡಿ ತಮ್ಮ ಅಭಿಪ್ರಾಯ ತಿಳಿಸಿ ಎಂದು ಹೇಳಿದರು. 11 ನಿಮಿಷಗಳ ಸಿಂಗಲ್‌ಶಾಟ್ ಈ ಚಿತ್ರದ ವಿಶೇಷವಾಗಿದ್ದು, ಇದರಲ್ಲಿ ನಾಯಕ ಲೋಕೇಂದ್ರ ಸೂರ್ಯ ಹಾಗೂ ನಾಯಕಿ ಶ್ರಾವ್ಯರಾವ್ ಅಭಿನಯಿಸಿದ್ದಾರೆ. ಅನಂತ ಆರ್ಯನ್ ಸಂಗೀತ ಸಂಯೋಜನೆ ಈ ಚಿತ್ರದ ಹಾಡುಗಳಿಗಿದೆ.

ಚಿತ್ರದ ಹೆಸರಾಯ್ತು ಇಂಪಾದ ಹಾಡಿನ ಸಾಲು 'ಯಾವ ಮೋಹನ ಮುರಳಿ ಕರೆಯಿತು'



ಜನಪ್ರಿಯ ಭಾವಗೀತೆ 'ಯಾವ ಮೋಹನ ಮುರಳಿ ಕರೆಯಿತೊ...' ಇದೀಗ ಸಿನಿಮಾ ಶೀರ್ಷಿಕೆಯಾಗಿದೆ. ಹೌದು, ಅಂಗವಿಕಲ ಬಾಲಕಿ ಹಾಗೂ ನಾಯಿಯೊಂದರ ನಡುವಿನ ಭಾವನಾತ್ಮಕ ಪಯಣದ ಕಥೆ ಹೇಳುವ 'ಯಾವ ಮೋಹನ ಮುರಳಿ ಕರೆಯಿತು...' ಚಿತ್ರದ ಶೀರ್ಷಿಕೆಗೀತೆ ಇತ್ತೀಚೆಗೆ ಬಿಡುಗಡೆಯಾಯಿತು. ಶರಣಪ್ಪ ಗೌರಮ್ಮ ನಿರ್ಮಾಣದ ಈ ಚಿತ್ರಕ್ಕೆ ವಿಶ್ವಾಸ್‌ಕೃಷ್ಣ ಆಕ್ಷನ್‌ಕಟ್ ಹೇಳಿದ್ದಾರೆ, ವಿ.ನಾಗೇಂದ್ರ ಪ್ರಸಾದ್ ರಚನೆಯ ಈ ಗೀತೆಗೆ ಹರಿಚರಣ್ ದನಿಯಾಗಿದ್ದಾರೆ. ಅನಿಲ್ ಸಿ.ಜೆ. ಸಂಗೀತ ಸಂಯೋಜಿಸಿದ್ದಾರೆ. ನಿರ್ಮಾಪಕ ಶರಣಪ್ಪ ಮಾತನಾಡುತ್ತಾ, ವಿಶ್ವಾಸ್ ಮಾಡಿಕೊಂಡಿದ್ದ ಕಥೆ ಇಷ್ಟವಾಗಿ ಸಿನಿಮಾ ನಿರ್ಮಾಣಕ್ಕೆ ಕೈಹಾಕಿದೆ. ಒಂದೇ ಹಂತದಲ್ಲಿ ಶೂಟಿಂಗ್ ಮುಗಿಸಿದೆವು. ಸದ್ಯ ಚಿತ್ರದ ರೀರೆಕಾರ್ಡಿಂಗ್ ನಡೆಯುತ್ತಿದೆ, ಜೀರೋದಿಂದ ಬಂದ ನಾನು ಈ ಹಂತಕ್ಕೆ ಬರಲು ಉಮಾಪತಿ ಅವರ ಸಹಕಾರವೇ ಕಾರಣ ಎಂದರು. ಅತಿಥಿಯಾಗಿದ್ದ ಉಮಾಪತಿ ಶ್ರೀನಿವಾಸಗೌಡ ಮಾತನಾಡಿ, ನಮ್ಮ ಬ್ರದರ್ ಶರಣಪ್ಪ ತುಂಬಾ ಪ್ರೀತಿಯಿಂದ ಈ ಚಿತ್ರ ಮಾಡಿದ್ದಾರೆ, ಆತ ಗೆಲ್ಲಬೇಕು, ಇಂದು ನಿರ್ಮಾಪಕ ಸೇಫ್ ಆಗೋದು ತುಂಬಾ ಕಷ್ಟ, ಇಂಥಾ ಪ್ರತಿಭೆಗಳು ಗೆಲ್ಲಬೇಕು ಎಂದರು.

ವಿ.ನಾಗೇಂದ್ರ ಪ್ರಸಾದ್ ಮಾತನಾಡಿ, ಶೀರ್ಷಿಕೆ ಕೇಳಿದಾಗಲೇ ಇದೊಂದು ಭಾವನಾತ್ಮಕ ಸಿನಿಮಾ ಅನಿಸಿತು. ಕಥೆಯಲ್ಲಿಯೇ ಹಾಡುಗಳು ಸೇರಿಕೊಂಡಿದ್ದು, ಹಾಡು ತೆಗೆದರೆ ಸಿನಿಮಾ ಪೂರ್ತಿಯಾಗಲ್ಲ. ಮನುಷ್ಯ ಮತ್ತು ಪ್ರಾಣಿಯ ನಡುವಿನ ಭಾವನಾತ್ಮಕ ಸಂಬಂಧದ ಕಥೆಯನ್ನು ತುಂಬಾ ಚೆನ್ನಾಗಿ ತಂದಿದ್ದಾರೆ, ಇಂತ ಸಿನಿಮಾ ಗೆಲ್ಲಬೇಕು ಎಂದರು.


ನಿರ್ದೇಶಕ ವಿಶ್ವಾಸ್‌ಕೃಷ್ಣ ಮಾತನಾಡಿ, ನಾಯಿ ಮತ್ತು ಅಂಗವಿಕಲ ಹುಡುಗಿಯ ಸುತ್ತ ನಡೆಯುವ ಭಾವನಾತ್ಮಕ ಕಥೆಯನ್ನು ಈ ಚಿತ್ರದ ಮೂಲಕ ಹೇಳಿದ್ದೇವೆ ಎಂದರು.

'ನಾ ಕೋಳಿಕ್ಕೆ ರಂಗ' ತಾಯಿ-ಮಗನ ಮನೋಜ್ಞ ಕಥೆ...



ನಾನು ಕೋಕೋ ಕೋಳಿಕ್ಕೆ ರಂಗ... ಬಹುಶಃ ಈ ಹಾಡನ್ನು ಕೇಳದವರೇ ಇಲ್ಲ. ಈಗ ಈ ಹಾಡಿನ ಮೊದಲ ಸಾಲೇ ಚಲನಚಿತ್ರವೊಂದರ ಶೀರ್ಷಿಕೆಯಾಗಿದೆ. ಮಾಸ್ಟರ್ ಆನಂದ್ ನಟಿಸಿರುವ 'ನಾ ಕೋಳಿಕ್ಕೆ ರಂಗ' ಚಿತ್ರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗಿದೆ, ಒಂದು ಕೋಳಿ ಹಾಗೂ ರಂಗನ ಸುತ್ತ ನಡೆಯುವ ಕಥೆ ಇಟ್ಟುಕೊಂಡು ಗೊರವಾಲೆ ಮಹೇಶ್ ಅವರು ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದಾರೆ. ಎಸ್.ಟಿ.ಸೋಮಶೇಖರ್ ಅವರು ಈ ಚಿತ್ರವನ್ನು ನಿರ್ಮಿಸಿದ್ದು, ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆಯಾಯಿತು. ಮಾಸ್ಟರ್ ಆನಂದ್ ಮಾತನಾಡುತ್ತಾ ಕೋಳಿ ರಂಗ ಮತ್ತು ಆತನ ಅಮ್ಮನ ವಾತ್ಸಲ್ಯದ ಸುತ್ತ ನಡೆಯುವ ಕಥೆಯಲ್ಲಿ ಹಿರಿಯ ನಟಿ ಭವ್ಯಾ ಅವರು ನನ್ನ ತಾಯಿ ಪಾತ್ರ ಮಾಡಿದ್ದಾರೆ. ಮೈಸೂರು ದಸರಾ ಮತ್ತು ಮಹಾರಾಜರ ಕುರಿತಾದ 'ಮರೆಯೋದುಂಟೆ ಮೈಸೂರ ದೊರೆಯಾ' ಹಾಡು ಈ ಚಿತ್ರದ ಹೈಲೈಟ್. ರಂಗನಿಗೆ ಕೋಳಿ ಮತ್ತು ಅಮ್ಮ ಎಂದರೆ ಇನ್ನಿಲ್ಲದ ಪ್ರೀತಿ, ಒಂದು ಸಮಯದಲ್ಲಿ ರಂಗನಿಗೆ ಈ ಎರಡರಲ್ಲಿ ಯಾವುದು ಮುಖ್ಯವಾಗುತ್ತೆ ಅನ್ನೋ ಸಂದಿಗ್ಧ ಎದುರಾಗುತ್ತೆ. ಆಗ ಆತ ಯಾವ ನಿರ್ಧಾರ ತಗೋತಾನೆ ಅನ್ನೋದೇ ಕಥೆ. ನಿರ್ಮಾಪಕರ ಮಗಳು ರಾಜೇಶ್ವರಿ ನಾಯಕಿಯಾಗಿ ನಟಿಸಿದ್ದಾರೆ. ಹಳ್ಳಿಯ ಪ್ರಭಾವಿ ವ್ಯಕ್ತಿಯ ಮೇಲೆ ನನಗೆ ದ್ವೇಷ ಬರಲು ನಾಯಕಿಯೇ ಕಾರಣ. ಅಲ್ಲದೆ ನಾನು ಊರು ಬಿಡೋಕೂ ನಾಯಕಿಯೇ ಕಾರಣವಾಗುತ್ತಾಳೆ. ಇದೇ ಮೊದಲ ಬಾರಿಗೆ ಅಪ್ಪು ಅವರು ನನ್ನ ಸಿನಿಮಾದ ಇಂಟ್ರಡಕ್ಷನ್ ಸಾಂಗ್ ಹಾಡಿದ್ದಾರೆ ಎಂದರು. ನಿರ್ದೇಶಕ ಗೊರವಾಲೆ ಮಹೇಶ್ ಮಾತನಾಡಿ, ಒಂದೊಳ್ಳೆಯ ವಿಷಯವನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಮಾಸ್ಟರ್ ಆನಂದ್, ಭವ್ಯಾ, ತಾಯಿ ಮಗನ ಪಾತ್ರದಲ್ಲಿ ಭಾವುಕತೆ ಹೆಚ್ಚಿಸುತ್ತಾರೆ. ಇಡೀ ಚಿತ್ರ ನಗಿಸುತ್ತಲೇ ಭಾವುಕತೆಗೆ ದೂಡುತ್ತದೆ ಎಂದರು. ಮಂಡ್ಯ ಜಿಲ್ಲೆಯ ಸಂತೆ ಕಸಲಗೆರೆ ಎಂಬ ಗ್ರಾಮದಲ್ಲೇ ಚಿತ್ರದ ಶೇ.90ರಷ್ಟು ಭಾಗದ ಚಿತ್ರೀಕರಣ ನಡೆಸಲಾಗಿದೆ. ನಿರ್ಮಾಪಕ ಎಸ್.ಟಿ. ಸೋಮಶೇಖರ್ ಮಾತನಾಡಿ, ಕೋಳಿ ಮತ್ತು ರಂಗನ ನಡುವಿನ ಭಾವನಾತ್ಮಕ ಕಥೆ ಇದರಲ್ಲಿದೆ. ನನ್ನ ಮಗಳೇ ಚಿತ್ರದ ನಾಯಕಿಯಾಗಿದ್ದಾರೆ ಎಂದರು. ನಾಯಕಿ ರಾಜೇಶ್ವರಿ, ಸಂಕಲನಕಾರ ವಿಶ್ವ ಚಿತ್ರದ ಕುರಿತು ಮಾತನಾಡಿದರು. ನ.10ರಂದು ಈ ಚಿತ್ರ ರಾಜ್ಯಾದ್ಯಂತ ತೆರೆಕಾಣಲಿದ್ದು, ರಾಜು ಎಮ್ಮಿಗನೂರು ಅವರ ಸಂಗೀತ, ಧನಪಾಲ್ ಮತ್ತು ಬೆಟ್ಟೇಗೌಡ ಅವರ ಛಾಯಾಗ್ರಹಣವಿದೆ.

ಸಿನಿಪದಬಂಧ-499



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______



ವಿಜೇತರು: ಎಸ್.ಇಂದುಮತಿ ಶ್ರೀಕಾಂತ್, ಅಂಚೆ ಕಛೇರಿ ರಸ್ತೆ, ಬೆಟ್ಟದಪುರ, ಮೈಸೂರು ಜಿಲ್ಲೆ-571102



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 498ರ ಉತ್ತರ

ಬ	ಯ	ಸ	ದೇ	ಬಂ	ದ	ಭಾ	ಗ್ಯ	■	■	■
ಲ	■	ವ್ಯ	■	ಧು	■	ರಂ	■	ಸಿ	■	■
ಗಾ	■	ಸಾ	ಹೇ	ಬ	■	■	■	ತಾ	■	ತ
ಲಿ	■	ಚಿ	■	ಳ	■	ದಾ	■	ರಾ	ಜೀ	ವ
ಟ್ಟು	■	■	ರಂ	ಗ	ಮ	ಹ	ಲ್	■	■	ರು
ಒ	ಲ	ವೇ	■	■	ಕ	■	■	ಸಂ	ಗ	ಮ
ಳ	■	■	ಕಂ	ಬಾ	ಲ	ಹ	ಳ್ಳಿ	■	■	ನೆ
ಗೆ	ಳೆ	ಯ	■	ಲು	■	ಯ	■	ತ	■	ಉ
ಬಾ	■	ಮು	■	■	■	ವ	ತ್ಸ	ಲ	■	ಡು
■	■	ನಾ	■	ಫ	■	ದ	■	ಕಾ	■	ಗೊ
■	■	■	ಒ	ಲ	ವಿ	ನ	ಉ	ಡು	ಗೊ	ರೆ

ಎಡದಿಂದ ಬಲಕ್ಕೆ

1. ಲಕ್ಷ್ಮೀ ನಿರ್ದೇಶನದಿ ವಿಷ್ಣುವಿನ ಪಡೆ! 5
4. ವಿಷ್ಣುವರ್ಧನ್-ಅಂಬಿಕಾ ಅಭಿನಯದಲ್ಲಿ ಉರಿದ ಹಣತೆ 5
6. ರಾಜಣ್ಣ ಕಂಡ ದ್ವಿಸ್ವಪ್ನ! 6
7. ಪಲ್ಲವಿ ಅನುಪಲ್ಲವಿಯ ನಿರ್ದೇಶಕನಿಗೆ ಮೌಲ್ಯವಿದೆ 4
8. ಅನಂತ್‌ನಾಗ್-ಆರತಿಯ ಶ್ವೇತ ವರ್ಣದ ಪುಷ್ಪ 5
12. "ನಾ ಬಯಸದ ಭಾಗ್ಯ ನನದಾಯಿತು...." ಗೀತೆಯ ಚಿತ್ರ 5
13. ರಮೇಶ್-ಅನುಪ್ರಭಾಕರ್‌ನ ಶಾಖ ದ್ವಿರುಕ್ತಿಗೊಂಡಿದೆ 4
15. ಗಂಗಾಧರ್-ಭಾರತಿ ಅಭಿನಯದ ಬಾಳಿನ ಉಯ್ಯಾಲೆ 6
17. ಬ್ರಿಟಿಷರ ತೆರಿಗೆ ನೀತಿಯ ವಿರುದ್ಧ ದಂಗೆ ಎದ್ದ ಕಥೆಯಿರುವ ಶಿವಣ್ಣನ ಚಿತ್ರ 5
18. ಗೆಲುವಿನ ಜತೆ ಯಾತ್ರಾಸ್ಥಳ ಕಂಡ ನಟ 5

ಮೇಲಿನಿಂದ ಕೆಳಕ್ಕೆ

1. ಎಷ್ಟುಬಿ ನಿರ್ಧರಿಸಲಾಗದೆ ಗೊಂದಲದಲ್ಲಿರುವ ವ್ಯಕ್ತಿ! 7
2. ಸಿ.ಪಿ.ಯೋಗೇಶ್ವರ್ "ಯೋಧ" 3
3. ಪ್ರಕಾಶ್‌ರೈ ಆಜಾನಾಕ್ಕಾಗಿ ಬಂದವನು 3
5. ಅಂಬಿ - ಸುಮನ್ ರಂಗನಾಥ್ ಅಭಿನಯದಲ್ಲಿ ಬಂದ ಸರದಾರ 6
7. ಲೈಲಾಳ ಜೊತೆ ಬಂದವನು 2
9. ಮೋಡಗಳ ಡಿಕ್ಕಿಯ ಶಬ್ದದೊಂದಿಗೆ ಬೆಳಕಿನ ಪ್ರವಾಹಕ್ಕೆ ರಾಮಕೃಷ್ಣ ಅಭಿನಯವಿದೆ 6
10. ರಾಜ್ ಕುಮಾರ್ ಚಾಲುಕ್ಯರ ದೊರೆ 7
11. ಹಂಸಲೇಖ ಕಟ್ಟಿದ ಸಂಗೀತ ಶಾಲೆ 2
14. ನನ್ನ ಪ್ರತಿಜ್ಞೆ ಚಿತ್ರದ ನಾಯಕಿ ಪಂಚಕನ್ಯೆಯ ಪ್ರಮುಖಳಂತಿದ್ದಾಳೆ 3
16. ಜೋಡಿ ಜಡೆಯಾಕೆ ಇಲ್ಲಿ ತಲೆಕೆಳಗು 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನಂಜನಗೂಡು, ಕೆ.ಆರ್.ನಗರದಲ್ಲಿ ಫುಟ್‌ಪಾತ್ ತೆರವು

ಒತ್ತುವರಿ ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು



ನಂಜನಗೂಡು/ಕೆ.ಆರ್.ನಗರ, ನ.9– ನಗರಸಭೆ ಅಧಿಕಾರಿಗಳು ಗುರುವಾರ ಬೆಳ್ಳಂಬೆಳಗ್ಗೆಯೇ ನಗರದಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಬಜಾರ್ ರಸ್ತೆಯ ನೆಹರು ವೃತ್ತದಿಂದ ಶ್ರೀಕಂಠೇಶ್ವರ ದೇವಾಲಯದವರೆಗೂ ಬೀದಿಬದಿ ವ್ಯಾಪಾರಿಗಳು ಪಾದಚಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದ ಪರಿಣಾಮ ದಿನನಿತ್ಯ ಸಂಚಾರ ದಟ್ಟಣೆ ಹೆಚ್ಚಾಗಿ ಸಾರ್ವಜನಿಕರು ಕಿರಿಕಿರಿ ಅನುಭವಿಸುವಂತಾಗಿತ್ತು. ಜತೆಗೆ ಕೆಲ ವ್ಯಾಪಾರಸ್ಥರ ದಬ್ಬಾಳಿಯಿಂದಾಗಿ ಹೈರಾಣಾಗಿದ್ದರು. ಈ ಸಂಬಂಧ ಸಾರ್ವಜನಿಕರು ಜಿಲ್ಲಾಧಿಕಾರಿಗೆ ಫುಟ್‌ಪಾತ್ ತೆರವು ಮಾಡುವಂತೆ ಮನವಿ ಸಲ್ಲಿಸಿ ಒತ್ತಾಯಿಸಿದ್ದರು. ಜಿಲ್ಲಾಧಿಕಾರಿ ಆದೇಶದ ಮೇರೆಗೆ ಕಾರ್ಯಾಚರಣೆಗೆ ಇಳಿದ ನಗರಸಭೆ ಅಧಿಕಾರಿಗಳು ಫುಟ್‌ಪಾತ್ ತೆರವುಗೊಳಿಸಿ, ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.

ನಗರಸಭೆ ಆಯುಕ್ತ ನಂಜುಂಡಸ್ವಾಮಿ ಮಾತನಾಡಿ, ಬಜಾರ್ ರಸ್ತೆಯ ಅಂಗಡಿ ಮಾಲೀಕರು, ಬೀದಿಬದಿ ವ್ಯಾಪಾರಸ್ಥರು ಪಾದಚಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರು ಕೇಳಿ ಬಂದಿತ್ತು. ನಾವು ಕೂಡ ಮಾನವೀಯತೆಯಿಂದ 1 ತಿಂಗಳ ಗಡುವು ಕೊಟ್ಟು ತೆರವುಗೊಳಿಸುವಂತೆ ಮನವಿ ಮಾಡಲಾಗಿತ್ತು. ಆದರೂ ತೆರವುಗೊಳಿಸದೆ ಸಂಚಾರಕ್ಕೆ ತೊಂದರೆಯುಂಟು ಮಾಡುತ್ತಾ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಆದ್ದರಿಂದ ಅತಿಕ್ರಮಿಸಿಕೊಂಡಿದ್ದ ಪಾದಚಾರಿ ರಸ್ತೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಶುಕ್ರವಾರ ಮತ್ತು ಶನಿವಾರವೂ ತೆರವು ಕಾರ್ಯಾಚರಣೆ ನಡೆಯಲಿದ್ದು, ಆರ್.ಪಿ. ರಸ್ತೆ ಮತ್ತು ಎಂಜಿಎಸ್ ರಸ್ತೆಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು ಎಂದರು. ಇದೇ ವೇಳೆ ನಗರಸಭೆ ಅಧಿಕಾರಿಗಳಾದ ಮೈತ್ರಾವತಿ, ವೆಂಕಟೇಶ್, ರಮೇಶ್ ಮತ್ತು ಪೌರಕಾರ್ಮಿಕರು ಇದ್ದರು.

15 ದಿನ ಪ್ರತ್ಯೇಕ ಎಡ, ಬಲಗಡೆ ವ್ಯಾಪಾರಕ್ಕೆ ಅನುಮತಿ



ಕೆ.ಆರ್.ನಗರ ಪಟ್ಟಣದ ಬಜಾರ್ ರಸ್ತೆಯ ಬೀದಿಬದಿ ವ್ಯಾಪಾರಿಗಳನ್ನು ಬುಧವಾರ ಪುರಸಭೆ ಅಧಿಕಾರಿಗಳು ತೆರವುಗೊಳಿಸಿದರು.

ಬಜಾರ್ ರಸ್ತೆಯ ಎರಡು ಬದಿಯಲ್ಲಿ ಅಂಗಡಿಗಳನ್ನು ಹಾಕಿಕೊಂಡು ವ್ಯಾಪಾರ ನಡೆಸುವುದರಿಂದ ಸಂಚರಿಸಲು ತೊಂದರೆಯಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಮೇರೆಗೆ ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ ನೇತೃತ್ವದಲ್ಲಿ ರಸ್ತೆಯ ಒಂದು ಕಡೆ ತೆರವುಗೊಳಿಸುವ ಮೂಲಕ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಬೆಳಗ್ಗೆಯಿಂದ ಸಂಜೆವರೆಗೆ ಈ ರಸ್ತೆ ಉದ್ದಕ್ಕೂ ಜನಜಂಗುಳಿ ತುಂಬಿ ತುಳುಕಾಡುತ್ತಿತ್ತು. ಇದರಿಂದ ಸಂಚರಿಸಲು ತೊಂದರೆಯಾಗುತ್ತಿದೆ ಎಂಬ ನಾಗರಿಕರ ದೂರಿನ ಮೇರೆಗೆ 15 ದಿನ ಎಡಗಡೆ, ಮತ್ತೆ 15 ದಿನ ಬಲಗಡೆ ಎಂಬ ನಿಯಮದಂತೆ ವ್ಯಾಪಾರ ನಡೆಸಲು ಅನುಕೂಲ ಕಲ್ಪಿಸಲಾಯಿತು.

ಇದೇ ವೇಳೆ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಡಾ. ಜಯಣ್ಣ, ಬೀದಿಬದಿ ವ್ಯಾಪಾರಿಗಳು ಎರಡು ರಸ್ತೆಯ ಕಡೆಯಲ್ಲಿ ವ್ಯಾಪಾರ ಮಾಡುವುದರಿಂದ ಶಾಲಾ–ಕಾಲೇಜಿನ ವಾಹನಗಳು, ಪಟ್ಟಣದ ನಿವಾಸಿಗಳು, ಇತರೆ ವಾಹನ ಸವಾರರು ಮತ್ತು ಅಂಗಡಿಗಳ ವರ್ತಕರು ರಸ್ತೆಯಲ್ಲಿ ಸಂಚರಿಸಲು ತೊಂದರೆಯಾಗುತ್ತದೆ. ಇದರಿಂದ ಟ್ರಾಫಿಕ್ ಜಾಮ್ ಆಗುತ್ತಿತ್ತು. ಇದನ್ನು ಸರಿಪಡಿಸುವ ಉದ್ದೇಶದಿಂದ ಪ್ರತಿ 15 ದಿನಕ್ಕೊಮ್ಮೆ ಎಡ ಮತ್ತು ಬಲ ಎಂದು ವಿಂಗಡಿಸಿ ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು. ಇದೇ ವೇಳೆ ಪುರಸಭೆ ಸದಸ್ಯ ತೋಂಟದಾರ್ಯ, ಆರೋಗ್ಯಾಧಿಕಾರಿ ಲೋಕೇಶ್, ಕಂದಾಯಾಧಿಕಾರಿ ರಮೇಶ್, ಸಿಬ್ಬಂದಿ ಹಾಜರಿದ್ದರು.

ಆರೋಗ್ಯ ವಿಚಾರಿಸಿದ ಡಾ.ಬಿ.ಪ್ರದೀಪ್



ತಿ.ನರಸೀಪುರ, ನ.9–ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ತಗುಲಿ ಸುಟ್ಟ ಗಾಯಗಳಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮುಖ್ಯ ಶಿಕ್ಷಕ ಹಾಗೂ ವಿದ್ಯಾರ್ಥಿಯನ್ನು ಭೇಟಿ ಮಾಡಿದ ಜಿಲ್ಲಾ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ಆರೋಗ್ಯ ವಿಚಾರಿಸಿದರು.

ತಾಲೂಕಿನ ನಿಲಸೋಗೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಡುಗೆ ಅನಿಲ ಸೋರಿಕೆ ಉಂಟಾಗಿ ಬೆಂಕಿ ಅವಘಡ ಸಂಭವಿಸಿ ಮೂವರು ವಿದ್ಯಾರ್ಥಿಗಳು, ಮುಖ್ಯ ಶಿಕ್ಷಕ ಹಾಗೂ ಸಹಶಿಕ್ಷಕಿಗೆ ಸುಟ್ಟ ಗಾಯಗಳಾಗಿದ್ದವು. ಇದರಿಂದ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಡಾ.ಬಿ.ಪ್ರದೀಪ್ ಗುರುವಾರ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖವಾಗುವಂತೆ ಹಾರೈಸಿದರು. ಮುಖ್ಯ ಶಿಕ್ಷಕ ಮಹದೇವಯ್ಯ, ಸಿಆರ್‌ಪಿ ನಾಗೇಶ್ ಇತರರು ಇದ್ದರು.

ಬೈಕ್, ಜೀಪ್ ಮುಖಾಮುಖಿ ಡಿಕ್ಕಿ: ಇಬ್ಬರು ಸಾವು

● ಅತ್ತಿಕುಪ್ಪೆ ಗ್ರಾಮದ ಬಳಿ ಭೀಕರ ಅಪಘಾತ ● ಗ್ರಾಮಸ್ಥರ ಪ್ರತಿಭಟನೆ



ನಾಗರಾಜ್ ಶಿವರಾಜ್

ಹುಣಸೂರು, ನ.9– ಬೈಕ್ ಮತ್ತು ಜೀಪ್ ನಡುವೆ ಮುಖಾಮುಖಿ ಡಿಕ್ಕಿಯಾಗಿ ಬೈಕ್ ಸವಾರರಿಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ರಾಷ್ಟ್ರೀಯ ಹೆದ್ದಾರಿಯ ಅತ್ತಿಕುಪ್ಪೆ ಗ್ರಾಮದ ಬಳಿ ಗುರುವಾರ ಸಂಜೆ ಸಂಭವಿಸಿದೆ.

ಅತ್ತಿಕುಪ್ಪೆ ಗ್ರಾಮದ ಸಿದ್ದಯ್ಯನವರ ಮಗ ಶಿವರಾಜ್(38) ಹಾಗೂ ಹುಚ್ಚಯ್ಯನವರ ಮಗ ನಾಗರಾಜ್(40) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಶಿವರಾಜ್ ಮತ್ತು ನಾಗರಾಜ್ ಬೈಕ್‌ನಲ್ಲಿ (ಕೆಎ–13, ಇಎನ್–9184) ಇಂದು ಸಂಜೆ 4 ಗಂಟೆ ಸುಮಾರಿನಲ್ಲಿ ಹುಣಸೂರು ಕಡೆಯಿಂದ ಸ್ವಗ್ರಾಮ ಅತ್ತಿಕುಪ್ಪೆಗೆ ತೆರಳುತ್ತಿದ್ದ ವೇಳೆ ಪಿರಿಯಾಪಟ್ಟಣದಿಂದ ಮೈಸೂರಿಗೆ ಬರುತ್ತಿದ್ದ ಜೀಪ್ (ಎಪಿ–07, ಎಎಂ–3817) ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರರಿಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತ ನಂತರ ಜೀಪ್ ಬಿಟ್ಟು ಅದರ ಚಾಲಕ ಪರಾರಿಯಾಗಿದ್ದಾನೆ.

ಗ್ರಾಮಸ್ಥರ ಪ್ರತಿಭಟನೆ: ಅಪಘಾತ ಮಾಡಿ ಎರಡು ಜೀವಗಳನ್ನು ಬಲಿ ಪಡೆದ ಜೀಪ್ ಚಾಲಕನನ್ನು ಸ್ಥಳಕ್ಕೆ ಕರೆಯಿಸುವವರೆಗೂ ಶವಗಳನ್ನು ತೆಗೆಯಲು ಬಿಡುವುದಿಲ್ಲ ಎಂದು ಅತ್ತಿಕುಪ್ಪೆ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಘಟನಾ ಸ್ಥಳಕ್ಕೆ ಆಗಮಿಸಿದ ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧರ್ಮೇಂದ್ರ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವಿಕುಮಾರ್, ಸಬ್ ಇನ್ಸ್‌ಪೆಕ್ಟರ್ ರಾಮಚಂದ್ರನಾಯಕ ಅವರು, ಆರೋಪಿಗಳನ್ನು ಶೀಘ್ರ ಪತ್ತೆ ಮಾಡಿ ಬಂಧಿಸಿ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿ ಮನವೊಲಿಸಿದರು. ನಂತರ ಗ್ರಾಮಸ್ಥರು ಪ್ರತಿಭಟನೆ ಕೈ ಬಿಟ್ಟು ವಾಹನ ಸಂಚಾರಕ್ಕೆ ಅನುವುಮಾಡಿಕೊಟ್ಟರು. ಘಟನಾ ಸ್ಥಳದಲ್ಲಿ ಮೃತರ ಕುಟುಂಬದವರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಗ್ರಾಮಾಂತರ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡರು. ನಂತರ ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಶವಗಳನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಸರಗೂರಿನ ನೂತನ ತಹಶೀಲ್ದಾರ್ ರುಕಿಯಾ ಬೇಗಂ ಅಧಿಕಾರ ಸ್ವೀಕಾರ



ಸರಗೂರು: ತಾಲೂಕಿನ ನೂತನ ತಹಶೀಲ್ದಾರ್ ರುಕಿಯಾ ಬೇಗಂ ಅವರು ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಹಿಂದಿನ ತಹಶೀಲ್ದಾರ್ ನಾಗಡ ದಿನ್ನಿ ಶಂಶಾಲಂ ಅವರು ವರ್ಗಾವಣೆಗೊಂಡ ಬಳಿಕ ಗ್ರೇಟ್–2 ತಹಶೀಲ್ದಾರ್ ಪರಶಿವಮೂರ್ತಿ ಪ್ರಭಾರ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ರೈಡ್ (ತ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	
ಜಪಾನ್(ತ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟಗರುಪಲ್ಯ (ಕ): ಬೆ.10.45ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, ಲಿಯೋ (ತ): ಸಂ.4ಕ್ಕೆ, ಘೋಸ್ಟ್ (ಕ): ರಾ.9.50ಕ್ಕೆ.
ಸ್ಕ್ರೀನ್ 2	ಗರುಡ ಪುರಾಣ (ಕ): ಬೆ.10.50ಕ್ಕೆ, ಲಿಯೋ (ತ): ಮ.1.35ಕ್ಕೆ, ಯುಟಿ 69 (ಹಿಂ): ಸಂ.4.45ಕ್ಕೆ, ಕೀಡಾ ಕೋಲ (ತೆ): ರಾ.7.15ಕ್ಕೆ, ರಾ.9.45ಕ್ಕೆ
ಸ್ಕ್ರೀನ್ 3	12th ಫೇಲ್ (ಹಿಂ): ಬೆ.10.45ಕ್ಕೆ, ರಾ.7ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.45ಕ್ಕೆ, ಟಗರುಪಲ್ಯ (ಕ): ಸಂ.4.15ಕ್ಕೆ, ಗರುಡನ್ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಟಗರು ಪಲ್ಯ (ಕ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಘೋಸ್ಟ್ (ಕ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಟಗರುಪಲ್ಯ (ಕ): ರಾ.10.05ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಲಿಯೋ (ತ): ಮ.12.55ಕ್ಕೆ.
ಸ್ಕ್ರೀನ್ 3	ಕೀಡಾ ಕೋಲ (ತೆ): ಬೆ.9.55ಕ್ಕೆ, ಮ.3.25ಕ್ಕೆ, ಟಗರು ಪಲ್ಯ (ಕ): ಮ.12.35ಕ್ಕೆ, ಲಿಯೋ (ಕ): ಸಂ.6.05ಕ್ಕೆ, ಲಿಯೋ (ತ): ರಾ.9.30ಕ್ಕೆ.
ಸ್ಕ್ರೀನ್ 4	ಲಿಯೋ (ತ): ಬೆ.10.30ಕ್ಕೆ, ಟಗರುಪಲ್ಯ (ಕ): ಮ.1.55ಕ್ಕೆ, ಟಿ.ಆರ್.ಪಿ. ರಾಮ (ಕ): ಸಂ.4.45ಕ್ಕೆ, ಗರುಡನ್ (ಮ): ರಾ.7.30ಕ್ಕೆ, ಕೀಡಾ ಕೋಲ(ತೆ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸೈಕಲ್ ಸವಾರಿ (ಕ): ಬೆ.10.30ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.30ಕ್ಕೆ, ಗರುಡ ಪುರಾಣ (ಕ): ಸಂ.4ಕ್ಕೆ, ಬಸ್ರಕಟ್ಟೆ (ಕ): ಸಂ.6.45ಕ್ಕೆ, ಲಿಯೋ (ತ): ರಾ.9.15ಕ್ಕೆ.
ಸ್ಕ್ರೀನ್ 2	ಟಗರುಪಲ್ಯ (ಕ): ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 3	ಲಿಯೋ (ತ): ಮ.1.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, ಲಿಯೋ (ಕ): ಮ.1.05ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ)**: ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಂಪಲಾಪುರದಲ್ಲಿ ಮತದಾರರ ಪಟ್ಟಿ ಜಾಗೃತಿ ಜಾಥಾ



ಕಂಪಲಾಪುರ: ಮುಂಬರುವ ಲೋಕಸಭೆ ಚುನಾವಣೆ ಅಂಗವಾಗಿ ಮತದಾರರ ಪಟ್ಟಿ ಪರಿಷ್ಕರಣೆ, ಹೆಸರು ನೋಂದಣಿ ಹಾಗೂ ವಿಹೆಚ್‌ಎ ಆ್ಯಪ್ ಬಳಕೆ ಬಗ್ಗೆ ಜಾಗೃತಿ ಮೂಡಿಸಲು ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಗ್ರಾಮದಲ್ಲಿ ಗುರುವಾರ ಜಾಥಾ ನಡೆಸಲಾಯಿತು.

ಸರ್ಕಾರಿ ಪ್ರೌಢಶಾಲೆ ಮುಂಭಾಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ಸುನಿಲ್ ಕುಮಾರ್ ಜಾಥಾಗೆ ಚಾಲನೆ ನೀಡಿದರು. ಗ್ರಾಪಂ ಅಧ್ಯಕ್ಷೆ ಜಾನಕಿ, ಉಪಾಧ್ಯಕ್ಷೆ ಸುಮಾ, ಸದಸ್ಯೆ ರಮ್ಯ, ಪ್ರತಿಭಾ, ನಾಗರಾಜ್, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರಾ, ಮುಖ್ಯಶಿಕ್ಷಕ ಮಹದೇವಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯ ರಾಜೇಶ್, ಸತೀಶ್, ನಿವೃತ್ತ ಶಿಕ್ಷಕಿ ಸರಸ, ಜಯಶ್ರೀ, ಮಹಿಳಾ ಸಂಘದ ಸದಸ್ಯರು, ಶಿಕ್ಷಕರು, ಗ್ರಾಪಂ ಸಿಬ್ಬಂದಿ ಹಾಜರಿದ್ದರು.



ಹುಣಸೂರಿನ ರೋಟರಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಬೆಂಗಳೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ವೇದಾಂತ ಮಹಾಸಂಸ್ಥಾನ ಮಠಾಧ್ಯಕ್ಷ ಶ್ರೀ ಅಭಯಾನಂದ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ರೋಟರಿ ಕ್ಲಬ್‌ನ ಅಧ್ಯಕ್ಷ ಚೆನ್ನಕೇಶವ, ಕಾರ್ಯದರ್ಶಿ ಕೆ.ಪಿ.ಪ್ರಸನ್ನ, ಖಜಾಂಚಿ ಆನಂದ್, ರೋಟರಿ ಇನ್ನರ್ ವ್ಹೀಲ್ ಅಧ್ಯಕ್ಷೆ ಸ್ಮಿತಾ, ಡಾ.ಶಿವಕುಮಾರ್, ಮುಖ್ಯ ಶಿಕ್ಷಕಿ ದೀಪಾ, ಶಿಕ್ಷಕರು ಇದ್ದರು.

ಕೆ. ಅಶ್ವಿನಿಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಪ್ರತಿಭಾ ಮುದಲಿಯಾರ್ ಅವರ ಮಾರ್ಗದರ್ಶನದಲ್ಲಿ ಕೆ. ಅಶ್ವಿನಿ ಅವರು ಹಿಂದಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಾಸ್ತಿಗುಡಿ ಪುನರ್ವಸತಿ ಕೇಂದ್ರದ ಬಳಿ ಮತ್ತೊಂದು ಪುಂಡಾನೆ ಸೆರೆ



ಹೆಚ್.ಡಿ.ಕೋಟೆ, ನ.9–ತಾಲೂಕಿನ ನಾಗರಹೊಳೆ ಅಭಯಾರಣ್ಯದ ಮಾಸ್ತಿಗುಡಿ ಪುನರ್ವಸತಿ ಕೇಂದ್ರದ ಸಮೀಪ ಗುರುವಾರ ಬೆಳಗ್ಗೆ ಮತ್ತೊಂದು ಪುಂಡಾನೆಯನ್ನು ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಯಿತು.

ಕಳೆದ 10 ದಿನಗಳ ಹಿಂದೆ ಮಾಸ್ತಿಗುಡಿ ಪುನರ್ವಸತಿ ಕೇಂದ್ರದಲ್ಲಿ ಆನೆ ದಾಳಿಗೆ ಆದಿವಾಸಿಯೊಬ್ಬರು ಮೃತಪಟ್ಟ ಹಿನ್ನೆಲೆ ಆದಿವಾಸಿಗಳು ಆನೆಯನ್ನ ಸೆರೆ ಹಿಡಿಯುವಂತೆ ಪಟ್ಟುಹಿಡಿದಿದ್ದರು. ಇದರಿಂದ ಎಚ್ಚೆತ್ತ ಅರಣ್ಯ ಇಲಾಖೆ ಆನೆ ಸೆರೆ ಕಾರ್ಯಾಚರಣೆಯನ್ನು ಆರಂಭಿಸಿದ್ದರು. ದಸರಾ ಆನೆಗಳಾದ ಅಶ್ವತ್ಥಾಮ, ಮಹಾರಾಷ್ಟ್ರ ಭೀಮ, ಕರ್ನಾಟಕ ಭೀಮ, ಹರ್ಷ, ಅಭಿಮನ್ಯು, ಮಹೇಂದ್ರ ಸಹಾಯದಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ಚಿಕ್ಕನರಗುಂದ ಮಾರ್ಗದರ್ಶನದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಡಿ.ಎಸ್.ದಯಾನಂದ ನೇತೃತ್ವದಲ್ಲಿ 40–45 ವರ್ಷದ ಗಂಡಾನೆಯನ್ನು ಸೆರೆ ಹಿಡಿಯಲಾಯಿತು. ಬಳಿಕ ಆನೆಗೆ ರೇಡಿಯೋ ಕಾಲರ್ ಅಳವಡಿಸಿ, ದಟ್ಟ ಅರಣ್ಯಕ್ಕೆ ಬಿಡಲಾಯಿತು.

ಈ ಆನೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ವನ್ಯಜೀವಿ ವಲಯದ ರೈಲ್ವೆ ಬ್ಯಾರಿಕೇಡ್ ಹಾಗೂ ಸ್ಟೀಲ್ ರೋಪ್ ಬ್ಯಾರಿಕೇಡ್ ಅನ್ನು ಮುರಿದು ದಾಟಿ ಅಗಸನಹುಂಡಿ ಶಾಖೆಯ ಗಡಿಭಾಗದ ರೈತರ ಜಮೀನಿಗೆ ದಾಳಿ ನಡೆಸಿ, ಬೆಳೆ ನಾಶ ಪಡಿಸುತ್ತಿತ್ತು. ವೀರನಹೊಸಹಳ್ಳಿ ವನ್ಯಜೀವಿ ವಲಯ ಅರಣ್ಯಾಧಿಕಾರಿ ಪಿ.ಎಸ್. ಅಭಿಷೇಕ್, ಡಿಆರ್‌ಎಫ್ ಚಂದ್ರೇಶ್, ಪಶು ವೈದ್ಯಾಧಿಕಾರಿ ಡಾ.ರಮೇಶ್, ಸಿಬ್ಬಂದಿ ಹರೀಶ್, ಅರಣ್ಯ ಗಸ್ತು ಪಾಲಕರು ಸೇರಿ 70 ರಿಂದ 80 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕೂಗಲೂರು ಗ್ರಾಮದ ದಂಪತಿ ನಾಪತ್ತೆ



ಚಿನ್ನಪ್ಪಾಜಿ ಭವಾನಿ

ನಂಜನಗೂಡು: ತಾಲೂಕಿನ ಕೂಗಲೂರು ಗ್ರಾಮದ ದಂಪತಿ ಕಾಣೆಯಾಗಿದ್ದು, ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದ ಪತಿ ಚಿನ್ನಪ್ಪಾಜಿ ಹಾಗೂ (45) ಪತ್ನಿ ಭವಾನಿ (40) ನಾಪತ್ತೆಯಾದ ದಂಪತಿ. ಈ ಸಂಬಂಧ ಪುತ್ರ ಕಾರ್ತಿಕ್ ತಂದೆ–ತಾಯಿಯನ್ನು ಹುಡುಕಿಕೊಡುವಂತೆ ಪೊಲೀಸರಿಗೆ ದೂರು ನೀಡಿದ್ದಾನೆ.

ಇವರ ಮಗಳು ನಿಸರ್ಗ ಅದೇ ಗ್ರಾಮದ ಮಹದೇವಸ್ವಾಮಿ ಎಂಬುವವರೊಂದಿಗೆ ಪ್ರೇಮ ವಿವಾಹವಾಗಿದ್ದ ಕಾರಣ ಮನನೊಂದಿದ್ದ ತಾಯಿ ಭವಾನಿ ಅ.31ರಂದು ಕಾಣೆಯಾಗಿದ್ದಾರೆ. ಪತ್ನಿಯ ಹುಡುಕಾಟದಲ್ಲಿದ್ದ ಪತಿ ಚಿನ್ನಪ್ಪಾಜಿ ಕೂಡ ನ.4ರಂದು ಕಾಣೆಯಾಗಿದ್ದಾರೆ ಎನ್ನಲಾಗಿದೆ. ಇವರ ಸುಳಿವು ಕಂಡಲ್ಲಿ ನಂಜನಗೂಡು ಗ್ರಾಮಾಂತರ ಠಾಣೆಗೆ ತಿಳಿಸುವಂತೆ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿಯ ಹಳ್ಳ ಮುಚ್ಚುವಂತೆ ಆಗ್ರಹಿಸಿ ಪ್ರತಿಭಟನೆ

ಮುಖ್ಯಮಂತ್ರಿ ಕಚೇರಿ ಮುಂದೆ ಧರಣಿ ನಡೆಸುವುದಾಗಿ ತೋಟದಪ್ಪ ಬಸವರಾಜು ಎಚ್ಚರಿಕೆ



ತಿ.ನರಸೀಪುರ, ನ.9–ಕುಡಿಯುವ ನೀರು ಸರಬರಾಜು ಪೂರೈಕೆಯ ಕಾಮಗಾರಿ ವೇಳೆ ತೆಗೆಯಲಾಗಿದ್ದ ಹಳ್ಳ ಮುಚ್ಚಿಸದಿರುವುದರಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಎದುರಿಸುವಂತಾಗಿದ್ದು, ಕೂಡಲೇ ಹಳ್ಳ ಮುಚ್ಚಿಸದಿದ್ದಲ್ಲಿ ಮುಖ್ಯಮಂತ್ರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುವುದಾಗಿ ವರುಣ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು ಎಚ್ಚರಿಸಿದರು.

ಪಟ್ಟಣಕ್ಕೆ ನಿರಂತರ ಕುಡಿಯುವ ನೀರು ಸರಬರಾಜು ಮಾಡಲು ಪಟ್ಟಣದ ಕಾಲೇಜು ರಸ್ತೆಯಲ್ಲಿ ತೆಗೆಯಲಾಗಿರುವ ಹಳ್ಳದ ರಸ್ತೆಯಲ್ಲೇ ಕುಳಿತು ಗುರುವಾರ ಪ್ರತಿಭಟನೆ ನಡೆಸಿದ ತೋಟದಪ್ಪ ಬಸವರಾಜು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ ಕ್ಷೇತ್ರದ ಶಾಸಕರು ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಮಗಾರಿ ಆರಂಭಿಸಿ ವರ್ಷಗಳೇ ಕಳೆಯುತ್ತಾ ಬಂದಿದ್ದರೂ ಕಾಮಗಾರಿ ಪೂರ್ಣಗೊಳಿಸದೆ ಹಳ್ಳಗಳನ್ನು ಮುಚ್ಚಿಸದಿರುವುದರಿಂದ ಸಾರ್ವಜನಿಕರು ಬಿದ್ದು ಸಾವು–ನೋವುಗಳು ಉಂಟಾಗಿವೆ. ಈಗಿದ್ದರೂ ಸಿದ್ದರಾಮಯ್ಯನವರು ಚುನಾವಣೆ ವೇಳೆ ಜನರಿಗೆ ಒಂದು ಮತಕ್ಕೆ 2 ಸಾವಿರ ರೂ. ನೀಡಿ ಗೆದ್ದಿದ್ದೇನೆ ಎಂಬ ಹಮ್ಮಿನಿಂದ ಕ್ಷೇತ್ರ ಹಾಗೂ ಜನರನ್ನು ಉಡಾಫೆಯಿಂದ ನೋಡುತ್ತಿದ್ದಾರೆ. ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ಕ್ಷೇತ್ರದಿಂದ ಆಯ್ಕೆಯಾಗಿ ಮುಖ್ಯಮಂತ್ರಿಯಾಗಿರುವ ಅವರಿಗೆ ಹಳ್ಳ ಮುಚ್ಚಿಸುವಂತಹ ಸಣ್ಣ ಕೆಲಸ ಸಹ ಮಾಡಲು ಸಾಧ್ಯವಾಗುತ್ತಿಲ್ಲ. ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿ ಮುಖ್ಯಂತ್ರಿಯಾಗಿ ಮುಂದುವರೆಯಲಿ. ಇಲ್ಲಿ ಜನಪರ ಕಾಳಜಿ ಇರುವವರು ಗೆದ್ದು ಜನರ ಕಷ್ಟ–ಸುಖ ಕೇಳಲಿ, ಇದಕ್ಕೆ ಮುಖ್ಯಮಂತ್ರಿಗಳು ಅವಕಾಶ ಮಾಡಿಕೊಡಲಿ ಎಂದು ಆಗ್ರಹಿಸಿದರು.

ಅಸಮರ್ಥ ಸರ್ಕಾರ!: ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳಾದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗದಂತಹ ಅಸಮರ್ಥ ಹಾಗೂ ಯೋಗ್ಯತೆ ಇಲ್ಲದ ಸರ್ಕಾರ ಇದಾಗಿದೆ. ಜನರಿಗೆ ಗ್ಯಾರಂಟಿ ಎಂಬ ಮಂಕುಬೂದಿ ಎರಚಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಜನಪರ ಕೆಲಸ ಮಾಡಲು ವಿಫಲವಾಗಿದೆ. ಮುಖ್ಯಮಂತ್ರಿಗಳ ಸ್ವಕ್ಷೇತ್ರ ವರುಣದಲ್ಲಿ ರಸ್ತೆ ಕಾಮಗಾರಿ ಅದ್ವಾನವಾಗಿದೆ. ಮುಖ್ಯಮಂತ್ರಿಯಾಗಿರುವ ನಿಮ್ಮಿಂದ ಸಣ್ಣ ಹಳ್ಳ ಮುಚ್ಚಿಸುವ ಕೆಲಸ ನಿಮ್ಮಿಂದಾಗದ ಮೇಲೆ ನಿಮ್ಮನ್ನು ಆಯ್ಕೆ ಮಾಡಿದ ಮತದಾರ ಯಾರನ್ನು ಪ್ರಶ್ನಿಸಬೇಕು ಎಂದು ಕಿಡಿಕಾರಿದರು. ಕೂಡಲೇ ಕುಡಿಯುವ ನೀರಿನ ಕಾಮಗಾರಿಯನ್ನು ಪೂರ್ಣಗೊಳಿಸಿ ಅಪಾಯಕಾರಿ ಹಳ್ಳಗಳನ್ನು ಮುಚ್ಚಿಸಿ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸದಿದ್ದಲ್ಲಿ ಮುಖ್ಯಮಂತ್ರಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸುವುದಾಗಿ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಸದಸ್ಯ ಕಾರ್ ಮಲ್ಲಪ್ಪ, ಕುಪ್ಪ ಮಹದೇವಯ್ಯ, ಮುದ್ದುಕೃಷ್ಣ ಭಾಗವಹಿಸಿದ್ದರು.

ಭುಗತಗಳ್ಳಿ, ಆಶ್ರಯ ನಿವೇಶನದ ಫಲಾನುಭವಿಗಳು,
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ, ಮೈಸೂರು.

ಮಾನ್ಯ ಫಲಾನುಭವಿಗಳೇ,

ಅದಾಗಿ, ಮೈಸೂರು ಮಹಾನಗರ ಪಾಲಿಕೆಯ ಆಶ್ರಯ ವತಿಯಿಂದ ಈ ಹಿಂದೆ ಅಂದರೆ, 2011–2012 ನೇ ಸಾಲಿನಲ್ಲಿ ಅಂದರೆ ಸುಮಾರು 10 ವರ್ಷಗಳ ಹಿಂದೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಫಲಾನುಭವಿಗಳಿಗೆ ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಭುಗತಗಳ್ಳಿ ಗ್ರಾಮದ ಸರ್ವೆ ನಂ. 170 ರಲ್ಲಿ ಮೈಸೂರು ಮಹಾನಗರ ಪಾಲಿಕೆಯವರು ಆಶ್ರಯ ಯೋಜನೆಯಡಿಯಲ್ಲಿ 20x30 ಅಡಿ ಅಳತೆಯ ನಿವೇಶನಗಳು ಮಂಜೂರಾತಿಯಾಗಿದ್ದು, ಹಕ್ಕುಪತ್ರಗಳು ಹಾಗೂ ಸದರಿ ನಿವೇಶನಗಳ ಖಾತೆಯು ಸಹಾ ಮೈಸೂರು ಮಹಾನಗರ ಪಾಲಿಕೆಯಲ್ಲಿ ಆಯಾ ನಿವೇಶನದಾರರುಗಳ ಹೆಸರಿಗೆ ನೋಂದಣಿ ಸಹಾ ಆಗಿರುವುದು ಸರಿಯಷ್ಟೆ

ಆದರೆ, ಮೈಸೂರು ಮಹಾನಗರ ಪಾಲಿಕೆಯವರು ಈ ದಿವಸದವರೆವಿಗೂ ಆಯಾ ನಿವೇಶನ ಮಂಜೂರಾತಿದಾರರಿಗೆ ಭೌತಿಕವಾಗಿ ನಿವೇಶನವನ್ನು ನೀಡಿರುವುದಿಲ್ಲ ಇದರ ಬಗ್ಗೆ ಕೆಲವು ಫಲಾನುಭವಿಗಳು ನ್ಯಾಯಾಲಯದ ಮೊರೆ ಹೋಗಿದ್ದು, ಅಲ್ಲಿ ಪ್ರಕರಣವು ನಮ್ಮಗಳ ಪರವಾಗಿಯೇ ತೀರ್ಮಾನವಾಗಿದ್ದು, ಡಿಕ್ರಿ ಸಹಾ ಆಗಿರುತ್ತದೆ. ಆದರೆ, ಮೈಸೂರು ಮಹಾನಗರ ಪಾಲಿಕೆಯವರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ. ಈ ಬಗ್ಗೆ ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಕಛೇರಿಗೆ ಮತ್ತು ವಲಯ ಕಛೇರಿಗಳಿಗೆ ಹಾಗೂ ಹಾಲೀ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ. ಜಿ.ಟಿ. ದೇವೇಗೌಡರು ರವರಿಗೂ ಸಹಾ ಈ ಕೆಳಕಂಡ ನಾವುಗಳು ಮನವಿಪತ್ರವನ್ನು ಸಲ್ಲಿಸಿರುತ್ತೇವೆ.

ಈ ಪತ್ರಿಕಾ ಪ್ರಕಟಣೆಯು ಉಳಿದ ಎಲ್ಲಾ ಫಲಾನುಭವಿಗಳ ಒಗ್ಗಟ್ಟಿನ ನಿರೀಕ್ಷೆಗಾಗಿ ಆಗಿರುತ್ತದೆ. ಎಲ್ಲಾ ಫಲಾನುಭವಿಗಳು ತಮ್ಮ ತಮ್ಮ ಬಳಿ ಇರುವ ಹಕ್ಕುಪತ್ರ ಮತ್ತು ಖಾತೆಗಳೊಂದಿಗೆ ಈ ಕೆಳಕಂಡ ನಮ್ಮನ್ನು ಸಂಪರ್ಕಿಸಲು ಕೋರುತ್ತೇವೆ. ಆ ಮೂಲಕ ನಾವುಗಳೆಲ್ಲರೂ ಒಗ್ಗಟ್ಟಾಗಿ ಸೇರಿ ನಮ್ಮ ನಮ್ಮಗಳ ನಿವೇಶನದ ಸ್ವಾಧೀನವನ್ನು ಕಾನೂನು ರೀತ್ಯಾ ಪಡೆದುಕೊಳ್ಳಲು ಎಲ್ಲರೂ ಕೈ ಜೋಡಿಸಬೇಕಾಗಿ ಈ ಪ್ರಕಟಣೆ ಮೂಲಕ ವಿನಂತಿಸಿಕೊಳ್ಳುತ್ತೇವೆ.

ಸಂಪರ್ಕಿಸಿ: 9986730323, 9739297699